ಶ್ರೀ ಮೈಕೇಲ್ ಫರ್ನಾಂಡಿಸ್.—ಸ್ವಾಮಿ ನನ್ನದೊಂದು ವಿಚಾರ ಇದೆ. ಪೋಲೀಸರು ಹೋಟೆಲ್ ಕಾರ್ಮಿಕರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಈ ಬಗ್ಗೆ ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೇನೆ.

ಅಧ್ಯಕ್ಷರು.—ಇವತ್ತು ಒಂದು ಗಂಟೆ ಮುಂಚಿತವಾಗಿ ಇದು ಬಂದಿರುತ್ತದೆ. ಇದನ್ನು ನಾನು ನೋಡಿಸುತ್ತೇನೆ. ಮಾನ್ಯ ಸದಸ್ಯರಾದ ಪಂಪಾಪತಿಯುವರು ಹೇಳಿದ ವಿಚಾರದಲ್ಲಿ ನಾವು ರಿಪೋರ್ಟ್ ಕೇಳಿದ್ದೇವೆ. ಅದು ಬಂದಿದೆಯೋ ಇಲ್ಲವೋ ನೋಡಿಸುತ್ತೇನೆ.

ಶ್ರೀಮತಿ ಎಸ್. ಪ್ರಮೀಳ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಗಂಗಾಧರನ್ ಅವರು ಎತ್ತಿರತಕ್ಕಂಥ ವಿಚಾರದಲ್ಲಿ ನಾನು ಅದರ ಬಗ್ಗೆ ನೋಟೀಸ್ ಕೊಟ್ಟಿಲ್ಲ, ಆದರೂ ಒಂದು ವಿಚಾರ ಹೇಳುತ್ತೇನೆ. ಆ ಹಾಸ್ಟಲ್‌ನಲ್ಲಿರತಕ್ಕಂಥ ಹೆಣ್ಣುಮಕ್ಕಳಿಗೆ ಎಲೆಕ್ಟ್ರಿಸಿಟಿ ಕಟ್ ಮಾಡಿ ನೀರು ಇಲ್ಲದೇ ತುಂಬಾ ತೊಂದರೆಯಾಗುತ್ತಾ ಇದೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಸದಸ್ಯರು ಹೇಳಿದಹಾಗೆ ಆ ಮಕ್ಕಳಿಗೆ ನೀರಿನ ವ್ಯವಸ್ಥೆ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ. ತಾವು ಅಪ್ಪಣೆ ಕೊಟ್ಟರೆ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಆ ವಿದ್ಯಾರ್ಥಿಗಳು ನನ್ನ ಹತ್ತಿರ ಬಂದರು. ನಾನು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರನ್ನು ನೋಡಿ ಎಂದು ಹೇಳಿದೆ. ಅವರು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರನ್ನು ಕಂಡರು. ಅವರು ಅರ್ಜೆಂಟಾಗಿ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್‌ರವರಿಗೆ ಫೋನ್‌ಮಾಡಿ ನೀರಿನ ವ್ಯವಸ್ಥೆ ಮತ್ತು ಲೈಟ್ ವ್ಯವಸ್ಥೆ ಮಾಡಿಸುವುದಕ್ಕೆ ಹೇಳಿದರು. ಅವರೆಲ್ಲಾ ಮತ್ತೆ ನನ್ನ ಹತ್ತಿರ ಬಂದಮೇಲೆ ನಾನೂ ಕೂಡ ಪತ್ರ ಬರೆದು ತಿಳಿಸಿದ್ದೇನೆ. ನಾನು ಪತ್ರ ಬರೆದು ೮ ದಿವಸವಾಯಿತು ಇನ್ನೂ ಯಾವುದೇ ವ್ಯವಸ್ಥೆ ಮಾಡಿಲ್ಲ.

ಅಧ್ಯಕ್ಷರು.—ಬೇಗ ಅಲ್ಲಿ ನೀರಿನ ವ್ಯವಸ್ಥೆ ಮಾಡಿಸಿ.

SRI G. B. SHANKARA RAO.—Sir, Electricity has been restored and we have requested the Corporation authorities to supply water also.

ಶ್ರೀ ಎಚ್. ಗಂಗಾಧರನ್.—ಅವರೆಲ್ಲಾ ಟ್ರೆಸ್‌ಪಾಸರ್ಸ್ ಎಂದು ಹೇಳಿ ಅವರನ್ನು ಹೊರಕ್ಕೆ ಹಾಕುತ್ತೇವೆ ಎಂದು ಹೆದರಿಸುತ್ತಿದ್ದಾರೆ. Let them not be disturbed.

SRI G. B. SHANKARA RAO.—I will make a statement. The inmates are still there. They are not forced out.

SRI S R. BOMMAI.—They are still there. ನೀವು ಬೇಗ ಆ ಬಗ್ಗೆ ವ್ಯವಸ್ಥೆ ಮಾಡಿಸಿ.

FINANCIAL BUSINESS

Discussion on

VOTING OF DEMANDS FOR GRANTS FOR 1982-83

DEMAND No. 54

SRI H. C SRIKANTAIAH (Minister for Co-operation).—Sir on the recommendation of the Governor, I beg to move:

"That a sum not exceeding Rs. 13,42.28,000 on Revenue Account and Rs. 20,42,30,000 on Capital Account inclusive of the sum granted 'on account' be granted to the Govern-

ment to defray the charges which will come in course of payment during the financial year ending 31st day of March 1983 in respect of "Co-operation (Excluding Regulated Markets)"

DEMAND No. 55

SRI SUDHEENDRA RAO KASBE (Minister of State for Marketing and Muzrai): —Sir, on the recommendation of the Governor, I beg to move:

> "That a sum not exceeding Rs 5,24,00,000 on Revenue Account and Rs. 4,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in in respect of "Regulated Market"

The question was proposed.

MR. SPEAKER.—Both the Demands are before the House for discussion. Hon. Member Sri K. Rambhat will initiate discussion.

† ಶ್ರೀ ಕೆ. ರಾಮಭಟ್ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರಿ ಇಲಾಖೆಯ ಮಂತ್ರಿಯವರು ಅವರ ಇಲಾಖೆಯ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ರೆವಿನ್ಯೂ ಅಕೌಂಟ್‌ನಲ್ಲಿ ೧೩,೪೨.೨೮,೦೦೦ ರೂಪಾಯಿಗಳನ್ನು ಮತ್ತು ಕ್ಯಾಪಿಟಲ್ ಅಕೌಂಟ್‌ನಲ್ಲಿ ೨೦ ಕೋಟಿ ೪೨ ಲಕ್ಷ ೩೦ ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ನಾನು ಈ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಮುಂಚೆ ಒಂದು ಸಂಗತಿಯನ್ನು ಇಲ್ಲಿ ಹೇಳಬೇಕಾಗುತ್ತದೆ. ನಾನು ಯಾವುದೇ ಸಹಕಾರ ಸಂಘದ ಆಡಳಿತ ವರ್ಗದಲ್ಲಿ ಇದ್ದುಕೊಂಡು ಅದರ ಒಳಗೆ ಮತ್ತು ಹೊರಗೆ ಕೆಲಸ ಮಾಡಿದಂತಹ ಅನುಭವ ನನಗೆ ಇಷ್ಟರವರೆಗೆ ಇಲ್ಲ. ಆದಕಾರಣ ನಾನು ಈ ಬಗ್ಗೆ ಏನೇನು ಓದಿ ತಿಳಿದುಕೊಂಡಿದ್ದೇನೋ ಮತ್ತು ಕಾಯಿದೆ ಕಾನೂನುಗಳಿಂದ ಏನೇನು ಓದಿ ಅನುಭವ ಮಾಡಿಕೊಂಡಿದ್ದೇನೆ ಅಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಅವರು ಕೊಟ್ಟಿರತಕ್ಕಂಥ ವಾರ್ಷಿಕ ವರದಿಯಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು ೨೨ ಸಾವಿರ ಸೊಸೈಟಿಗಳು ಇವೆಯೆಂದು ಹೇಳಿದ್ದಾರೆ, ಮತ್ತು ಇವುಗಳಲ್ಲಿ ೮೨.೨೯ ಲಕ್ಷದಷ್ಟು ಮೆಂಬರ್‌ಷಿಪ್ ಆಗಿದೆಯೆಂದೂ ಸಹ ಹೇಳಿದ್ದಾರೆ. ಕಳೆದ ವರ್ಷದ ತಮ್ಮ ಭಾಷಣದಲ್ಲಿ ಮಾನ್ಯ ಸಹಕಾರ ಸಚಿವರು ಒಟ್ಟು ೨೨,೪೧೭ ಸೊಸೈಟಿಗಳು ಇವೆ ಎಂದು ಹೇಳಿದ್ದಾರೆ. ಈಗ ಕೊಟ್ಟಿರತಕ್ಕಂಥ ಅಂಕಿ ಅಂಶದ ಪ್ರಕಾರ ಅದು ೨೨ ಸಾವಿರಕ್ಕೆ ಇಳಿದಿರುವ ಚಿತ್ರ ನಮಗೆ ಕಾಣುತ್ತಿದೆ. ಇದು ಈ ವರ್ಷ ಕಡಿಮೆಯಾಗಿದೆ ಇದು ಏತಕ್ಕೆ ಕಡಿಮೆಯಾಯಿತು ? ಇದನ್ನು ನಾವು ವಿಮರ್ಶೆ ಮಾಡಿನೋಡಬೇಕಾಗಿದೆ. ಆಮೇಲೆ ಟೋಟಲ್ ಟರ್ನ್-ಓವರ್ ೧೫೦೦ ಕೋಟಿ ರೂಪಾಯಿಗಳು ಮತ್ತು ಟೋಟಲ್ ಡಿಪಾಸಿಟ್ಸ್ ೫೦೦ ಕೋಟಿ ರೂಪಾಯಿಗಳು ಎಂದು ಅವರು ವರದಿಯಲ್ಲಿ ಹೇಳಿದ್ದಾರೆ. ನಾನು ಈಗ ಈ ಒಂದು ಅಂಕಿಸಂಖ್ಯೆಗಳ ಗೊಂದಲಕ್ಕೆ ಹೋಗುವುದಿಲ್ಲ ಆದರೆ ನಮ್ಮ ಒಂದು ತಿಳಿವಳಿಕೆಗೋಸ್ಕರ ಅವರು ಈ ಸಂಗತಿಗಳನ್ನು ಈ ಒಂದು ವರದಿಯಲ್ಲಿ ಕೊಟ್ಟಿದ್ದಾರೆ. ಇನ್ನು ಈ ಸಹಕಾರ ತತ್ವದ ಆಧಾರದ ಮೇಲೆ ನಾನು ಮಾತನಾಡುವುದಾದರೆ, 'ಜನಗಳಿಂದ, ಜನಗಳಿಗಾಗಿ, ಜನಗಳಿಗೋಸ್ಕರ' ಎನ್ನತಕ್ಕಂಥ ಸಿದ್ಧಾಂತ ಏನಿದೆ ಅದರ ತಳಹದಿಯ ಮೇಲೆ ಈ ಎಲ್ಲಾ ಸಹಕಾರ ಸಂಘಗಳು ನಡೆಯುತ್ತಿವೆ ಇವತ್ತು ನಮ್ಮ ಸಮಾಜದಲ್ಲಿ ಜನರೆಲ್ಲಾ ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಸಹಕಾರ ತತ್ವದಲ್ಲಿ

† Indicates that remarks or speeches have not been revised by the member concerned.

ಸಂಪೂರ್ಣ ಪಾಲುದಾರರಾಗಿ ಅದರಿಂದ ಪ್ರಯೋಜನವನ್ನು ಹೊಂದುತ್ತಿರುವಂತಹ ದೃಶ್ಯವನ್ನು ನಾವು ನಮ್ಮ ರಾಜ್ಯದಲ್ಲಿ ನೋಡುತ್ತಿದ್ದೇವೆ. ಇಡೀ ಜನಜೀವನದಲ್ಲಿ ಈ ಸಹಕಾರ ತತ್ವ ವ್ಯಾಪಕವಾಗಿ ಬೆಳೆದಿರುವಂತಹ ಸುಂದರವಾದ ದೃಶ್ಯವನ್ನು ನಾವು ಕಾಣುತ್ತಿದ್ದೇವೆ. ಇಷ್ಟೊಂದು ವ್ಯಾಪಕವಾಗಿ ಬೆಳೆದಿರುವಂತಹ ಸಹಕಾರಿ ಸಂಸ್ಥೆಗಳಿಗೆ ಕೊಟ್ಟಿರುವ ಹಣ ಎಷ್ಟು? ರೈತರ ಮತ್ತು ಇತರ ಹಿಂದುಳಿದ ವರ್ಗಗಳ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸತಕ್ಕಂಥ ಈ ಸಂಸ್ಥೆಗಳಿಗೆ ೩೩.೮೪ ೫೮,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ನಾನಯ್ಯನವರು ಕಳೆದ ಬಡ್ಜೆಟ್ ಭಾಷಣದ ಮೇಲೆ ಮಾತನಾಡುವಾಗಲೂ ಸಹ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆಗ ಮಾನ್ಯ ಸಹಕಾರ ಮಂತ್ರಿಗಳು ೧೯ ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಇಟ್ಟಿದ್ದೇವೆ ಎಂದು ಹೇಳಿದ್ದರು. ಅದಕ್ಕೆ ಉತ್ತರವಾಗಿ ಆ ಹಣ ಏನೇನು ಸಾಲದು ಎನ್ನುವ ಮಾತನ್ನು ಸದಸ್ಯರುಗಳು ಸಹ ಹೇಳಿದ್ದಾರೆ, ಅದೇ ಸಂದರ್ಭದಲ್ಲಿ ಹಣವನ್ನು ೩೦ ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕು ಎನ್ನುವ ಒಂದು ಸಲಹೆಯನ್ನು ಸಹ ಅವರಿಗೆ ಕೊಟ್ಟಿದ್ದರು. ಆದರೆ ತಾವು ಈ ವರ್ಷ ಏನು ಮಾಡಿದ್ದೀರಿ ಎಂದರೆ ಇದನ್ನು ೩೩ ಕೋಟಿ ರೂಪಾಯಿಗಳಿಗೆ ತಂದು ಇಟ್ಟಿದ್ದೀರಿ. ಇವೆಲ್ಲವನ್ನೂ ಕೂಡ ನಾವು ಪರಿಶೀಲನೆ ಮಾಡಿದಾಗ ಕನಿಷ್ಟ ಪಕ್ಷ ೫೦ ಕೋಟಿ ರೂಪಾಯಿಗಳಾದರೂ ಇದಕ್ಕೆ ಇಟ್ಟಿರಬೇಕೆಂದು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಆದರೆ ಮಾನ್ಯ ಅರ್ಥ ಮಂತ್ರಿಗಳು ತಮ್ಮ ವಾರ್ಷಿಕ ವರದಿಯಲ್ಲಿ ಪುಟ ೪೬ರಲ್ಲಿ ಏನು ಹೇಳಿದ್ದಾರೆ ಎಂದರೆ, ಅದು ಈ ರೀತಿ ಇದೆ.

> "Public distribution system of consumer goods in rural areas.
>
> The major drawback in the implementation of the scheme is that the State wholesalers, viz.. the Karnataka Co-operative Consumers Federation, is not provided with any financial assistance either by the State Government or the National Co-operative Developmental Corporation for implementation of the scheme".

ಸರ್ಕಾರದವರು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಹಣವನ್ನು ಕೊಡಲಿಲ್ಲ ಎಂದು ಹೇಳಬಹುದಾಗಿತ್ತು. ಮಾನ್ಯ ಅರ್ಥ ಸಚಿವರು ತಮ್ಮ ಪಕ್ಕದಲ್ಲಿಯೇ ಕುಳಿತುಕೊಂಡಿದ್ದಾರೆ. ಅವರಿಗೆ ಮಾನ್ಯ ಸಹಕಾರ ಮಂತ್ರಿಗಳು ಈ ವಿಷಯವನ್ನು ಹೇಳಬಹುದಾಗಿತ್ತು, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಮಾನ್ಯ ಅರ್ಥ ಸಚಿವರು ಕೊಟ್ಟಿರುವಂತಹ ಹಣ ಸಾಲದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಖಾತೆಯಲ್ಲಿ ಹಣದ ಒತ್ತಡ ಜಾಸ್ತಿ ಬಂದರೂ ಕೂಡ ಮಾನ್ಯ ಮಂತ್ರಿಗಳು ಬೇಕಾದಷ್ಟು ಹಣವನ್ನು ಒದಗಿಸಿಕೊಳ್ಳಲಿಲ್ಲ, ಇದಕ್ಕೆ ಏನು ಕಾರಣ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಈಗ ನಮ್ಮ ಕರ್ನಾಟಕ ರಾಜ್ಯದ ಸಹಕಾರಿ ಚಳುವಳಿಯಲ್ಲಿ ಒಂದು ರೀತಿಯ ಆಂಧೋಲನ ನಡೆಯುತ್ತಿದೆ. ಈ ಒಂದು ಆಂಧೋಲನ ನಡೆಯುತ್ತಿರುವಂತಹ ಸ್ಪಷ್ಟ ಚಿತ್ರ ನಮ್ಮ ಮುಂದೆ ಎದ್ದು ಕಾಣುತ್ತಿದೆ. ಆದರೂ ಇದರ ಒಂದು ಸ್ಪಷ್ಟ ಚಿತ್ರವನ್ನು ಈ ಸದನದ ಮುಂದೆ ಇಡಲು ಸಾಧ್ಯವಾಗಲಿಲ್ಲ. ಎಷ್ಟೋ ವರ್ಷಗಳಿಂದ ಈ ಸಹಕಾರಿ ಸಂಘಗಳಲ್ಲಿ ಒಂದು ರೀತಿಯಲ್ಲಿ ಚಳುವಳಿ ನಡೆಯುತ್ತಿದೆ. ಆದರೆ ನಾವು ಏನು ಸಾಧನೆ ಮಾಡಿದ್ದೇವೆ ಎಂಬುದನ್ನು ನೋಡಬೇಕಾಗಿದೆ. ಒಬ್ಬ ವ್ಯಕ್ತಿ ಅಥವಾ ಒಬ್ಬ ರೈತ ಒಂದು ವರ್ಷ ತಾನು ಈ ಸಹಕಾರ ಸಂಘಗಳ ಮುಖಾಂತರ ಸಾಲವನ್ನು ತೆಗೆದುಕೊಂಡರೆ ನಂತರ ಎರಡನೆಯ ವರ್ಷಕ್ಕೂ ಆತನು ಸಾಲವನ್ನು ತೆಗೆದುಕೊಂಡು ಜೀವನ ಮಾಡುವಂತಹ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ಒಂದು ಸಾರಿ ತಮ್ಮ ಸಹಕಾರಿ ಸಂಘದಲ್ಲಿ ಸಾಲವನ್ನು ತೆಗೆದುಕೊಂಡ ರೈತನು ಪ್ರತಿ ವರ್ಷವೂ ಕೂಡ ಸಾಲವನ್ನು ತೆಗೆದುಕೊಂಡು ಜೀವನವನ್ನು ಸಾಗಿಸುತ್ತಿದ್ದಾನೆಯೇ ಎನ್ನುವಂತಹ ಅನುಮಾನ ನನಗೆ ಬರುತ್ತಿದೆ. ಆತನು ಒಂದು ಸಾರಿ ಸಾಲವನ್ನು ತೆಗೆದುಕೊಂಡು ನಂತರ ಎರಡನೆಯ ವರ್ಷವಾದರೂ ಸ್ವತಂತ್ರಜೀವಿಯಾಗಿ ಬದುಕುವುದಕ್ಕೆ ನಿಮ್ಮ ಸಹಕಾರಿ ಸಂಘಗಳು ಸಹಾಯ ಮಾಡಬೇಕೆಂದು ಮತ್ತು ಅಂತಹ ಒಂದು

ಪದ್ಧತಿಯನ್ನು ಅನುಸರಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಬಗ್ಗೆ ಎಷ್ಟೋ ವರ್ಷಗಳಿಂದ ಸತತವಾಗಿ ಪ್ರಯತ್ನ ಪಟ್ಟರೂ ಕೂಡ ಈ ಒಂದು ಸಹಕಾರ ಸಂಘಗಳ ಸ್ಪಷ್ಟ ಚಿತ್ರವನ್ನು ತಾವು ಕೊಡುವುದಕ್ಕೆ ಆಗಲಿಲ್ಲ. ಅದನ್ನು ಮಾನ್ಯ ಮಂತ್ರಿಗಳು ಇನ್ನು ಮುಂದೆಯಾದರೂ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೃಷಿಕರ ಬಗ್ಗೆ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಾದರೆ ೧೯೮೧–೮೨ರಲ್ಲಿ ಇವರಿಗೆ ಎಷ್ಟು ಹಣವನ್ನು ಒದಗಿಸಿದ್ದಾರೆ ಎನ್ನುವಂತಹ ಅಂಕಿಅಂಶ ತಾವು ವರದಿಯಲ್ಲಿ ಕೊಟ್ಟಿಲ್ಲ. ಅದನ್ನು ತಾವು ಕೊಟ್ಟಿದ್ದರೆ ಅದು ನಮಗೆ ಕಾಣುತ್ತಿತ್ತು. ಆದರೆ ಅದನ್ನು ನಾವು ಲೆಕ್ಕಾಚಾರ ಮಾಡಿ ಹೇಳುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಕೃಷಿಕರಿಗೆ ಎಷ್ಟು ಹಣವನ್ನು ಒದಗಿಸಿದ್ದಾರೆ ಎನ್ನುವಂತಹ ಒಂದು ವರದಿಯನ್ನು ನಮಗೆ ಕೊಡಬೇಕಾಗಿದೆ. ಆದರೆ ನಮ್ಮ ಮಾನ್ಯ ಸದಸ್ಯರುಗಳು ಮಾತನಾಡುವಾಗ ಅವರು ಹೇಳುವುದನ್ನು ನಾನು ಕೇಳಿದ್ದೇನೆ. ಅದರ ಪ್ರಕಾರ ಕೃಷಿಕರಿಗೆ ಕೊಡುವಂತಹ ಹಣ ದಿನೇ ದಿನೇ ಕಡಿಮೆಯಾಗುತ್ತಿದೆ ಇದಕ್ಕೆ ಕಾರಣವಾದರೂ ಏನು ? ನನಗೆ ತಿಳಿದ ಮಟ್ಟಿಗೆ ಎರಡು ಕಾರಣಗಳು ಇರಬಹುದು. ಒಂದನೆಯದಾಗಿ ಕೃಷಿಕನಿಗೆ ಸಾಲದ ಅವಶ್ಯಕತೆ ಕಡಿಮೆಯಾಗಿದೆಯೋ ? ಅಥವಾ ಎರಡನೆಯದಾಗಿ ಹಣದ ಕೊರತೆಯಿಂದಾಗಿ ಏನಾದರೂ ತಾವು ಅವರಿಗೆ ಬೇಕಾದಂತಹ ಸಾಲವನ್ನು ಒದಗಿಸಿಕೊಡುತ್ತಿಲ್ಲವೇ ? ಈ ಎರಡು ವಿಷಯಗಳಿಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಕೃಷಿಕನಿಗೆ ಸರ್ಕಾರದ ಸಹಕಾರ ಸಂಘಗಳಿಂದ ವರ್ಷಕ್ಕೆ ಎಷ್ಟು ಹಣವನ್ನು ಒದಗಿಸಿಕೊಟ್ಟಿದೀರಿ ? ಮತ್ತೇ ಕೃಷಿಕನಿಗೆ ಸಾಲದ ಅವಶ್ಯಕತೆ ಇಲ್ಲದೆ ಇರುವ ಕಾರಣ ಆತನು ಸಾಲವನ್ನು ತೆಗೆದುಕೊಳ್ಳುತ್ತಿಲ್ಲವೇ ಎಂಬುದು ತಾವು ದಯವಿಟ್ಟು ತಿಳಿಸಬೇಕು. ಇಲ್ಲವೇ ತಮ್ಮಲ್ಲಿ ಏನಾದರೂ ಹಣದ ಕೊರತೆ ಇದೆಯೋ? ಆದರೆ ಮಾನ್ಯ ಮಂತ್ರಿಗಳು ಕಳೆದ ಸಾಲಿನಲ್ಲಿ ಉತ್ತರ ಕೊಡುವಾಗ ಹೇಳಿದರು ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ಎಲ್ಲಾ ಕೃಷಿ ಕಾರ್ಮಿಕನ ನ್ಯೂನ್ಯತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಕೆಲವು ಅವಶ್ಯಕವಾದ ಕಾಯ್ದೆಗಳನ್ನು ಸಹ ತಿದ್ದುಪಡಿ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಈ ಸ್ಥಾನಕ್ಕೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಶ್ರೀಕಂಠಯ್ಯನವರು ಬಂದಿದ್ದಾರೆ. ಇದರ ಬಗ್ಗೆ ಸರ್ಕಾರದವರೇ ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ತಮ್ಮ ವರದಿಯನ್ನು ಸಹ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದ್ದಾರೆ. ಇದು ಏನಾದರೂ ತಮ್ಮ ಗಮನಕ್ಕೆ ಬಂದಿದೆಯೋ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಇದುವರೆವಿಗೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಸಮಿತಿಯವರು ವರದಿಯನ್ನು ಸಲ್ಲಿಸಿದರೂ ಕೂಡ ತಾವು ಯಾವ ವಿಧವಾದ ಮುಂಜಾಗ್ರತಾ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸಮಿತಿಯವರು ಸಲ್ಲಿಸಿರುವ ವರದಿಯನ್ನು ಕೂಡಲೇ ಅನುಷ್ಠಾನಕ್ಕೆ ತರಬೇಕು ಎಂದು.

ಇನ್ನು ಸಹಕಾರ ಸಂಘಗಳ ಚುನಾವಣೆಗಳನ್ನು ವರ್ಷಕ್ಕೆ ಎರಡೆರಡು ಭಾರಿ ಮುಂದಕ್ಕೆ ಹಾಕಿ ಕೊಂಡು ಕಾಲ ಕಳೆಯುತ್ತಿದ್ದೀರಿ. ತಾವು ಈ ರೀತಿಯಾಗಿ ಮಾಡುತ್ತಿರುವುದರಿಂದ ಈ ಸಹಕಾರ ಸಂಘ ಸಂಸ್ಥೆಗಳ ಮೂಲ ಭೂತ ಹಕ್ಕುಗಳಿಗೆ ಧಕ್ಕೆಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಚುನಾವಣೆಗಳನ್ನು ಎರಡು ಭಾರಿ ಮುಂದಕ್ಕೆ ಹಾಕಿಕೊಂಡು ಹೋಗಲು ಕಾರಣ ವೇನು ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಚುನಾವಣೆಗಳು ನಡೆಯುತ್ತವೆ ಎಂದು ಹೇಳಿ ಪ್ರತಿಯೊಂದು ಸಹಕಾರಿ ಸಂಘಗಳಲ್ಲಿ ಹಣವನ್ನು ಖರ್ಚು ಮಾಡಿ ನೋಟೀಸ್‌ಗಳನ್ನು ಮುದ್ರಿಸಿ ಸದಸ್ಯರಿಗೆ ಹಂಚಿಕೆ ಮಾಡಿದ್ದಾರೆ. ಈ ನೋಟೀಸ್‌ಗಳನ್ನು ಮುದ್ರಣ ಮಾಡಲು ರಾಜ್ಯದಲ್ಲಿ ಎಷ್ಟು ಹಣ ಖರ್ಚಾಗಿರಬಹುದು.? ಇದಕ್ಕೆ ಸರ್ಕಾರದವರು ಹೊಣೆಗಾರರಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ದಂಡವನ್ನು ಸರ್ಕಾರದವರೇ ಕೊಡಬೇಕು ತಾವು ರೈತರ ಮೇಲೆ ಇದನ್ನು ಹಾಕುವುದು ಬೇಡ. ಇದಕ್ಕೆ ತಾವೇ ಹೊಣೆಗಾರರು ಬೇರೆಯವರನ್ನು ಹೊಣೆಗಾರರನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ನಿರ್ದಿಷ್ಟವಾಗಿ ಯಾವಾಗ ಚುನಾವಣೆಗಳನ್ನು ಮಾಡುತ್ತಾರೆ ಎಂಬುದನ್ನು ಹೇಳಬೇಕು. ಮತ್ತೇ ತಾವು ಹೊಸದಾಗಿ ಕೆಲವು ಅಧಿಕಾರಗಳನು

ಸೆಕ್ರೆಟರಿಗಳಿಗೆ ಕೊಟ್ಟಿದ್ದೀರಿ. ಇದರಿಂದ ಏನಾಗಿದೆ ಎಂದರೆ ಪಂಚಾಯಿತಿ ಬೋರ್ಡ್ ಅಧ್ಯಕ್ಷರುಗಳು ಅವರಿಗೆ ಬೇಕಾದಂತಹ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರನ್ನು ಕೇಳಿದರೆ, ಅದು ರೆವಿನ್ಯೂ ಇಲಾಖೆಯವರಿಗೆ ಸಂಬಂಧಪಟ್ಟ ವಿಷಯವೆಂದು ಹೇಳುತ್ತಾರೆ. ಆ ಸೆಕ್ರೆಟರಿಗಳ ಮೇಲೆ ಯಾವುದೇ ಒಂದು ವಿಧವಾದ ಹಿಡಿತವಿಲ್ಲದಿದ್ದರೆ ಅವರು ನಿರಂಕುಶವಾಗಿ ಕೆಲಸ ಮಾಡುವಂತಹ ಅವಕಾಶ ಪ್ರಾಪ್ತವಾಗುತ್ತದೆ. ಇದು ಒಳ್ಳೆಯದೇ? ಉದಾಹರಣೆಗೆ ಹೇಳುವುದಾದರೆ, "ವಿಠಲ" ಎಂಬ ಊರಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ಇತ್ತು. ಆ ಸೊಸೈಟಿಯಲ್ಲಿ ಸೆಕ್ರೆಟರಿ ತುಂಬಾ ಹಣ ತಿಂದು ಹಾಕಿದ್ದ. ಅವನು ತಿಂದು ಹಾಕಿದ ನಂತರ ಹೊಸ ಆಡಳಿತಮಂಡಲಿ ಬಂತು, ಅವರಿಗೆ ಗೊತ್ತಾಯಿತು. ಅವರು ಏನು ಮಾಡಿದರು ಎಂದರೆ, ಅವನನ್ನು ತೆಗೆದುಹಾಕಬೇಕು ಎಂದು ನಿರ್ಣಯಮಾಡಿ, ಷೋಕಾಸ್ ನೋಟೀಸ್ ಕೊಟ್ಟು ಸಸ್ಪೆಂಡ್ ಮಾಡಿದರು. ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಾಗಿದ್ದರೆ ಕಾಮನ್ ಕೇಡರ್ ಅಥಾರಿಟಿ ಆಧಾರದ ಮೇಲೆ ಅವರು ತೆಗೆದುಕೊಳ್ಳಬೇಕು. ಹೈಕೋರ್ಟಿಗೆ ಬಂದರು. ಹೈಕೋರ್ಟಿಗೆ ಬಂದ ಹಾಗೆಯೇ ಆಕ್ಷನ್ ತೆಗೆದುಕೊಳ್ಳುವ ಯಾವುದೇ ಅಧಿಕಾರ ಇಲ್ಲ ನಮ್ಮನ್ನು ತೆಗೆಯಲಿಕ್ಕೆ ನಮಗೆ ಅನ್ವಯವಾಗುವುದಿಲ್ಲ ಎಂದು ಅವರು ಸ್ಟೇ ತಂದರು. ಆ ಮೇಲೆ ಈ ಆಡಳಿತ ಮಂಡಲಿಯವರು ಹೈಕೋರ್ಟಿಗೆ ಹೋಗಿ ಬೇರೆಯಾದಂಥ ಕಾಮನ್ ಕೇಡರ್ ಅಥಾರಿಟಿಯಿಂದ ಸ್ಟೇ ತೆಗೆದುಕೊಂಡು ಬಂದು ಅವನ ಮೇಲೆ ಕ್ರಮ ಮುಂದುವರಿಸುವಂಥ ಅವಕಾಶ ದೊರಕಿಸಿಕೊಂಡರು. ಇದರ ಪರಿಣಾಮ ಏನಾಯಿತು ಅಂದರೆ, ಒಂದು ಕಡೆ ಇದರ ಮೇಲೆ ಹತೋಟಿ ಇರುವಂಥ ಸರ್ಕಾರ ಯಾವಾಗಲೂ ನಿಧಾನವಾಗಿ ಕೆಲಸಗಳನ್ನು ಮುಂದುವರಿಸುವ ಸಂದರ್ಭ ಅಲ್ಲಿ ನೇರವಾಗಿ ಸಂಪರ್ಕ ಬರುವಂಥ ಆಡಳಿತ ಮಂಡಲಿಗೆ ಇದರ ಮೇಲೆ ಹತೋಟಿ ಇಲ್ಲ ಎನ್ನುವುದಾದರೆ ನಾನು ಹೇಳುತ್ತೇನೆ. ಇನ್ನು ಮುಂದೆ ಯಾವುದೇ ಕೋ-ಆಪರೇಟೀವ್ ಸಂಸ್ಥೆಗಳಲ್ಲಿ ಆಡಳಿತ ಮಂಡಲಿ ಸಮರ್ಪಕವಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದಂಥ ಸ್ಥಿತಿಗೆ ಬರುತ್ತದೆ. ಅದನ್ನು ತಾವು ನೆನಪಿನಲ್ಲಿಟ್ಟು ಕೊಂಡರೆ ಸಾಕು.

ಇನ್ನು ಅಮಾಲ್ಗಮೇಷನ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ವಿವರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ೭೨೪೭ ಸೊಸೈಟಿಗಳಲ್ಲಿ ೧೪೬೫ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡದೆ ಬಿಟ್ಟರು. ೮೫೩ನ್ನು ಒಟ್ಟುಮಾಡಿ ೨೨೫೬ ಸಂಖ್ಯೆಗೆ ಇಳಿಸಿದರು ಇದಕ್ಕೆ ಅವರು ಏನು ಹೇಳುತ್ತಾರೆ ಎಂದರೆ, ಕೆಲವು ಸೊಸೈಟಿಗಳು ಸರಿಯಾಗಿ ನಡೆಯುತ್ತಾ ಇಲ್ಲ, ಒಳ್ಳೆಯ ರೀತಿಯಲ್ಲಿ ನಡೆಯುವುದನ್ನು, ಇದನ್ನು—ಇವೆರಡನ್ನೂ ಜೊತೆಮಾಡಿ ಒಳ್ಳೆಯದು ಮಾಡುತ್ತೇವೆ ಎನ್ನುವ ಉದ್ದೇಶದಿಂದ ಹೊರಟರು. ಇದು ಹೇಗೆ ಅಂದರೆ, ಒಬ್ಬ ರೋಗಿಷ್ಟನನ್ನೂ ಒಬ್ಬ ಆರೋಗ್ಯವಂತನನ್ನೂ ಜೊತೆ ಮಾಡಿ ಒಟ್ಟಿಗೆ ಜೀವನಮಾಡಿ ಆಯಿತು ಅಂದರೆ, ರೋಗಿಷ್ಟನಿಗೆ ಆರೋಗ್ಯ ಬರುವುದಿಲ್ಲ, ಬದಲಾಗಿ ಯಾರು ಆರೋಗ್ಯವಂತನಿದ್ದಾನೋ ಅವನಿಗೆ ರೋಗ ಬರುತ್ತದೆ. ಇವತ್ತು ಏನಾಗಿದೆಯೆಂದರೆ ಒಳ್ಳೆಯದು, ಕೆಟ್ಟದ್ದೂ ಜೊತೆ ಮಾಡುವುದರಿಂದ ಯಾವ ಸಂಸ್ಥೆಗಳಲ್ಲಿ ದುರ್ವ್ಯವಹಾರ ಉಂಟೋ, ಹಾಳು ಸಂಸ್ಥೆಗಳಿದ್ದುವೋ, ಸರಿಯಾಗಿ ನಡೆಯುತ್ತಿರಲಿಲ್ಲವೋ ಅಂಥ ಸಂಸ್ಥೆಗಳಿಂದ ಸರಿಯಾಗಿ ನಡೆಯುವ ಸಂಸ್ಥೆಗಳಿಗೆ ಅಂಟು ರೋಗ ಬಂದ ಹಾಗೆ ಆಗಿದೆ. ನಾನು ಒಂದು ವಿಷಯವನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಗೃಹಸ್ಥನನ್ನು ಸನ್ಯಾಸಿ ಅಪ್ಪಿಕೊಂಡರೂ, ಸನ್ಯಾಸಿಯನ್ನು ಗೃಹಸ್ಥ ಅಪ್ಪಿಕೊಂಡರೂ ಬೂದಿ ತಗಲುವುದು ತಪ್ಪುವುದಿಲ್ಲ. ಎಂಬ ಮಾತಿದೆ. ಹಾಗೇ ಒಳ್ಳೆಯ ಸಂಸ್ಥೆಗಳನ್ನು ಹಾಳು ಸಂಸ್ಥೆಗಳ ಒಟ್ಟಿಗೆ ಸೇರಿಸಿ ಅವರ ದುರ್ಬುದ್ಧಿಯನ್ನು ಇವರಿಗೆ ಕಲಿಸಿ ಒಳ್ಳೆಯ ಸಂಸ್ಥೆಗಳನ್ನು ಹಾಳು ಮಾಡುವಂಥ ಕಾರ್ಯಕ್ರಮವನ್ನು ತಾವು ಹಾಕಿಕೊಂಡಿದ್ದೀರಿ. ಇದರ ಪರಿಣಾಮ ಏನಾಗಿದೆಯೆಂದರೆ, ಇವತ್ತು ಅನೇಕ ಸಂಸ್ಥೆಗಳು ಹಾಳಾಗುತ್ತಾ ಉಂಟು. ಕೆಟ್ಟ ಜನರು ಮೇಲ್ಪಂಕ್ತಿ ಹಾಕುತ್ತಾ ಇದ್ದಾರೆ, ಅದಕ್ಕೆ ಚಾಲೂ ನಡೆಯುತ್ತಾ ಇದೆ. ಅದರ ಬಗ್ಗೆ ತಾವು ಉತ್ತರ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಾಮಿನೇಷನ್ ಬಗ್ಗೆ ಹೇಳುವುದಾದರೆ ಸೆಕ್ಷನ್ ೫೩ಎ ಪ್ರಕಾರ ಮಾಡುವಂಥ ನಾಮಿನೇಷನ್ ಇದರ ಪರಿಣಾಮ ಏನಾಗಿದೆಯೆಂದರೆ ನಾಮಿನೇಟೆಡ್ ಮೆಂಬರ್‌ಗಾಗಿ ಅಲ್ಲಿ ಬರುವಂಥಾವರು ಸರ್ಕಾರಿ ಅಧಿಕಾರಿಗಳೇ, ನಿಜವಾಗಿ ಸ್ವತಂತ್ರವಾಗಿ ಆಡಳಿತ ಮಾಡುವಂಥ ಕಮಿಟಿಗೆ ಇದರಿಂದ ಉಸಿರು ಕಟ್ಟಿದ ಹಾಗೆ ಆಗಿಬಿಟ್ಟಿದೆ. ಯಾವುದೇ ಕೆಲಸಮಾಡುವುದಕ್ಕೆ ಆಗದೇ ಇರತಕ್ಕ ಸ್ಥಿತಿ ಬಂದಿದೆ. ನಾನು ಇದನ್ನು ಯಾವುದೇ ಆಧಾರವಿಲ್ಲದೆ ಹೇಳುತ್ತಾ ಇಲ್ಲ. ನಾನು ಒಂದು ಸಂಸ್ಥೆಯನ್ನು ಉದಾಹರಣೆಯಾಗಿ ಕೊಟ್ಟು ಸಮರ್ಥನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಏನೆಂದರೆ,

ಸರ್ಕಾರ ಇಷ್ಟೊಂದು ಹಣವನ್ನು ಈ ಸಂಸ್ಥೆಗಳಲ್ಲಿ ಹೂಡಿರುವಾಗ, ಅವುಗಳ ಮೇಲೆ ಸರ್ಕಾರದ ಹತೋಟಿ ಇರಬೇಕು. ನಾವು ನಾಮಿನೇಟೆಡ್ ಮೆಂಬರ್ಸ್‌ನ್ನು ಅದಕ್ಕೋಸ್ಕರ ಇಟ್ಟುಕೊಂಡಿದ್ದೇವೆ ಎಂದು ತಾವು ಹೇಳಬಹುದು. ನಾನು ಇಲ್ಲಿ ಉದ್ದೇಶಪೂರ್ವಕವಾಗಿ ತಪ್ಪನ್ನು ಯಾರಮೇಲೂ ಹೊರಿಸುವುದಕ್ಕೆ ಹೋಗುವುದಿಲ್ಲ. ಆದರೆ ವಾಸ್ತವಿಕವಾಗಿ ಅಲ್ಲಿ ಏನು ನಡೆಯುತ್ತಾ ಉಂಟು ಎನ್ನುವುದಕ್ಕೆ ಒಂದು ಸ್ಪಷ್ಟವಾದ ನಿದರ್ಶನವನ್ನು ಕೊಡುತ್ತೇನೆ. ಮಂಗಳೂರಿನಲ್ಲಿ ಸೌತ್‌ಕೆನರಾ ಕೋಆಪರೇಟೀವ್ ಹೋಲ್‌ಸೇಲ್ ಸ್ಟೋರ್ಸ್ ಎಂದು ಇದೆ. ಅದನ್ನು ಜನತಾ ಬಜಾರ್ ನಡೆಸುವಂಥಾದ್ದು. ಆ ಜನತಾ ಬಜಾರಿಗೆ ಒಬ್ಬರು ಅಧ್ಯಕ್ಷರು ಆ ಅಧ್ಯಕ್ಷರು ಏನು ಮಾಡಿದರು ಅಂದರೆ ೫-೧೧-೧೯೮೧ ರಿಂದ ನಾಮಿನೇಟೆಡ್ ಮೆಂಬರಾಗಿ ಅವರು ಅದಕ್ಕೆ ಅಧ್ಯಕ್ಷರಾದರು. ಅವರ ನಾಮಿನೇಷನನ್ನು ಸರ್ಕಾರದವರು ವಿತ್‌ಡ್ರಾ ಮಾಡಿದರು. ವಿತ್‌ಡ್ರಾ ಏಕೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಅಂತೂ ಸರ್ಕಾರ ಅವರನ್ನು ವಿತ್‌ಡ್ರಾ ಮಾಡಿದ ನಂತರ ೧೨-೧೧-೧೯೮೧ ರಂದು ಆ ವಿತ್‌ಡ್ರಾ ಕ್ಯಾನ್ಸಲ್‌ಮಾಡಿ ಪುನಃ ಮೊದಲಿನ ಸ್ಟೇಟಸ್ಸೊ ಅವರಿಗೆ ಕೊಟ್ಟರು. ಇದರ ಪರಿಣಾಮ ಏನಾಯಿತು ಅಂದರೆ ವಿತ್‌ಡ್ರಾ ಪಿರೀಡ್‌ನಲ್ಲಿ ಯಾರು ಉಪಾಧ್ಯಕ್ಷರಾಗಿದ್ದರೋ ಅವರು ನಾನು ಇನ್‌ಚಾರ್ಜ್ ಛೇರ್ಮನ್ ಎಂದು ಹೇಳಿಕೊಂಡರು. ನಾವು ಅವರ ಹೆಸರನ್ನು ಹೇಳುವ ಅಗತ್ಯವಿಲ್ಲ. ನಾನು ಇದಾದ ಮೇಲೆ ಆಡಳಿತ ಮಂಡಲಿಯವರು ಅಧ್ಯಕ್ಷರನ್ನು ಕಾನೂನು ಕ್ರಮ ಪ್ರಕಾರ ಆಯ್ಕೆ ಮಾಡಬೇಕು ಎಂದು ನೋಟೀಸ್ ಕೊಟ್ಟು ಸರ್ವಾನುಮತದಿಂದ ಅಥವಾ ಯಾವುದೇ ಕಂಟೆಸ್ಟ್ ಇಲ್ಲದೆ ಮೂರನೆಯವರನ್ನು ಆಯ್ಕೆ ಮಾಡಿದರು. ಆದರೆ ಈ ನಾಮಿನೇಟೆಡ್ ಅಧ್ಯಕ್ಷರು ಏನು ಹೇಳಿದರು ಎಂದರೆ, ಈ ಆಯ್ಕೆ ನನಗೆ ಗೊತ್ತೇ ಇಲ್ಲಾ ನಾನೇ ಛೇರ್ಮನ್ ಎಂದು. ಇಲ್ಲಿ ಇರುವುದಿಷ್ಟೆ. ಒಮ್ಮೆ ನಾಮಿನೇಟೆಡ್ ಮೆಂಬರ್ ತನ್ನ ಮೆಂಬರ್‌ಶಿಪ್‌ನ್ನು ಕಳೆದುಕೊಂಡ ನಂತರ ಮೆಂಬರ್ ಸ್ಥಾನ ಹೋಗುತ್ತದೋ ಇಲ್ಲವೋ ಅಧ್ಯಕ್ಷ ಸ್ಥಾನ ಹೋದ ನಂತರ, ಇನ್‌ಚಾರ್ಜ್‌ನಲ್ಲಿರುವ ಅಧ್ಯಕ್ಷರು ಅವರು ಅಧ್ಯಕ್ಷರು ಎಂದು ಹೇಳಿಕೊಂಡರು. ಆ ಮೇಲೆ ಚುನಾಯಿತನಾದಂಥ ಅಧ್ಯಕ್ಷ ನಾನು ಅಧ್ಯಕ್ಷ ಎಂದು ಹೇಳಿದ. ಹೀಗೆ ಒಂದು ಕುರ್ಚಿಗೆ ಆರು ಹಿತವರು ನಿನಗೆ ಈ ಮೂವರೊಳಗೆ ಎಂದು ಹೇಳುವ ಹಾಗೆ ಈ ಮೂರು ಜನ ಅಧ್ಯಕ್ಷರು ಏಕ ಕಾಲದಲ್ಲಿ ನಾನು ಅಧ್ಯಕ್ಷ ನಾನು ಅಧ್ಯಕ್ಷ ನಾನು ಅಧ್ಯಕ್ಷ ಎಂದು ಹೇಳುವುದು ಶುರುವಾಯಿತು. ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆಂದರೆ ನಾಮಿನೇಟೆಡ್ ಅಧ್ಯಕ್ಷರ ಮೇಲೆ ಎಂಥಾ ಆಪಾದನೆಗಳು ಇವೆ ಎನ್ನುವುದು ತಮಗೆ ಗೊತ್ತಿರಬಹುದು. ಇದರ ಪರಿಣಾಮವಾಗಿ ಅಲ್ಲಿ ಈಗ ನಿಜವಾಗಿ ಯಾರು ಅಧ್ಯಕ್ಷರು, ಚೆಕ್ಕಿಗೆ ದಸ್ಕತ್ ಹಾಕುವವರು ಯಾರು, ಹಣಕಾಸಿನ ವ್ಯವಹಾರಕ್ಕೆ ಯಾರು ಹೊಣೆ ಎಂದು ಕೇಳಿದರೆ ಇವತ್ತಿನವರೆಗೂ ಯಾರು ಹೇಳುವವರಿಲ್ಲ. ಅಲ್ಲಿ ಈ ರೀತಿ ಗೊಂದಲ ನಡೆಯುತ್ತಾ ಉಂಟು ಅದಕ್ಕೋಸ್ಕರ ನಾನು ತಮಗೆ ಕೇಳಿಕೊಳ್ಳುವುದಿಷ್ಟೆ. ಯಾರು ಚಮಚಾಗಿರಿ ಮಾಡುತ್ತಾರೆ, ಯಾರು ತಮಗೆ ಇಲ್ಲಿ ಬಂದು ಏನೋ ಮಾಡಿದವರಿಗೆ ನಾಮಿನೇಷನ್ ಮಾಡುವುದರಿಂದಾಗಿ ಇಡೀ ಸಹಕಾರಿ ಚಳುವಳಿಗೆ ತಾವು ಒಂದು ಮಾರಣಾಂತಿಕವಾದ ಹೊಡೆತಕೊಡುತ್ತೀರಿ ಎನ್ನತಕ್ಕಂಥ ಎಚ್ಚರಿಕೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ಇದರ ಪರಿಣಾಮ ಈಗಲೂ ನಮ್ಮ ಜಿಲ್ಲೆಯಲ್ಲಿ ಆಗುತ್ತಾ ಉಂಟು. ಈ ಸಂಸ್ಥೆ ಇಡೀ ನಮ್ಮ ಜಿಲ್ಲೆಯಲ್ಲಿ ಹೆಮ್ಮೆ ಪಡತಕ್ಕ ಒಂದು ಸಂಸ್ಥೆ ಅದು. ಆ ಸಂಸ್ಥೆಯ ಅಧ್ಯಕ್ಷರ ಮೇಲೆ ಎಂಥೆಂಥ ಆಪಾದನೆಗಳುಂಟು. ನಿಯಮ ಪ್ರಕಾರ ವಾರಕ್ಕೊಮ್ಮೆ ಸೇರಬೇಕಾದ ಸಮಿತಿ ಸಭೆ ಸೇರಲಿಲ್ಲ, ಆ ಮೇಲೆ ಅಧ್ಯಕರು ಮತ್ತು ಮ್ಯಾನೇಜರ್ ೧೬ ಲಕ್ಷ ರೂಪಾಯಿಗಳ ಬೆಲೆ ಬಾಳುವ ಮಾಲುಗಳನ್ನು ಅಧಿಕಾರವಿಲ್ಲದೆ ಖರಿದಿ ಮಾಡಿದರು—ಎನ್ನುವಂಥ ಆಪಾದನೆ ಇದೆ. ದಾಸ್ತಾನಿನಲ್ಲಿ ಸುಮಾರು ೯೦೦೦ ಕೆ.ಜಿ. ಪಾಮೊಲಿನ್ ಎಣ್ಣೆ ಕಮ್ಮಾಶ ಹೋಗಿದೆ. ಒಂದು ಲಕ್ಷ ಕೆ.ಜಿ. ಗಿಂತಲೂ ಅಧಿಕವಾದ ಪಾಮೊಲಿನ್ ಎಣ್ಣೆಯನ್ನು ಅಕ್ರಮವಾಗಿ ವಿತರಣೆ ಮಾಡಿರುವಂಥಾದ್ದು ಅಧ್ಯಕರ ಮೇಲಿರುವಂಥ ಆಪಾದನೆ. ಇಷ್ಟೆಲ್ಲಾ ಗಂಭೀರವಾದಂಥ ಆಪಾದನೆಗಳಿದ್ದರೂ ಕೂಡ ಅವರನ್ನು ನಾಮಿನೇಷನ್ ಮಾಡಿದ್ದನ್ನು ಹಿಂದಕ್ಕೆ ತೆಗೆದುಕೊಂಡಿದ್ದು ಮತ್ತೆ ಒಂದು ವಾರದೊಳಗೆ ಪುನಃ ಅವರನ್ನು ಅದೇ ಸ್ಥಾನದಲ್ಲಿ ಕೂರಿಸಿ ಚಂದ ನೋಡುವಂಥ ಕ್ರಮ ಏನಿದೆ ಅದು ತಮ್ಮ ಕೈಯಿಂದ ಅಧಿಕಾರದ ಸಂಪೂರ್ಣವಾದ ದುರುಪಯೋಗ ಆದಹಾಗಿದೆ ಹೀಗಾಗಿ ಅದನ್ನು ಸರಿ ಮಾಡುವಂಥ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

೨-೩೦ ಪಿ. ಎಂ.

ತಮಗೆ ನಾಮಿನೇಷನ್ ಮಾಡುವಂಥ ಅಧಿಕಾರವೇನಿದೆ ಅದು ಸದುಪಯೋಗವಾಗುವ ಬದಲಿಗೆ ದುರುಪಯೋಗವಾಗುತ್ತಿದೆ. ಅದರ ಪರಿಣಾಮವಾಗಿ ಸಹಕಾರಿ ಚಳುವಳಿ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಭ್ರಷ್ಟಾಚಾರದ ಬಗ್ಗೆ ಬಹಳ ವ್ಯಾಪಕವಾಗಿ ಇವತ್ತು ಟೀಕೆ ನಡೆಯುತ್ತಿದೆ. ಇವತ್ತಿನ ದಿವಸ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಇದರ ಬಗ್ಗೆ ಬಂದಿದೆ, ಮೈಸೂರಿನಲ್ಲಿ ಒಂದು ಟ್ರೈನಿಂಗ್‌ನ ಸಮಾರಂಭದ ಭಾಷಣದಲ್ಲಿ ನಿಮ್ಮ ಸೋಶಿಯಲ್ ವೆಲ್‌ಫೇರ್ ಮಿನಿಸ್ಟರ್ ಶ್ರೀ ಪಿ. ವೆಂಕಟರಮಣರವರೇ ಹೇಳಿರತಕ್ಕದ್ದು ಬಂದಿದೆ. "He alleged that the Co-operation Department was sitting pretty in spite of misappropriation amounting to lakhs of rupees." ಎನ್ನುವ ಮಾತನ್ನು ಹೇಳಿದ್ದಾರೆ, ಇದು ಯಾರಿಗೆ ಸರ್ಟಿಫಿಕೇಟ್ ಕೊಡುವಂಥಾದ್ದು ? ಇದು ನಿಮ್ಮ ಇಲಾಖೆಗೆ ನಿಮ್ಮನ್ನೂ ಕೂಡ ಸೇರಿಸಿ ಸರ್ಟಿಫಿಕೇಟನ್ನು ಅವರು ಕೊಟ್ಟಿದ್ದಾರೆ. ಒಬ್ಬರು ಜವಾಬ್ದಾರಿ ಇರುವಂಥಾ ಮಂತ್ರಿಗಳೇ ಈ ತರಹ ಹೇಳಿರಬೇಕಾಗಿದ್ದರೆ ಈ ಸಮಸ್ಯೆ ಇನ್ನು ಎಷ್ಟು ವ್ಯಾಪಕವಾಗಿ ಎಷ್ಟು ಗಂಭೀರವಾದ ರೂಪದಲ್ಲಿರಬೇಕು ಎನ್ನುವುದನ್ನು ತಾವೇ ಊಹೆ ಮಾಡಬಹುದು. ನಮ್ಮ ಸಹಕಾರ ಮಂತ್ರಿಗಳವರ ಸಹಿತವಾಗಿ ನಿಮ್ಮ ಡಿಪಾರ್ಟ್‌ಮೆಂಟಿನವರಿಗೂ ಸಹ ಈ ಸಹಕಾರಿ ಕ್ಷೇತ್ರದಲ್ಲಿ ನಡೆಯುತಕ್ಕದ್ದು ಎಲ್ಲರಿಗೂ ಗೊತ್ತಿದೆ ಆದರೂ ಏನೂ ಮಾಡುತ್ತಿಲ್ಲವೆಂಬ ಆಪಾದನೆಯನ್ನು ಮಾನ್ಯ ಸಚಿವರೊಬ್ಬರು ಮಾಡಿದಾಗ ತಾವು ಬಹಳ ಗಂಭೀರವಾಗಿ ಇದನ್ನು ಪರಿಗಣಿಸಬೇಕೆಂದು ತಮ್ಮಲ್ಲಿ ಹೇಳುತ್ತಿದ್ದೇನೆ.

ಇನ್ನು ತಮ್ಮ ವರದಿಯ ೫೯ನೇ ಪುಟದಲ್ಲಿ,

"Major high lights during the course of audit during the year of various co-operative societies, misappropriation amounting to Rs 1.38 crores have been detected."

ಎಂದು ಹೇಳಿದ್ದೀರಿ, ಇದರಿಂದ ನಮ್ಮ ಅನಿಸಿಕೆ ಏನೆಂದರೆ ಕನಿಷ್ಟ ಪಕ್ಷ ನಮ್ಮ ರಾಜ್ಯದಲ್ಲಿ ೫ ಕೋಟಿ ರೂಪಾಯಿಗಳ ದುರ್ವಿನಿಯೋಗವಾಗುತ್ತಿದೆ. ಏತಕ್ಕೆಂದರೆ ಆಡಿಟ್‌ನವರು ಆಡಿಟ್ ಮಾಡುತ್ತಾರೆ, ಅಕೌಂಟ್ ಎಲ್ಲಾ ಅಪ್ರೂವ್ ಆಗುತ್ತದೆ. ಜನರಲ್ ಬಾಡಿ ಮೀಟಿಂಗ್‌ನಲ್ಲಿ ಆ ವರ್ಷದಲ್ಲಿ ಯಾವುದೇ ಮಿಸ್ ಅಪ್ರೊಪ್ರಿಯೇಷನ್ ಆಗಿಲ್ಲವೆಂದು ಹೇಳುತ್ತಾರೆ. ಆದರೆ ಈಗ ನಾನು ಹೇಳಿದಂಥ ವಿಠ್ಠಲ ಸಹಕಾರ ಸಂಘದಲ್ಲಿ ೫ ವರ್ಷಗಳ ಹಿಂದೆಯೇ ಈ ಸಂಸ್ಥೆಯ ಆಡಿಟ್ ಅಪ್ರೂವ್ ಆಗಿತ್ತು, ಆದರೆ ಆ ಸಂಸ್ಥೆಯ ಸೆಕ್ರೆಟರಿಯವರ ಮೇಲೆ ಆಪಾದನೆಗಳು ಬಂದಾಗ ಆಮೂಲಾಗ್ರವಾಗಿ ತನಿಖೆ ನಡೆದು ೫ ವರ್ಷಗಳ ಹಿಂದೆ ಅವರು ಏನು ತಿಂದು ಹಾಕಿದ್ದಾರೆ ಅದೆಲ್ಲಾ ಈಗ ಹೊರಗಡೆ ಬರುತ್ತಿದೆ. ಆಡಿಟ್‌ನವರು ಕೂಡ ಇದರಲ್ಲಿ ಶಾಮೀಲಾಗಿ, ಅವರು ಉದಾಸೀನವಾಗಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನತಕ್ಕ ಆಪಾದನೆಗಳನ್ನು ಮಾಡಬೇಕಾಗಿದೆ. ಪ್ರತಿ ವರ್ಷವೂ ಕೂಡ ಆಡಿಟ್ ಮಾಡಿದಾಗ ಯಾವುದೂ ದುರುಪಯೋಗದ ಕ್ರಮ ಪತ್ತೆ ಆಗಲಿಲ್ಲವೇ, ೫ ವರ್ಷಗಳು ಕಳೆದ ನಂತರ ಈಗ ಈ ಸಂಗತಿಗಳು ಹೊರಗಡೆ ಬರಬೇಕಾಗಿದ್ದರೆ ಆಡಿಟ್‌ನವರೂ ಕೂಡ ಇದರಲ್ಲಿ ಶಾಮೀಲಾಗಿರಬೇಕು ಎನ್ನತಕ್ಕ ಸಂಶಯ ನನಗೆ ಬರುತ್ತಿದೆ. ಈಗ ಏನು ೩.೮ ಕೋಟಿ ರೂ.ಗಳ ದುರ್ವಿನಿಯೋಗವಾಗಿದೆಂದು ತಿಳಿದು ಬಂದಿದೆ ಅದು ನಿಜವಾಗಿಯೂ ಇನ್ನೂ ಜಾಸ್ತಿಯಾಗಿದ್ದು ಕರಾರು-ವಾಕಾಗಿ ಇಷ್ಟೇ ಆಗಿದೆಯೆಂದು ಹೇಳುವುದಕ್ಕೆ ಸಾಧ್ಯವಾಗಿಲ್ಲ, ಆದರೂ ಕೂಡ ಸರ್ಕಾರದವರು ಆಮೂಲಾಗ್ರವಾಗಿ ತನಿಖೆ ಮಾಡಿದರೆ ಎಲ್ಲಾ ಸಹಕಾರ ಸಂಸ್ಥೆಗಳಿಂದ ದುರ್ವಿನಿಯೋಗವಾಗಿರತಕ್ಕ ಹಣ ಕನಿಷ್ಟ ಪಕ್ಷವೆಂದರೆ ೫ ಕೋಟಿ ರೂಪಾಯಿಗಳಾದರೂ ಇರಬೇಕು ಎನ್ನತಕ್ಕ ಒಂದ ಶಂಕೆ ನಮಗೆ ಉಂಟಾಗಿದೆ, ಇದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಹುಬ್ಬಳ್ಳಿಯಲ್ಲಿ ಒಂದು ಪ್ರಕರಣ ನಡೆಯಿತು. ಅಲ್ಲಿ ಒಬ್ಬ ವ್ಯಾಪಾರಿ ಹೊಸದಾಗಿ ಒಂದು ಸಂಸ್ಥೆಯನ್ನು ಹುಟ್ಟು ಹಾಕಿದರು. ಹುಬ್ಬಳ್ಳಿ ಇಂಜಿನಿಯರಿಂಗ್ ಟೆಕ್ನೀಕ್ಸ್ ಕೋ-ಆಪರೇಟಿವ್ ಸೊಸೈಟಿ ಎಂದು. ಅದರ ಮೂಲಕ ಅವರು ೭೫ ಸಾವಿರ ರೂಪಾಯಿಗಳನ್ನು ಸಂಗ್ರಹ ಮಾಡಿದ್ದರು, ಅದಕ್ಕೆ ಸರ್ಕಾರದವರು ಕಾಂಟ್ರಿಬ್ಯೂಷನ್, ಷೇರ್ ಕ್ಯಾಪಿಟಲ್ ಎಂದು ೧ ಲಕ್ಷದ ೮೫ ಸಾವಿರಗಳನ್ನು ಕೊಟ್ಟಿದ್ದಾರೆ ಮತ್ತೆ ಗೌವರ್ನಮೆಂಟ್ ಲೋನ್ ೧ ಲಕ್ಷ ಕೊಟ್ಟಿದ್ದಾರೆ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ೩ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇಷ್ಟೆಲ್ಲಾ ಬಂಡವಾಳ ಹಾಕಿದ್ದನ್ನು ಅವರು ಪ್ರಯಾಣ

ಭತ್ಯವೆಂದು ಈ ಹಣವನ್ನೆಲ್ಲಾ ತಿಂದು ಹಾಕಿದ್ದಾರೆ. ೧೩ ಲಕ್ಷ ರೂಪಾಯಿಗಳ ದುರ್ವ್ಯವಹಾರವನ್ನು ಅವರು ಮಾಡಿದ್ದಾರೆ ಎಂದು ಹೇಳಿ ಆಪಾದನೆ ಉಂಟು. ಇದರ ಬಗ್ಗೆ ತನಿಖೆ ನಡೆಯಿತು, ತನಿಖೆ ಆದ ಮೇಲೆ ಅದರ ಮೇಲೆ ಅಡ್ಮಿನಿಸ್ಟ್ರೇಟರನ್ನು ನೇಮಿಸಿದರು, ಅವರು ಕೋರ್ಟಿಗೆ ಹಾಕಿದಾಗ ಈ ವ್ಯಾಪಾರಿ ಸರಿಯಾಗಿ ನೋಟೀಸ್ ಕೊಟ್ಟಿಲ್ಲವೆಂದು ಹಾಕಿ ಚಾಲೆಂಜ್ ಮಾಡಿದರು. ಇನ್ನೊಂದು ಸಾರಿ ನೋಟೀಸು ಕೊಟ್ಟರು. ಆಗ ಎರಡನೆಯ ಬಾರಿ ಏನೂ ನಡೆಯಲಿಲ್ಲ. ಕೋರ್ಟಿನಲ್ಲಿ ಕ್ರಮಬದ್ಧವಾಗಿ ಎರಡನೆಯ ಬಾರಿ ಕೇಸ್‌ನ್ನು ಸರಿಯಾಗಿ ಹಾಕಿದ್ದು ಆಯಿತು. ಕೋರ್ಟಿನಲ್ಲಿ ತೀರ್ಮಾನ ಕೊಡಲಾಯಿತು. ಆದರೆ ಇದರ ಬಗ್ಗೆ ಸರಿಯಾದ ಕಾರ್ಯಾಚರಣೆಯನ್ನು ತೆಗೆದುಕೊಳ್ಳಬೇಕೆಂದರೆ ಮಾನ್ಯ ಸಹಕಾರ ಸಚಿವರು ಆ ತೀರ್ಪಿನ ಬಗ್ಗೆ ಸ್ಟೇ ತಂದು ಪುನಃ ಅವರನ್ನೇ ಆ ಸಂಸ್ಥೆಯ ಅಧ್ಯಕ್ಷರನ್ನಾಗಿ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದು ಪತ್ರಿಕೆಗಳಲ್ಲಿಯೂ ಬಂದಿದೆ. ನಾನು ಈ ಒಂದು ಪ್ರಕರಣದ ಆಧಾರದ ಮೇಲೆ ಮಾತನಾಡುತ್ತಿದ್ದೇನೆ. ಯಾವ ವ್ಯಕ್ತಿ ೧೩ ಲಕ್ಷ ರೂಪಾಯಿಗಳನ್ನು ತಿಂದು ಹಾಕಿದ್ದಾರೋ ಅಂಥಾ ವ್ಯಕ್ತಿಗೆ ಅಭಯ ಹಸ್ತವನ್ನು ಕೊಟ್ಟು ಸರ್ಕಾರವೇ ರಕ್ಷಣೆ ಕೊಟ್ಟು ಪುನಃ ನೀವು ಅಲ್ಲಿ ಮೇಯ್ದುಕೊಳ್ಳಿ ಹೋಗಿ ಎಂದು ಬಿಟ್ಟಿದ್ದಾರೆ ಪುನ: ಅವರು ಈಗ ೧೦ ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ನಿಂದ ಸಾಲ ಕೇಳಿದ್ದಾರೆ. ಆದುದರಿಂದ ಏನೆಲ್ಲಾ ನಿಮ್ಮ ಇಲಾಖೆಯಲ್ಲಿ ನಡೆಯುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಮಾತ್ರವಲ್ಲ ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದೀರೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದರಿಂದಾಗಿ ನಿಮ್ಮ ಸಹಕಾರ ತತ್ವ ಏನಿದೆಯೋ ಅದಕ್ಕೆ ಇತಿಶ್ರೀ ಹಾಡುವುದಕ್ಕೆ ಹೊರಟಿದ್ದೀರಿ. ಆ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಮತ್ತು ರಾಜಕೀಯವನ್ನು ಸಹಕಾರ ಕ್ಷೇತ್ರದಲ್ಲಿ ತೆಗೆದುಕೊಂಡು ಬರಬಾರದೆಂದು ಹೇಳುತ್ತೇನೆ.

(ಉಪಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿಮಗೆ ಸಂಬಂಧಪಟ್ಟವರಲ್ಲಿ ಸ್ನೇಹಾಚಾರ ಇರಬಹುದು, ಸ್ನೇಹಾಚಾರವಿದ್ದರೂ ಕೂಡ ಇದರಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳಕೂಡದು. ಆ ರೀತಿ ಮಾಡಿಕೊಂಡರೆ ಕಾನೂನಿನ ದುರುಪಯೋಗವಾಗುತ್ತದೆ, ಆದುದರಿಂದ ಆ ಒಂದು ಸಂದರ್ಭವನ್ನು ಸೃಷ್ಟಿ ಮಾಡಬಾರದು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಭ್ರಷ್ಟಾಚಾರದಲ್ಲಿ ಅನೇಕ ವಿಧ ಮತ್ತು ರೂಪಗಳು ಉಂಟು. ಒಂದು ಉದಾಹರಣೆಯನ್ನು ತಮಗೆ ಹೇಳುತ್ತೇನೆ. ಡಿ.ಆರ್.ಡಿ.ಎಸ್. ಯೋಜನೆ ಪ್ರಕಾರ ನಮ್ಮ ಜಿಲ್ಲೆಯಲ್ಲಿ ದುರ್ಬಲವರ್ಗದವರಿಗೆ ಹಸುಗಳನ್ನು ಕೊಟ್ಟಿದ್ದಾರೆ. ಈ ಹಸುಗಳನ್ನು ಅವರು ಕೊಯಮತ್ತೂರಿಗೆ ಹೋಗಿ ತೆಗೆದುಕೊಂಡು ಬಂದಿದ್ದಾರೆ. ಆದರೆ ಅಲ್ಲಿ ಏನಾಗಿದೆ ಎಂದರೆ, ಒಬ್ಬರು ವೆಟರ್ನರಿ ಅಸಿಸ್ಟೆಂಟ್ ಡೈರೆಕ್ಟರ್‌ರೊಬ್ಬರು ಇದ್ದಾರೆ, ಅವರೇ ಈ ಹಸುಗಳನ್ನು ಕೊಂಡಿದ್ದಕ್ಕೆ ಸೀಲ್ ಹಾಕಿ ಸರ್ಟಿಫಿಕೇಟ್‌ನ್ನು ಕೊಡುವುದು. ಇವರು ಕೊಯಮತ್ತೂರಿಗೆ ಹೋಗಿ ಹೋಟೆಲ್‌ನಲ್ಲಿ ಇಳಿದುಕೊಳ್ಳುವುದು, ಅಲ್ಲಿಯ ಒಬ್ಬ ಏಜೆಂಟ್ ಅವರಿಂದ ೧೦೦ ರೂ.ಗಳನ್ನು ತೆಗೆದುಕೊಂಡು ದಸ್ಕತ್ತು ಹಾಕಿಸಿ ಸರ್ಟಿಫಿಕೇಟ್‌ಗಳನ್ನು ಕೊಡಿಸುವುದು. ಇವರು ಅಲ್ಲಿಂದ ಹಸುಗಳನ್ನು ತಂದ ನಂತರ ಯಾರು ತಮ್ಮ ಊರಿನಲ್ಲಿ ದೊಡ್ಡದೊಡ್ಡ ಶ್ರೀಮಂತರು, ದೊಡ್ಡ ಜಮೀನ್ದಾರರು ಇದ್ದಾರೋ ಅವರಿಗೆ ಮಾರಿಕೊಳ್ಳುವುದು. ಯಾವ ದುರ್ಬಲ ವರ್ಗದವರು ಇದ್ದಾರೋ ಅವರಿಗೇ ಇರುವುದಕ್ಕೆ ಮನೆ ಇಲ್ಲ, ಸರಿಯಾದ ವಸತಿ ಇಲ್ಲ, ಅಂಥವರಿಗೆ ಹಸುಗಳನ್ನು ಕೊಟ್ಟರೆ ಅವರು ಇಟ್ಟುಕೊಳ್ಳುವುದೆಲ್ಲಿ ? ಸರ್ಕಾರದವರ ಉದ್ದೇಶವೇನೋ ಸದುದ್ದೇಶವೇ. ಉದ್ದೇಶ ಮಾತ್ರ ಯಾರು ದುರ್ಬಲವರ್ಗದವರಿದ್ದಾರೆ ಯಾರು ಬಡತನ ರೇಖೆಗಿಂತ ಕೆಳಗಡೆ ಇದ್ದಾರೆ ಅವರನ್ನು ಮೇಲಕ್ಕೆ ಎತ್ತುವುದಾಗಿದೆ ಒಂದೊಂದು ತಾಲ್ಲೂಕಿನಲ್ಲಿ ೬೦೦ ಜನರನ್ನು ಗುರುತಿಸಿ ಅವರನ್ನು ಬಡತನ ರೇಖೆಗಿಂತ ಮೇಲಕ್ಕೆ ತರಬೇಕು ಎನ್ನತಕ್ಕ ಉದ್ದೇಶವೇನೋ ಒಳ್ಳೆಯದೇ. ಆದರೆ ಯಾವ ದುರ್ಬಲ ವರ್ಗದ ಪುಣ್ಯಾತ್ಮನೂ ಕೂಡ ತನಗೆ ಕೊಟ್ಟಂಥ ಹಸುಗಳನ್ನು ತನ್ನ ಮನೆಗೆ ತೆಗೆದುಕೊಂಡು ಬಂದು ಸಾಕುತ್ತಿಲ್ಲ. ಆ ಹಸುಗಳೆಲ್ಲಾ ಇವತ್ತು ಅವನ ಸುತ್ತಮುತ್ತ ಯಾರು ಯಾರು ಧನಿಕರು, ದೊಡ್ಡ ದೊಡ್ಡ ಜಮೀನ್ದಾರರು ಇದ್ದಾರೆ ಅವರು ಇವನ ಕೈಗೆ ಇನ್ನೂರು ರೂಪಾಯಿಗಳನ್ನು ಕೊಟ್ಟು ಆ ದನಗಳನ್ನು ಸಾಕಿಕೊಂಡಿದ್ದಾರೆ. ಅವರು ಒಳ್ಳೆಯ ಡೈರಿ ಫಾರಂಗಳನ್ನು ಮಾಡಿಕೊಂಡಿದ್ದಾರೆ. ಮಿಲ್ಕ್ ಸಪ್ಲೈ ಮಾಡುತ್ತಿದ್ದಾರೆ. ಆದುದರಿಂದ ಯಾವ ರೀತಿಯಲ್ಲಿ ಸ್ಕೀಂಗಳು ನಡೆಯುತ್ತಾ ಉಂಟು ಎನ್ನುವುದಕ್ಕೆ ನಾನು ನಿದರ್ಶನವನ್ನು ಕೊಟ್ಟಿದ್ದೇನೆ, ಆದರಲ್ಲಿ ನಿಮ್ಮದು ಪಾತ್ರ ಉಂಟು ಎಂದು ನಾನು

ಹೇಳಲಿಲ್ಲ. ಆದರೆ ನೀವು ಈ ಒಂದು ವ್ಯವಸ್ಥೆಯನ್ನು ಕಲಿಸುತ್ತೀರಿ ಎಂದು ಹೇಳುತ್ತಿದ್ದೇನೆ. ಏತಕ್ಕೆಂದರೆ ಮೇಲಿನ ಅಧಿಕಾರಿಗಳು ಮಾಡಿದರೆ ಅದು ಕೆಳಗಿನವರೆಗೂ ಹರಿದುಹೋಗುತ್ತದೆ ಆದುದರಿಂದ ಮೇಲಿರತಕ್ಕವರು ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿದರೆ ಕೆಳಗಿನವರೂ ಸಹ ಅದನ್ನು ಅನುಸರಿಸುತ್ತಾರೆ. ಇಲ್ಲದಿದ್ದರೆ ಈ ರೀತಿಯ ಭ್ರಷ್ಟಾಚಾರ ಹೆಚ್ಚುವುದಕ್ಕೆ ಕಾರಣವಾಗುತ್ತದೆಂದು ನಾನು ಹೇಳಬಯಸುತ್ತೇನೆ. ನೀವು ಸೊಸೈಟಿಗಳಿಗೆ ವರ್ಷೇವರ್ಷೇ ಸಾಲವನ್ನು ಕೊಡುತ್ತಿದ್ದೀರಿ, ಆ ರೀತಿ ಸೊಸೈಟಿಗಳಿಗೆ ಕೊಟ್ಟಂಥಾ ಹಣ ಯಾವ ರೀತಿಯಾಗಿ ಖರ್ಚು ಆಗಿದೆಯೆಂದು ನೋಡುತ್ತಿದ್ದೀರಾ ?

ಶ್ರೀ ಬೇಗಾನೆ ರಾಮಯ್ಯ.—ಡಿ.ಆರ್.ಡಿ.ಎಸ್. ಯೋಜನೆ ಸಂಪೂರ್ಣವಾಗಿ ನನ್ನ ಇಲಾಖೆಗೆ ಸಂಬಂಧಪಡುತ್ತದೆ.

ಶ್ರೀ ಕೆ. ರಾಮಭಟ್.—ಸಹಕಾರ ಸಂಘಗಳ ಮತ್ತು ಬ್ಯಾಂಕುಗಳ ಮೂಲಕ ಸಾಲ ಕೊಟ್ಟು ಈ ರೀತಿ ನಡೆಯುತ್ತಿದೆ. ಒಂದು ವರ್ಷಕ್ಕೆಂದು ೫೦೦ ರೂಪಾಯಿಗಳನ್ನು ಸಾಲವಾಗಿ ಕೊಟ್ಟರೆ ಅದಕ್ಕೆ ಬಡ್ಡಿ ಸೇರಿ ಕೊನೆಗೆ ೫೫೦ ರೂಪಾಯಿ ಆಗುತ್ತದೆ. ಆದರೆ ಸಾಲ ತೆಗೆದುಕೊಂಡವನಿಗೆ ಕೊಡುವುದಕ್ಕೆ ಶಕ್ತಿ ಇಲ್ಲದೆ ಕೊಡುವುದಿಲ್ಲ, ಆಗ ಅಲ್ಲಿರುವಂಥ ಸೆಕ್ರೆಟರಿ ಸೊಸೈಟಿ ಡೀಫಾಲ್ಟರ್ ಆಗಬಾರದೆಂದು ಪುನಃ ಇನ್ನೊಂದು ವರ್ಷಕ್ಕೆಂದು ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿ ಅದರಲ್ಲಿ ೫೫೦ ರೂಪಾಯಿಗಳನ್ನು ವಜಾ ಹಾಕಿ ೪೫೦ ರೂಪಾಯಿಗಳನ್ನು ಕೊಡುತ್ತಾನೆ. ಇದೆಲ್ಲಾ ಬರೀ ಬುಕ್ ಅಡ್ಜಸ್ಟ್‌ಮೆಂಟ್. ಈ ರೀತಿ ಸಾವಿರಾರು ರೂಪಾಯಿಗಳ ವ್ಯವಹಾರ ಸೊಸೈಟಿಗಳಲ್ಲಿ ನಡೆಯುತ್ತಿದೆ. ವಾಸ್ತವವಾಗಿ ಜನರಿಗೆ ಯಾವ ರೀತಿಯ ಪ್ರಯೋಜನವೂ ಆಗುತ್ತಿಲ್ಲ. ಇದನ್ನು ತಾವು ಒಳಹೊಕ್ಕು ನೋಡಬೇಕು. ಶಿರತಾಡಿಯ ಒಂದು ಸಹಕಾರ ಸಂಘದಲ್ಲಿ ೧೩ ಲಕ್ಷ ರೂಪಾಯಿ ದುರ್ವಿನಿಯೋಗವಾಗಿದೆ. ಅದೇ ರೀತಿ ಬೆಳ್ತಂಗಡಿಯಲ್ಲೂ ಕೂಡ ಆಗಿದೆ. ಈ ರೀತಿ ಆಗಲಿಕ್ಕೆ ಕಾರಣವೇನು? ಆಡಳಿತ ಸೂತ್ರವನ್ನು ಹಿಡಿದಿರುವ ವ್ಯಕ್ತಿಗಳಿಂದಲೇ ಇಗಕ್ಕೆಲ್ಲ ಪ್ರಚೋದನೆ ಸಿಗುತ್ತಿದೆ ಎಂಬುದಕ್ಕೆ ನಿದರ್ಶನವಾಗಿ ಈ ವಿವರಗಳನ್ನು ಹೇಳಿದ್ದೇನೆ. ಇಲ್ಲಿ ಸರಿಯಾಗಿದ್ದು. ಆ ರೀತಿ ದುರ್ವಿನಿಯೋಗ ಮಾಡಿದವರ ಮೇಲೆ ಉಗ್ರ ಕ್ರಮ ತೆಗೆದುಕೊಂಡರೆ ಎಲ್ಲ ಸರಿಯಾಗುತ್ತದೆ. ಅದನ್ನು ಮಾಡದೆ ಅವರಿಗೆ ಆಶೀರ್ವಾದ ಮಾಡಿ, ನಮ್ಮನ್ನು ನಂಬಿ ಏನು ಮಾಡಿದರೂ ಪರವಾಗಿಲ್ಲವೆಂದರೆ ಸಹಕಾರ ಕ್ಷೇತ್ರಕ್ಕೆ ದೊಡ್ಡ ಆಘಾತವಾಗುತ್ತದೆಂದು ಹೇಳುತ್ತೇನೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನೌಕರರು ತಮ್ಮ ವೇತನ ಶ್ರೇಣಿಯ ಬಗ್ಗೆ ಚಳುವಳಿ ಮಾಡಿದರು. ಆಗ ಸರ್ಕಾರದಿಂದ ಒಂದು ಆಶ್ವಾಸನೆ ಅವರಿಗೆ ಸಿಕ್ಕಿತು. ಅದು ಏನು ಸಿಕ್ಕಿತು ಎಂಬುದು ಗೊತ್ತಿಲ್ಲ. ಹಾಗಾಗಿ ನಿಂತಿದ್ದ ಚಳುವಳಿ ಈಗ ಪುನಃ ಪ್ರಾರಂಭವಾಗಿದೆ. ಇವತ್ತಿನ ದಿವಸ ಸುಮಾರು ೧,೨೦೦ ಮಂದಿ ಪಿ.ಎಲ್.ಡಿ. ಬ್ಯಾಂಕಿನ ನೌಕರರು ಚಳುವಳಿ ಮಾಡುವುದಕ್ಕೆ ಹೊರಟಿದ್ದಾರೆ. ಅದರ ಬಗ್ಗೆ ಸಚಿವರು ಗಮನಹರಿಸಿ ಜನರಿಗೆ ಅವರ ಸಂಬಳದಲ್ಲಿರತಕ್ಕ ತಾರತಮ್ಯವನ್ನು ಹೋಗಲಾಡಿಸಿ ಅವರ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಸಹಕಾರ ಇಲಾಖೆಯಲ್ಲಿ ಕೆಮ್ಕೋ ಸಂಸ್ಥೆ ಇದೆ. ಅದನ್ನು ಕೇರಳ ಸರ್ಕಾರದ ಸಹಾಯದಿಂದ ಕರ್ನಾಟಕ ಸರ್ಕಾರದವರು ಉಳಿಸಿಕೊಂಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಹಣದ ಕೊರತೆ ಇಲ್ಲದಂತೆ ಅದನ್ನು ನೋಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಕರ್ನಾಟಕ ಟೊಬ್ಯಾಕೋ ಕೋ—ಆಪರೇಟೀವ್ ಸೊಸೈಟಿ ಎಂದು, ಒಂದು ಸಹಕಾರ ಸಂಸ್ಥೆಯನ್ನು ತಾವು ಸ್ಥಾಪನೆ ಮಾಡಿದ್ದೀರಿ. ವಾಸ್ತವವಾಗಿ ಹೊಗೆಸೊಪ್ಪು ಬೆಳೆಯುವುದು ನಿಪ್ಪಾಣಿಯಲ್ಲಿ, ಆದರೆ ಅದರ ಆಫೀಸ್ ಎಲ್ಲ ಇರುವುದು ಬೆಳಗಾಂನಲ್ಲಿ. ಈ ರೀತಿ ಏತಕ್ಕೆ ಮಾಡಿದಿರಿ? ನಿಪ್ಪಾಣಿಯಲ್ಲೇ ಆ ಕಛೇರಿಯನ್ನು ಮಾಡಬೇಕಾಗಿತ್ತು. ಅಲ್ಲಿ ಮಾಡಿದ್ದರೆ ಹೊಗೆಸೊಪ್ಪು ಬೆಳೆಗಾರರಿಗೆಲ್ಲ ತುಂಬ ಅನುಕೂಲವಾಗುತ್ತಿತ್ತು. ಈ ಹೊಗೆಸೊಪ್ಪನ್ನು ಆ ಸಂಸ್ಥೆಯವರು ಕೊಂಡುಕೊಂಡರೂ ಅವರು ಈ ಕೂಡಲೇ ಮಾರಾಟ ಮಾಡುವ ಸ್ಥಿತಿಯಲ್ಲಿ ಇಲ್ಲ. ಹೊಗೆಸೊಪ್ಪನ್ನು ಖರೀದಿ ಮಾಡಿ ಅದನ್ನು ಮಾರಾಟಕ್ಕೆ ಬಿಡುಗಡೆ ಮಾಡಬೇಕಾದರೆ ಒಂದು ವರ್ಷ ಬೇಕು, ಅಂದರೆ ಕೊಂಡ ಮರು ವರ್ಷಕ್ಕೆ ಬಿಡುಗಡೆ ಮಾಡಬಹುದು. ಅಂದಾಗ ಒಂದು ವರ್ಷಕ್ಕೆ ಬೇಕಾದ ಹಣವನ್ನು ಇಡಬೇಕಾಗುತ್ತದೆ. ಅಲ್ಲಿನ ಟರ್ನ್ ಓವರ್ ಒಂದು ವರ್ಷಕ್ಕೆ ೩೦ ಕೋಟಿಯಷ್ಟು ಆಗುತ್ತದೆ. ಆ ಪ್ರಕಾರ ಕನಿಷ್ಟ ಪಕ್ಷ ಎಷ್ಟು ಕೊಳ್ಳಬೇಕಾಗುತ್ತದೆ ಎಂಬುದನ್ನು ಆಲೋಚಿಸಿದರೆ ಆ ರೀತಿ ಆಗುತ್ತಿಲ್ಲ. ನೀವು ಅವರಿಗೆ ಆ ಒಂದು ಬಾಬಿಗಾಗಿ ಕೊಟ್ಟದ್ದು ಒಂದು ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಆ ಒಂದು ಕೋಟಿ ರೂಪಾಯಿ ಅವರಿಗೆ ಬರೀ ನಶ್ಯ ಎಳೆಯುವ ಹಾಗೆ ಏನೂ ಪ್ರಯೋಜನವಿಲ್ಲ. ತಾವು ಅಲ್ಲಿ ಪ್ರವೇಶ ಮಾಡಿದ ನಂತರ ರೈತರಿಗೆ ಪ್ರಯೋಜನವಾಗಬೇಕಾಗಿದ್ದರೆ ಕೊನೇ ಪಕ್ಷ ೪ ಕೋಟಿ ರೂಪಾಯಿಗಳ

ನ್ನಾದರೂ ಕೊಡಬೇಕಾಗಿತ್ತು. ಒಂದು ಕೋಟಿ ರೂಪಾಯಿ ಕೊಟ್ಟದ್ದರಲ್ಲಿ ಅವರಿಗೆ ಸಿಕ್ಕಿದ್ದು ಶೇಕಡ ೨೫ರಷ್ಟು ಮಾತ್ರ. ಉಳಿದ ಶೇಕಡ ೭೫ರಷ್ಟನ್ನು ಯಾವಾಗ ಕೊಡುತ್ತೀರಿ? ಇಂಥ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಮಧ್ಯವರ್ತಿಗಳಿಂದ ಅವರನ್ನು ರಕ್ಷಣೆ ಮಾಡಬೇಕೆಂಬ ಉದ್ದೇಶ ಇದ್ದಾಗ, ಶೇಕಡ ೨೫ ರಷ್ಟು ಹಣವನ್ನು ಪಡೆದುಕೊಂಡು ಅವರು ಪುನಃ ಸಾಹುಕಾರರ ಮನೆ ಬಾಗಿಲಿಗೆ ಹೋಗುವ ಪರಿಸ್ಥಿತಿ ಉಂಟಾಗಿದೆ. ಇದು ಖಂಡಿತ ಆಗಬಾರದಾಗಿತ್ತು. ತಾವು ಹಣ ಕಡಿಮೆಯಾಗಿರುವುದರ ಬಗ್ಗೆ ಸ್ವಲ್ಪವೂ ಯೋಚನೆ ಮಾಡಿಲ್ಲ. ನಾವು ಸುಮ್ಮನೆ ಅಷ್ಟು ಇಡಿ, ಇಷ್ಟು ಇಡಿ ಎಂದು ಹೇಳುವುದಿಲ್ಲ. ಅದಕ್ಕೆ ಬೇಕಾದಷ್ಟು ಹಣವನ್ನು ಇಡಬೇಕು. ತಂಬಾಕು ಬೆಳೆಗಾರರನ್ನು ಮಧ್ಯವರ್ತಿಗಳ ಸಂಕೋಲೆ ಯಿಂದ ಬಿಡಿಸಬೇಕಾಗಿದ್ದರೆ ಸಾಕಷ್ಟು ಹಣವನ್ನು ತಾವು ಒದಗಿಸಬೇಕಾಗುತ್ತದೆ. ಇಲ್ಲದಿದ್ದರೆ ನಿಮ್ಮ ಉದ್ದೇಶ ವಿಫಲವಾಗುತ್ತದೆಂದು ಹೇಳುತ್ತೇನೆ. ಈ ಹಲವಾರು ಕಾರಣಗಳಿಂದ ಹೊಗೆಸೊಪ್ಪು ಬೆಳೆ ಗಾರರಿಗೆ ಅವರು ಕಟಾವು ಮಾಡಿದ ೭ ದಿವಸಗಳೊಳಗೆ ಅದರ ಬೆಲೆಯನ್ನು ಕೊಡಬೇಕೆಂಬ ಸಲಹೆಯನ್ನು ತಮ್ಮ ಮುಂದಿಡುತ್ತೇನೆ, ಇವತ್ತಿನ ದಿವಸ ಬೀಡಿ ಕಾರ್ಮಿಕರ ಸಂಘ ನಮ್ಮ ಪ್ರದೇಶದಲ್ಲಿ ಆಗುತ್ತಿದೆ. ಇದು ಮಾನ್ಯ ವೀರಪ್ಪ ಮೊಯಿಲಿಯವರ ಪ್ರಯತ್ನದಿಂದ ನಡೆಯುತ್ತಿದೆ. ಆದರೆ, ಇಡೀ ವರದಿಯಲ್ಲಿ ಒಂದೇ ಒಂದು ಶಬ್ದವನ್ನು ಸಹ ಅದರ ಬಗ್ಗೆ ಹೇಳಿಲ್ಲ. ನಾನು ಅದಕ್ಕೆ ತಾವು ಎಷ್ಟು ಹಣ ಇಡು ತ್ತೀರೆಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದಕ್ಕೆ ಹಣ ಕೊಡುತ್ತೇವೆ.

ಶ್ರೀ ಕೆ. ರಾಮಭಟ್.—ಈ ಸಾರಿಯ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣ ಇಡಬೇಕಾಗಿತ್ತು. ಬಡ್ಜೆಟ್ಟಿನಲ್ಲಿ ಇಲ್ಲದಿರುವ ಹಣವನ್ನು ಎಲ್ಲಿಂದ ತಂದು ಕೊಡುತ್ತೀರಿ? ನಿಮ್ಮ ಕಿಸೆಯಿಂದ ತೆಗೆದುಕೊಡುತ್ತೀರಾ? ಇಲ್ಲಿ ಬೀಡಿ ಕಾರ್ಮಿಕರು ಅಷ್ಟು ಮಂದಿ ಇಲ್ಲ. ನಮ್ಮ ಕಡೆ ಜಾಸ್ತಿ ಇದ್ದಾರೆ. ಅವರು ಕಂಟ್ರಾಕ್ಟ್‌ದಾರರ ಹಾಗೂ ಮಧ್ಯವರ್ತಿಗಳ ಜಾಲದಿಂದ ಹೊರಗೆ ಬರಬೇಕು. ಅವರಿಂದ ಆಗತಕ್ಕ ಸುಲಿಗೆ ನಿಲ್ಲಬೇಕೆಂಬ ಉದ್ದೇಶದಿಂದ ಬೀಡಿ ಕಾರ್ಮಿಕರ ಸಹಕಾರ ಸಂಘಗಳನ್ನು ನಮ್ಮ ಜಿಲ್ಲೆಯಲ್ಲಿ ಎಲ್ಲ ಕಡೆ ಮಾಡಲಾಗುತ್ತಿದೆ. ಅಂದರೆ ಅದು ಸರ್ಕಾರೀ ಕೃಪಾಪೋಷಿತವೆ? ತಮಗೆ ಅದು ಗೊತ್ತಿಲ್ಲವೆ? ಆದರೂ ಬಡ್ಜೆಟ್ಟಿನಲ್ಲಿ ಏತಕ್ಕೆ ಆ ಬಾಬಿಗಾಗಿ ಹಣವನ್ನು ಇಟ್ಟಿಲ್ಲ? ಮಾನ್ಯ ಮಂತ್ರಿಗಳು ಈಗ ಹಣ ಕೊಡುವುದಾಗಿ ಹೇಳಿರುವುದರಿಂದ ಅದನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಅದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರೇಷ್ಮೆ ಕೈಗಾರಿಕೆಯ ಬಗ್ಗೆ ಹೇಳುವುದಾದರೆ, ದೊಡ್ಡಬಳ್ಳಾಪುರದಲ್ಲಿ ೬ ಸಾವಿರ ಮಗ್ಗಗಳು ಇದ್ದವು, ಅವುಗಳಲ್ಲಿ ೨೦ ಸಾವಿರ ಜನ ನೇಕಾರರು ಕೆಲಸ ಮಾಡುತ್ತಿದ್ದರು. ಇವತ್ತಿನ ದಿವಸ ಅವುಗಳ ಪೈಕಿ ೪ ಸಾವಿರ ಮಗ್ಗಗಳು ನಿಂತಿವೆ. ಅವು ಏತಕ್ಕೆ ಕೆಲಸ ಮಾಡುತ್ತಿಲ್ಲ ಎಂಬುದು ವೀರಪ್ಪ ಮೊಯಿಲಿ ಯವರಿಗೆ ಗೊತ್ತು. ಅಲ್ಲಿ ಇವತ್ತಿನ ದಿವಸ ಆ ನೇಕಾರರು ನೇಕಾರರ ಸಂಘವನ್ನು ಸ್ಥಾಪಿಸಬೇಕೆಂದು ಹೊರಟಿದ್ದಾರೆ. ಅದಕ್ಕೆ ಏನು ಮಾಡುತ್ತೀರಿ? ಅದನ್ನು ಉಳಿಸುತ್ತೀರೋ, ಬೆಳಸುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು. ಅದರ ಬಗ್ಗೆ ಕೂಡ ನಿಮ್ಮ ಈ ವರದಿಯಲ್ಲಿ ಯಾವ ಉಲ್ಲೇಖವೂ ಇಲ್ಲ. ಇಡೀ ದೇಶದಲ್ಲಿ ಅಲ್ಲ, ಇಡೀ ಜಗತ್ತಿನಲ್ಲೇ ಒಂದು ಉತ್ತಮ ಸ್ಥಾನ ಇರುವ ರೇಷ್ಮೆ ಉದ್ದಿಮೆಗೆ ನಮ್ಮ ರಾಜ್ಯದಲ್ಲಿ ಇಂಥ ದುರ್ಗತಿ ಬಂದಿದೆ. ಈ ಬಗ್ಗೆ ಸರ್ಕಾರ ಏಕೆ ಗಮನ ಕೊಟ್ಟಿಲ್ಲ? ಈ ಬಗ್ಗೆ ಒಂದು ಸಹಕಾರ ಸಂಘವಾಗಿದೆ ಎಂದು ಹೇಳಿದ್ದೀರಿ, ಅದು ಎಲ್ಲಿಗೆ ಬಂದಿದೆ ಮತ್ತು ಎಷ್ಟರಮಟ್ಟಿಗೆ ಕೆಲಸ ಮಾಡಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇವತ್ತು ಅಲ್ಲಿ ಜನ ಕಣ್ಣೀರು ಹಾಕುತ್ತಿದ್ದಾರೆ. ಅವರ ರಕ್ಷಣೆಗೆ ಧಾವಿಸಬೇಕಾದಂತಹ ಸರ್ಕಾರ ಈ ಬಗ್ಗೆ ಅಲಕ್ಷ್ಯದಿಂದಿದೆಯೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಒಂದು ಮಾತನ್ನು ನಿಮ್ಮ ವರದಿಯಲ್ಲಿ ಹೇಳಿದ್ದೀರಿ. ಈ ಬಗ್ಗೆ ನಾನು ಚರ್ಚೆ ಮಾಡದಿದ್ದರೆ ಅದು ಸರಿಹೋಗುವುದಿಲ್ಲ ಈ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಘೋಷಣೆಯನ್ನು ಮಾಡಿದರು. ಸರ್ಕಾರ ಯಾವ ರೀತಿ ವಚನ ಭ್ರಷ್ಟವಾಗಿದೆ ಎಂಬ ಬಗ್ಗೆ ನಾನು ಇಲ್ಲಿ ಹೇಳಬೇಕಾಗುತ್ತದೆ. ಈ ಸಹಕಾರ ಸಂಘಗಳ ರಕ್ಷಣೆಗಾಗಿ ರೈತರಿಗೆ ಕೊಟ್ಟ ಸಾಲವನ್ನು ಮನ್ನಾ ಮಾಡುತ್ತೇವೆಂದು ಮತ್ತು ೮೬ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಇವರು ತಮ್ಮ ವರದಿಯಲ್ಲಿ ಏನು ಹೇಳಿದ್ದಾರೆಂದರೆ,

"In all 4,56,650 applications in respect of short-term and medium term loans and 97,379 applications in respect of

long-term loans were received by the District Level Committees. After scrutiny, 12,892 applications under short-term and medium term loans were accorded waiver of loans to the extent of Rs. 76.84 lakhs. In respect of long-term loans it was found that none of the applications was eligible for being considered for waiver since they did not fulfill the conditions stipulated."

ಯಾವ ಕಂಡೀಷನ್ಸ್ ಪುಲ್‌ಫಿಲ್ ಮಾಡಬೇಕು ಸ್ವಾಮಿ? ತಾವು ಸಾಲ ಮನ್ನಾ ಮಾಡುತ್ತೇವೆಂದು ಅನೌನ್ಸ್ ಮಾಡಿದಾಗ ಯಾವ ಕಂಡೀಷನ್ಸ್‌ನ್ನೂ ಹಾಕಿರಲಿಲ್ಲ. ಕಂಡೀಷನ್ಸ್ ಹಾಕಿದ್ದು ಯಾವಾಗ ? ಇದನ್ನೇ ನಾನು ವಚನಭ್ರಷ್ಟತೆಯೆಂದು ಹೇಳುತ್ತಿದ್ದೇನೆ. ಆಡಿದ ಮಾತಿಗೆ ತಪ್ಪುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನಗಳು ಬೇಕಾಗಿಲ್ಲ. ನಮ್ಮ ಜಿಲ್ಲೆಯಲ್ಲಿಯೇ ೧೨ ಸಾವಿರ ಜನ ರೈತರು ಅರ್ಜಿ ಹಾಕಿದ್ದರು. ಇವರು ಅರ್ಜಿ ಹಾಕಿದಾಗ ಯಾವ ಕಂಡಿಷನ್ಸ್ ಇರಲಿಲ್ಲ. ಈ ರೀತಿಯ ಕಂಡೀಷನ್ಸ್ ಏಕೆ ಹಾಕಿದರು? ಈ ಕಾರಣದಿಂದಾಗಿ ಈ ೧೨ ಸಾವಿರ ಜನರೂ ಒಬ್ಬೊಬ್ಬರು ೧೦೦ ರೂಪಾಯಿಗಳಂತೆ ಖರ್ಚು ಮಾಡಿದರು. ಸುಮಾರು ೧೨ ಲಕ್ಷ ರೂಪಾಯಿ ಖರ್ಚು ಮಾಡಿದರು. ಇವರು ಹಾಕಿರುವ ಕಂಡೀಷನ್ ಎಂದರೆ ೬ ಆಣೆಗಿಂತಾ ಬೆಳೆ ಕಡಿಮೆಯಾಗಿರಬಾರದು, ೩ ವರ್ಷ ಕಾಲ ಸತತವಾಗಿ ಆ ಪ್ರದೇಶ ಬರಗಾಲಕ್ಕೆ ತುತ್ತಾಗಿರಬೇಕೆಂದು. ಇದರಿಂದ ಅವರಿಗೆ ಸಿಕ್ಕದ್ದು ಬರೀ ಮೂರು ನಾಮ ಮಾತ್ರ. ಸರ್ಕಾರದ ಈ ಕಾರ್ಯಕ್ಕೆ ಅಲ್ಲಿನ ಜನ ಸರ್ಕಾರವನ್ನು ಸ್ತುತಿ ಮಾಡುತ್ತಿದ್ದಾರೆ. ಈ ರೀತಿ ತಾವು ಮಾಡಬಾರದಿತ್ತು. ಆಡಿದ ಮಾತಿನ ಪ್ರಕಾರ ನಡೆದುಕೊಳ್ಳಬೇಕಾಗಿತ್ತು. ಈ ಬಗ್ಗೆ ತಾವು ನಿಯಮಗಳನ್ನು ಮಾಡಿಯಾದ ಮೇಲೆ ತಮ್ಮ ಈ ಘೋಷಣೆ ಮಾಡಬೇಕಾಗಿತ್ತು. ನಿಯಮಗಳನ್ನು ತಿಳಿಸಿ ಅರ್ಜಿಗಳನ್ನು ಕೇಳಬೇಕಾಗಿತ್ತು. ನೀವು ಉಲ್ಟಾಪಲ್ಟಾ ಮಾಡಿ ಅವರಿಂದ ಅರ್ಜಿ ಪಡೆದು ಈ ರೀತಿ ಅನ್ಯಾಯ ಮಾಡಿರುವುದು ಬಹಳ ದುಃಖದ ಸಂಗತಿಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕಡೆ ಶತ್ರುಗಳಿಗೂ ಇಂತಹ ಕಷ್ಟ ಕೊಡಬಾರದು ಎಂದು ಹೇಳುತ್ತಾ ಈ ರೀತಿ ಸರ್ಕಾರ ವರ್ತನೆ ಮಾಡಿದೆ.

ಇನ್ನು ರೈತರು ಪಿ.ಎಲ್.ಡಿ. ಬ್ಯಾಂಕ್‌ಗಳ ಮೂಲಕ ಸಾಲ ಪಡೆಯುವಾಗ ಸುಮಾರು ೧೦೦ ರಿಂದ ೧೫೦ ರೂಪಾಯಿ ಖರ್ಚಾಗುತ್ತಿರುವುದರಿಂದ ಕೇವಲ ೧೦–೧೫ ರೂಪಾಯಿ ಖರ್ಚಿನಲ್ಲೇ ಅವರ ಮನೆ ಬಾಗಿಲಿಗೆ ಸಾಲವನ್ನು ತೆಗೆದುಕೊಂಡು ಹೋಗಿ ಕೊಡುವ ವ್ಯವಸ್ಥೆ ಬಗ್ಗೆ ಕಳೆದ ವರ್ಷ ಮಾನ್ಯ ಸಹಕಾರ ಸಚಿವರು ಆಶ್ವಾಸನೆಯನ್ನು ಈ ಸದನದಲ್ಲಿ ಕೊಟ್ಟಿದ್ದರು ಆ ಬಗ್ಗೆ ಸರ್ಕಾರದವರು ಏನಾದರೂ ನಿರ್ಣಯವನ್ನು ತೆಗೆದುಕೊಂಡಿದ್ದಾರೆಯೇ? ಆ ಆಶ್ವಾಸನೆ ಹಾಗೆಯೇ ಉಳಿದಿದೆ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕು.

ಇನ್ನು ನಮ್ಮ ಸಹಕಾರಿ ಸಂಸ್ಥೆಗಳು, ಅದರಲ್ಲೂ ಮುಖ್ಯವಾಗಿ ಬ್ಯಾಂಕುಗಳು ಅವರ ವಾರ್ಷಿಕ ವರದಿ ಹಾಗೂ ಬ್ಯಾಲೆನ್ಸ್‌ಷೀಟನ್ನು ಅವರ ಸದಸ್ಯರಿಗೆ ಕೊಟ್ಟರೆ ಸಾಲದೇ? ಇವರು ಇವುಗಳನ್ನು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಿ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಇದರ ಅಗತ್ಯ ಏನು? ಈ ಬಗ್ಗೆ ಸರ್ಕಾರ ಗಮನ ಕೊಡಬೇಕು. ಇಷ್ಟು ಹಣ ಖರ್ಚು ಮಾಡಿ ೨ ಪುಟ ೪ ಪುಟದಲ್ಲಿ ಇವನ್ನು ಪ್ರಕಟಿಸುವುದರಿಂದ ಸಹಕಾರಿ ಸಂಸ್ಥೆಗಳ ಹಣ ಸುಮ್ಮನೆ ಪೋಲಾಗುತ್ತಿದೆ. ವ್ಯಾಪಾರಸ್ಥರಿಗಾದರೆ ಪ್ರಚಾರ ಬೇಕು ಈ ಸಂಸ್ಥೆಗಳಿಗೆ ಪ್ರಚಾರ ಏಕೆ ಬೇಕು? ಇದನ್ನು ನಿಲ್ಲಿಸುವುದು ಸಾಧ್ಯವಿದೆ. ಈ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಿಯಂತ್ರಿತ ಮಾರುಕಟ್ಟೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ತಾವು ಮಾರ್ಕೆಟ್ ಸೆಸ್ ವಸೂಲಿ ಮಾಡುತ್ತೀರಿ. ಅದಕ್ಕೆ ಅನುಗುಣವಾಗಿ ನೀವು ಅವರಿಗೆ ಸೌಕರ್ಯ ಕೊಡುತ್ತಿದ್ದೀರಾ? ಇಲ್ಲ. ನಮ್ಮಲ್ಲಿ ಸೆಸ್ ವಸೂಲಿ ಮಾಡುತ್ತಿದ್ದಾರೆ. ಮಾರ್ಕೆಟ್ ಯಾರ್ಡ್ ಕಟ್ಟಿಸಿದ್ದಾರೆ. ಅಲ್ಲಿ ನೀವು ೨ ರೂಪಾಯಿ ಸೆಸ್‌ನ್ನು ಕಲೆಕ್ಟ್ ಮಾಡುತ್ತಿದ್ದೀರಿ. ಆದರೆ ನೆರೆ ರಾಜ್ಯವಾದ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಇದು ಕೇವಲ ೩೦ ಪೈಸೆ ಇದೆ. ಇದರ ಪರಿಣಾಮವಾಗಿ ಮಾಲು ಅತ್ತ ಕಡೆಗೆ ಹೆಚ್ಚು ಹೋಗುತ್ತಿವೆ. ಆದ್ದರಿಂದ ಇದನ್ನು ಕನಿಷ್ಟ ೫೦ ಪೈಸೆ ಮಾಡಿದರೆ ಮಾತ್ರ ಸರಿದೂಗಿಸಬಹುದೇ ಹೊರತು ಇಲ್ಲದಿದ್ದರೆ ನಮ್ಮ ಸರಕು ಅಲ್ಲಿಗೆ ಹೋಗಿ ಲುಕ್ಸಾನಾಗುತ್ತದೆನ್ನುವ

ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಿಯಂತ್ರಿತ ಮಾರುಕಟ್ಟೆಯ ಉದ್ದೇಶ ಏನೆಂದರೆ. ರೈತರಿಗೆ ಸರಿಯಾದ ತೂಕ ಸಿಕ್ಕಬೇಕು ಮತ್ತು ಸರಿಯಾದ ರೇಟು ಸಿಗಬೇಕು ಎಂಬುದು. ಆದರೆ ಇವತ್ತು ಏನಾಗಿದೆಯೆಂದರೆ, ಇವತ್ತು ಈ ವ್ಯಾಪಾರಸ್ಥರು ಹಳ್ಳಿಗಳಿಗೆ ಹೋಗುತ್ತಿದ್ದಾರೆ. ರೈತರ ಮನೆಗಳಿಗೆ ಹೋಗಿ ಇವರು ಮಾಲನ್ನು ಖರೀದಿ ಮಾಡುತ್ತಿದ್ದಾರೆ. ಅವರು ಕೊಟ್ಟಿದ್ದೇ ರೇಟು. ಇದನ್ನು ತಪ್ಪಿಸುವುದಕ್ಕೆ ನನ್ನ ಹತ್ತಿರ ಪರಿಹಾರ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ತಜ್ಞರ ಅಭಿಪ್ರಾಯವನ್ನು ಪಡೆದು ರೈತರಿಗೆ ಆಗುತ್ತಿರುವ ಈ ರೀತಿಯ ಸುಲಿಗೆಯನ್ನು ತಪ್ಪಿಸಬೇಕು. ಈ ಬಗ್ಗೆ ಮಾರ್ಕೆಟ್ ಯಾರ್ಡ್ ಮಾಡಿದರೂ ಪ್ರಯೋಜನವಾಗಿಲ್ಲ. ರೈತರಿಗೆ ಆಗುತ್ತಿರುವ ಸುಲಿಗೆಯನ್ನು ನಿಲ್ಲಿಸಬೇಕೆಂದು ನಾನು ಹೇಳುತ್ತಿದ್ದೇನೆ ಮತ್ತು ಈ ಎಲ್ಲಾ ಬಾಬುಗಳಿಗೆ ಇವತ್ತು ನಮ್ಮ ಬಡ್ಜೆಟ್ಟಿನಲ್ಲಿ ಇಟ್ಟಿರುವ ಹಣ ಸಾಲದಾಗಿದೆ. ಆದ್ದರಿಂದ ಈ ಬಾಬಿಗೆ ಕನಿಷ್ಟ ೬೦ ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕೆಂದೂ, ಈ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳಲ್ಲಿ ಸಮಾಲೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

೩-೦೦ ಪಿ. ಎಂ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಮತ್ತು ಮಾರುಕಟ್ಟೆ ಸಚಿವರು ಮಂಡಿಸಿದಂತಹ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ಕೆಲವೊಂದು ವಿಚಾರಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸಹಕಾರ ತತ್ವ ನಮಗೇನೂ ಹೊಸದಲ್ಲ. ಪುರಾತನ ಕಾಲದಿಂದಲೂ ಸಹಕಾರದ ಸಿದ್ಧಾಂತವನ್ನು ನಮ್ಮ ಸಮಾಜ ಒಪ್ಪಿಕೊಂಡು ಬಂದಿದೆ. ಇದು ಭಾರತದ ಸಂಸ್ಕೃತಿಯಲ್ಲಿ, ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಂತಹ ಪದ್ಧತಿಯಾಗಿದೆ. ಇದಕ್ಕೆ ಅನೇಕ ನಿದರ್ಶನಗಳನ್ನು ನಾವು ಕೊಡಬಹುದು. ನಮ್ಮದು ಅವಿಭಕ್ತ ಕುಟುಂಬ ಪದ್ಧತಿಯನ್ನು ಹೊಂದಿದಂತಹ ಸಮಾಜ ಇತ್ತೀಚೆಗೆ ಸಹಕಾರ ಸಂಸ್ಥೆಗಳು ಸುವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುವ ಉದ್ದೇಶದಿಂದ ಮತ್ತು ಅವುಗಳು ಕಾರ್ಯೋನ್ಮುಖವಾಗಿ ಹೊಸ ರೀತಿಯಲ್ಲಿ ಕೆಲಸಮಾಡುವಂತೆ ಸರ್ಕಾರ ಕಾನೂನಿನ ಚೌಕಟ್ಟಿನೊಳಗೆ ತಂದಿರುವುದು ಒಪ್ಪತಕ್ಕ ವಿಚಾರ ಸಹಕಾರ ತತ್ವದ ಮೂಲ ಉದ್ದೇಶ ಮೂಲ ಸಿದ್ಧಾಂತ ವ್ಯಕ್ತಿ ವ್ಯಕ್ತಿಯನ್ನು ಶೋಷಣೆ ಮಾಡುವುದನ್ನು ವ್ಯಕ್ತಿಸಮಾಜ ಶೋಷಣೆ ಮಾಡುವುದನ್ನು ತಪ್ಪಿಸುವುದು ಶೋಷಣೆ ರಹಿತವಾದಂತ ಸಮಾಜಕ್ಕೆ ಅನುಗುಣವಾಗಿ ಸಹಕಾರ ತತ್ವವನ್ನು ರೂಪಿಸುವ ಮೂಲ ಉದ್ದೇಶ ಇತ್ತು. ಗ್ರಾಮಾಂತರ ಪ್ರದೇಶದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ, ಅವರಿಗೆ ಬೇಕಾಗಿರುವ ಸಮಗ್ರ ಸಾಧನೆ ಸಂಪನ್ಮೂಲಗಳನ್ನು ಒದಗಿಸಿಕೊಡುವ ಮೂಲ ಉದ್ದೇಶಕ್ಕಾಗಿ ನಾವು ಈ ಸಂಸ್ಥೆಗಳನ್ನು ಮಾಡಬೇಕಾದಂತಹ ಅವಶ್ಯಕತೆ ಇದೆ. ಇವುಗಳ ಮೂಲಕ ಸಾಮಾಜಿಕ ನ್ಯಾಯವನ್ನು ಒದಗಿಸಿ, ಶೋಷಣೆಯನ್ನು ತಪ್ಪಿಸಬೇಕಾಗಿತ್ತು. ಅದಕ್ಕೆ ಬದಲಾಗಿ ಸಹಕಾರ ಸಂಸ್ಥೆಗಳು ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿವೆ ಎಂಬುದನ್ನು ನಾವು ಈಗ ಒಪ್ಪಿಕೊಳ್ಳಬೇಕಾಗುತ್ತದೆ, ವ್ಯಕ್ತಿ ವ್ಯಕ್ತಿಯನ್ನು ಕಾನೂನಿನ ವಿರುದ್ಧವಾಗಿ ಶೋಷಣೆ ಮಾಡುವುದನ್ನು ತಪ್ಪಿಸಲಿಕ್ಕೆ ಹೋಗಿ, ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕವಾಗಿ ದುರ್ಬಲರನ್ನು, ಒಕ್ಕಲುದಾರರನ್ನು ಶೋಷಣೆ ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಇದನ್ನು ಅರ್ಥಮಾಡಿಕೊಂಡು ಸೂಕ್ತಪರಿಹಾರವನ್ನು ಶೀಘ್ರವಾಗಿ ಕಂಡುಕೊಳ್ಳದೇ ಹೋದರೆ ನಮ್ಮ ಉದ್ದೇಶ ಈಡೇರುವುದಿಲ್ಲ. ಮತ್ತು ಈ ಸಹಕಾರ ಆಂದೋಳನ ವಿಫಲವಾಗುತ್ತದೆ. ಆದ್ದರಿಂದ ಈ ದಿಕ್ಕನ್ನು ಶೀಘ್ರವಾಗಿ ಬದಲಾಯಿಸಬೇಕಾದುದು ಅತ್ಯಾವಶ್ಯಕ ಎನ್ನುವ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇದಕ್ಕೆ ಬೇಕಾದಷ್ಟು ದೃಷ್ಟಾಂತಗಳನ್ನು ಕೊಡಬಹುದು, ಇವತ್ತು ಸಮಾಜದಲ್ಲಿ ಶೋಷಣೆ ನಡೆಯುತ್ತಿದೆ ? ಇದು ಸರ್ಕಾರದ ಗಮನಕ್ಕೂ ಬಂದಿದೆ. ಮಾನ್ಯ ಮಂತ್ರಿಯವರು ರಾಜ್ಯದಲ್ಲಿರತಕ್ಕ ಸಹಕಾರ ಸಂಸ್ಥೆಗಳು ಒಟ್ಟು ೨೨,೦೦೦ ಎಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೨೦,೦೦೦ ಸಹಕಾರ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಪ್ರಮುಖ್ಯವಾಗಿ ಪ್ರಾಥಮಿಕ ಸಹಕಾರಸಂಘಗಳು ಈರಾಜ್ಯದ ರೈತನಿಗೆ ಹೆಚ್ಚು ಸಹಾಯವನ್ನುಕೊಟ್ಟು ಅವನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ದಿಕ್ಕಿನಲ್ಲಿ ಕೆಲಸ ಮಾಡುವಂತಹ ಸುಮಾರು ೪೫೫೦ ಪ್ರಾಥಮಿಕ ಸಹಕಾರಿ ಸಂಘಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿವೆ. ಈ ಸಂಸ್ಥೆಗಳು ರೈತನಿಗೆ ಬೇಕಾಗಿರುವಂತಹ ಸಾಲ ಸವಲತ್ತುಗಳನ್ನು ಒದಗಿಸಿಕೊಟ್ಟು, ಅವನಿಗೆ ಬೇಕಾಗಿರುವಂತ ಆರ್ಥಿಕ ನೆರವನ್ನು ಒದಗಿಸಿಕೊಡುವ

ದರ ಜೊತೆಗೆ, ಅವನು ಬೆಳೆದಂತ ದವಸಧಾನ್ಯಗಳಿಗೆ ಯೋಗ್ಯ ರೀತಿಯಲ್ಲಿ ಮಾರುಕಟ್ಟೆಯನ್ನು ಒದಗಿಸಿ ಕೊಡಬೇಕಾದುದು ಈ ಸಂಸ್ಥೆಗಳ ಆದ್ಯಕರ್ತವ್ಯ ಮತ್ತು ಮೂಲ ಉದ್ದೇಶ. ಇವತ್ತು ಈ ಸಂಸ್ಥೆಗಳು ಯಾವರೀತಿಯಲ್ಲಿ ಸಾಲ ಕೊಡುತ್ತಿವೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಪರಿಶೀಲನೆ ಮಾಡಬೇಕಾಗಿದೆ. ರಿಸರ್ವ್ ಬ್ಯಾಂಕಿನ ಕಾನೂನುಗಳಿಗೆ ಬದ್ಧರಾಗಿ, ಶೇಕಡ ೬ ಮತ್ತು ೭ ರ ಬಡ್ಡಿ ದರದಲ್ಲಿ ಹಣವನ್ನು ಪಡೆದು ಅಪೆಕ್ಸ್ ಬ್ಯಾಂಕ್ ಮುಖಾಂತರ, ಜಿಲ್ಲಾ ಸಹಕಾರಿ ಬ್ಯಾಂಕುಗಳ ಮುಖಾಂತರ ಪ್ರಾರ್ಥಮಿಕ ಸಹಕಾರ ಸಂಘಗಳ ಮುಖಾಂತರ ಸಾಲದ ಸೌಲಭ್ಯವನ್ನು ರೈತನಿಗೆ ತಲುಪಿಸಬೇಕಾದರೆ, ಸುಮಾರು ೧೨ ರಿಂದ ೧೩.೫೦ ಪೈಸೆಗಳ ಬಡ್ಡಿ ದರವನ್ನು ಬಡ ರೈತನ ಮೇಲೆ ಹಾಕುತ್ತೀರಿ ? ಮಧ್ಯವರ್ತಿ ಸಹಕಾರ ಸಂಸ್ಥೆಗಳನ್ನು ಉಳಿಸಲಿಕ್ಕಾಗಿ ಮತ್ತು ಬೆಳಸಲಿಕ್ಕಾಗಿ ಸುಮಾರು ೬.೫೦ ಪೈಸೆ ಬಡ್ಡಿ ದರವನ್ನು ರೈತ ದಂಡದ ರೂಪದಲ್ಲಿ ತೆರಬೇಕಾಗಿದೆ. ಈ ಸಂಸ್ಥೆಗಳನ್ನು ಉಳಿಸಲಿಕ್ಕೆ ಮಾತ್ರ ಬಡ ರೈತನ ಮೇಲೆ ೬-೫೦ ಪರ್ಸೆಂಟು ಹೆಚ್ಚು ದಂಡವನ್ನು ಹಾಕುತ್ತಿದ್ದೀರಿ ಎಂದರೆ ಅತಿಶಯೋಕ್ತಿಯಾಗಲಾರದು. ಸ್ವಾಮಿ, ಈ ಸಂಸ್ಥೆಗಳಿಗಾಗಿ ರೈತ ಇರಬೇಕೋ ? ರೈತನಿಗಾಗಿ ಸಂಸ್ಥೆಗಳಿರಬೇಕೋ ? ಅವನ ತಲೆಯ ಮೇಲೆ ೬.೫೦ ರಷ್ಟು ಹೆಚ್ಚು ಬಡ್ಡಿಯನ್ನು ಹಾಕಿ ರೈತನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇವೆಂದು ಹೇಳುವುದಾದರೆ ನಾವು ಈ ಅಂಶವನ್ನು ಸ್ವಲ್ಪ ವಿಮರ್ಶೆ ಮಾಡಿ, ನೋಡಬೇಕಾಗುತ್ತದೆ, ನಮ್ಮ ಮಿತ್ರರಾದ ಶ್ರೀ ರಾಮಭಟರವರು ಹೇಳಿದಹಾಗೆ ರೈತ ವರ್ಷೇ ವರ್ಷೇ ಹಲವಾರು ಸಾಲಗಳಿಗಾಗಿ ಬಡ್ಡಿಯನ್ನು ತೆತ್ತು ತೆತ್ತು, ಅವನ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಬದಲು ಅತ ಆರ್ಥಿಕದುರಂತಕ್ಕೆ ಗುರಿಯಾಗಿದ್ದಾನೆಂದು ಹೇಳಿದರು. ರೈತನ ಉತ್ಪನ್ನಕ್ಕೆ ಸೂಕ್ತ ಬೆಲೆ ಸಿಗದೇ ಹೋದರೆ, ರೈತನ ಅವನತಿ ಆಗದೇ ಮತ್ತೇನಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಯೋಚಿಸಬೇಕೆಂದು ಹೇಳುತ್ತೇನೆ. ರೈತರನ್ನು ನೇರವಾಗಿ ಶೋಷಣೆ ಮಾಡುವಂತಹ ಕೇಂದ್ರಗಳು ಈ ಸಹಕಾರಿ ಸಂಸ್ಥೆಗಳು. ರೈತ ಸಾಲ ಪಡೆಯ ಬೇಕಾದರೆ, ಪಾಲು ಬಂಡವಾಳವನ್ನು ಇಡಬೇಕಾಗುತ್ತದೆ. ಶೇಕಡ ೨೦ ರಷ್ಟು ಪಾಲು ಬಂಡವಾಳವನ್ನು ಇಡಬೇಕು,, ಅವನಿಗೆ ಡಿವಿಡೆಂಟ್ ಎನ್ನುವುದು ಸಿಗುವುದೇ ಇಲ್ಲ. ರಾಜ್ಯದಲ್ಲಿ ಡಿವಿಡೆಂಟ್ ಕೊಡುವಂತಹ ಸಂಸ್ಥೆಗಳು ಮೂರು ನಾಲ್ಕು ಇರಬಹುದು. ಶೇಕಡ ೨೦ ರಷ್ಟು ಹಣವನ್ನು ಪಾಲು ಬಂಡವಾಳವಾಗಿ ತೊಡಗಿಸಿ, ರೈತ ಸಾಲ ಪಡೆಯಬೇಕು ಪಡೆಯತಕ್ಕ ಸಾಲಕ್ಕೆ ಬಡ್ಡಿ, ಪಾಲು ಬಂಡವಾಳಕ್ಕೆ ಬಡ್ಡಿ ಹಾಕಿ ರೈತರಿಂದ ವಸೂಲು ಮಾಡುವುದು ಇವತ್ತು ರೈತನ ದುರಂತಕ್ಕೆ ಕಾರಣವಾಗಿದೆ ಎನ್ನುವಂತ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರೈತನಿಗೆ ಬೇಕಾದಂತ ರಸಗೊಬ್ಬರಗಳನ್ನು ಒದಗಿಸಿಕೊಡುವಂತಹ ಜವಾಬ್ದಾರಿ ಹೊಣೆಯನ್ನು ಸಹಕಾರಿ ಸಂಸ್ಥೆಗಳಿಗೆ ಒದಗಿಸಿಕೊಟ್ಟಿದ್ದೀರಿ. ಇಲ್ಲೂ ಕೂಡ ಮಧ್ಯವರ್ತಿಗಳಿಂದ ಆಗತಕ್ಕ ಶೋಷಣೆಯನ್ನು ತಪ್ಪಿಸುವ ಉದ್ದೇಶದಿಂದ ಇದನ್ನು ಮಾಡಲಾಯಿತು. ಮಾರುಕಟ್ಟೆ ಫೆಡರೇಷನ್ ಮುಖಾಂತರವಾಗಿ, ಸಹಕಾರಿ ಸಂಸ್ಥೆ[illegible]ವರು ರಸಗೊಬ್ಬರಗಳನ್ನು ಕಡ್ಡಾಯವಾಗಿ ಪಡೆಯಬೇಕೆಂದು ಸುತ್ತೋಲೆ ಇರುವುದರಿಂದ ಪ್ರತಿಯೊ[illegible] ರೈತನು ಅಲ್ಲಿಂದಲೇ ಗೊಬ್ಬರಗಳನ್ನು ಪಡೆಯಬೇಕಾಗಿದೆ. ಇಲ್ಲಿ ನಡೆಯುತಕ್ಕ ಶೋಷಣೆ ಯಾವರೀತಿ ಇದೆ ಅಂದರೆ, ಇದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಸುಫಲ ರಸಗೊಬ್ಬರಗಳನ್ನು ಒಂದು ಚೀಲಕ್ಕೆ ೧೫-೨೦ ರೂಪಾಯಿ ದಂಡ ತೆರಬೇಕಾಗಿದೆ. ಮಾರ್ಕೆಂಟಿಗ್ ಫೆಡರೇಷನ್ನಿನಲ್ಲಿ ೧೯೦೦ ರೂಪಾಯಿಗಳಿಗೆ ಸಿಗುವಂತಹ ಸುಫಲ, ತಾಲೂಕು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ, ಪ್ರಾಥಮಿಕ ಸಹಕಾರಿ ಸಂಸ್ಥೆಗಳ ಮೂಲಕ ರೈತ ಪಡೆಯುವಾಗ ಅದು ಒಂದು ಟನ್ನಿಗೆ ೨೧೬೦ ರೂಪಾಯಿ ಆಗುತ್ತದೆ. ಒಂದು ಟನ್ನಿಗೆ ಸುಮಾರು ೨೫೦-೩೦೦ ರೂಪಾಯಿಗಳನ್ನು ಹೆಚ್ಚು ರೈತ ಕೊಡಬೇಕಾಗುತ್ತದೆ. ಅಂದರೆ ಒಂದು ಚೀಲಕ್ಕೆ ೧೫-೨೦ ರೂಪಾಯಿಗಳವರೆಗೆ ರೈತ ದಂಡ ತೆರಬೇಕಾಗುತ್ತದೆ. ರಸಗೊಬ್ಬರಗಳನ್ನಾಗಲೀ, ಕ್ರಿಮಿನಾಶಕ ವಸ್ತುಗಳನ್ನಾಗಲೀ ನೇರವಾಗಿ ತಲುಪಿಸುವಂತೆ ಹಕ್ಕು ಇವುಗಳಿಗೆ ಇಲ್ಲ. ಅದು ಕೂಡ ಹಳೆಯ ಸ್ಟಾಕು ಶಿಲ್ಕು ಇದ್ದರೆ ಕೊಡುತ್ತಾರೆ ರೈತನ ಮೇಲೆ ಹೊರಲಾರದಷ್ಟು ಹೊರೆಯನ್ನು ಏರಿ ಅವನನ್ನು ಸಂಪೂರ್ಣವಾಗಿ ಶೋಷಣೆ ಮಾಡಿ, ಮಾರ್ಕೆಟಿಂಗ್ ಫೆಡರೇಷನು ಗಳನ್ನು ತಾಲ್ಲೂಕು ಮಾರ್ಕೆಂಟಿಂಗ್ ಫೆಡರೇಷನ್‌ಗಳನ್ನು ಅಪೆಕ್ಸ್ ಬ್ಯಾಂಕ್‌ಗಳನ್ನು ಉಳಿಸಿ ಕೊಳ್ಳುವುದಕ್ಕಾಗಿ ಪ್ರಯತ್ನ ಮಾಡುತ್ತಾ ಇದ್ದಾರೆ. ತಾವು ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ರೈತರು ಬೆಳೆದ ಉತ್ಪನ್ನಗಳನ್ನು ಶೇಖರಿಸುವ ಬಗ್ಗೆ ಪ್ರಚಾರ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ, ಉಗ್ರಾಣಗಳನ್ನು ನಿರ್ಮಾಣ ಮಾಡಿದ್ದಾರೆ. ರೈತ ಬೆಳೆದಂತಹ ಮಾಲುಗಳನ್ನು ಜೋಪಾನವಾಗಿ ಇಟ್ಟು, ಯೋಗ್ಯ ಬೆಲೆ ಬಂದಾಗ ಮಾರಾಟ ಮಾಡುವಂತಹ ವ್ಯವಸ್ಥೆ. ಆದರೆ, ಉಗ್ರಾಣಗಳಲ್ಲಿ ಇಡುವುದಕ್ಕೆ ೧೮–೨೦ ಪರ್ಸೆಂಟ್ ಪರ್ಚೇಸ್ ಸೇರಿ ಬಡ್ಡಿಯನ್ನು ತೆರಬೇಕಾಗುತ್ತದೆ. ಇದನ್ನು ತಪ್ಪಿಸುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇದು ಕೂಡ ನೇರವಾಗಿ ರೈತನನ್ನ ಶೋಷಣೆ ಮಾಡುವಂತ ಕ್ರಮ. ಇವುಗಳನ್ನು ಪುನರ್ ಪರಿಶೀಲನೆ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ, ಸಹಕಾರಿ ಸಂಸ್ಥೆಗಳು ರೈತನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಬದಲು, ಅವನ ಆರ್ಥಿಕ ದುರಂತಕ್ಕೆ ಕಾರಣವಾಗುತ್ತವೆ ಎಂಬುದನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಸಹಕಾರ ಸಂಸ್ಥೆಗಳ ವಿಷಯ ಮಾತನಾಡುವ ಮೊದಲು ವಿವಿಧ ಸಹಕಾರ ಸಂಸ್ಥೆಗಳ ಸ್ಥೂಲ ಪರಿಚಯ ಅಗತ್ಯ, ನಮಗೆ ತಿಳಿದ ಮಟ್ಟಿಗೆ ಎಲ್ಲಾ ಸಹಕಾರ ಸಂಸ್ಥೆಗಳ ಚಿತ್ರವನ್ನು ಸವಿಸ್ತಾರವಾಗಿ ಇಲ್ಲಿ ತಿಳಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ ಸಹಸ್ರಾರು ಸಹಕಾರ ಸಂಸ್ಥೆಗಳಿವೆ. ಇವುಗಳಲ್ಲಿ ಪ್ರಮುಖವಾದದ್ದು, ಪ್ರಾಥಮಿಕ ಸಹಕಾರ ಸಂಘ ೪,೫೯೬, ಪ್ರಾಥಮಿಕ ಬಳಕೆದಾರರ ಸಂಘ ೧,೪೭೦, ಹಾಲು ಉತ್ಪಾದಕರ ಸಂಘ ೨,೪೭೨, ನಗರ ಬ್ಯಾಂಕುಗಳು ಇನ್ನಿತರ ಸಹಕಾರ ಸಂಘಗಳು ೧,೧೬೧, ಕೃಷಿ ಸಹಕಾರ ಸಂಘಗಳು ೬೦೦, ನೀರಾವರಿ ಸಂಘಗಳು ೧೫೬ ಪ್ರೋಸೆಸಿಂಗ್ ೧೬೪, ತಾಲ್ಲೂಕ್ ಮಾರ್ಕೆಟ್ ಸಹಕಾರ ಸಂಸ್ಥೆಗಳು ೨೪೩ ಇಷ್ಟೇ ಅಲ್ಲದೆ ವ್ಯಕ್ತಿಗೊಂದು ಸಹಕಾರ ಸಂಘಗಳು, ಮೀನುಗಾರರ ಸಂಘ, ಗಂಡು ಮಕ್ಕಳ ಸಂಘ, ಹೆಣ್ಣು ಮಕ್ಕಳ ಸಂಘ, ವಿದ್ಯಾರ್ಥಿಗಳ ಸಂಘ, ಉಪಾಧ್ಯಾಯರ ಸಂಘ, ಜಾತಿಗೊಂದು ಸಂಘ, ಗರೀಬಿಹಠಾವೋ ಸಂಘ, ಹೀಗೆ ಸುಮಾರು ೨೨ ಸಹಸ್ರ ಸಹಕಾರ ಸಂಘಗಳು ಇವೆ. ಈ ತರಹ ಎಲ್ಲಾ ಸಹಕಾರ ಸಂಘಗಳನ್ನು ಇಟ್ಟುಕೊಂಡು ನಾವು ಏನು ಸ್ಥಾಪಿಸಲಿಕ್ಕೆ ಹೊರಟಿದ್ದೇವೆ ಎನ್ನುವುದು ನನ್ನ ಮೂಲಪ್ರಶ್ನೆ. ಸಹಕಾರ ಸಂಘಗಳನ್ನು ಹೆಚ್ಚು ಮಾಡುವುದೇ ನಮ್ಮ ಉದ್ದೇಶವೇನು ? ಸಹಕಾರ ಸಂಘಗಳಿಂದ ಸಾಧಿಸುವಂಥ ಉದ್ದೇಶ ಏನಾದರೂ ಇದೆಯೋ ಎಂದು ನಾನು ಮಾನ್ಯ ಸಹಕಾರ ಸಚಿವರನ್ನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದಾದ್ಯಂತ ಬಳಕೆದಾರರ ಸಂಘಗಳಿವೆ. ಗಂಡು ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಎಂದು ಬೇರೆ ಬೇರೆ ಬಳಕೆದಾರರ ಸಂಘಗಳನ್ನು ಮಾಡಿದ್ದಾರೆ, ಇವುಗಳ ಪರಿಸ್ಥಿತಿ ಏನು. ಈ ವರ್ಷ ಪ್ರಾರಂಭ ಮಾಡಿದ ಸಂಘ ಸಂಸ್ಥೆಗಳು ಮುಂದಿನ ವರ್ಷ ನಿಷ್ಕ್ರಿಯವಾಗಿ ಹೋಗುತ್ತವೆ. ಕೇವಲ ಸರ್ಕಾರದ ಪಾಲು ಬಂಡವಾಳ ಪಡೆದುಕೊಂಡು, ಸರ್ಕಾರದ ಸಬ್ಸಿಡಿ ಪಡೆದುಕೊಂಡು ಒಂದು ವರ್ಷದಲ್ಲಿಯೇ ಹೇಳಲಿಕ್ಕೆ ಹೆಸರಿಲ್ಲದಂತೆ ಹೋಗುತ್ತಿವೆ. ಇಂದು ನಾಯಿ ಕೊಡೆಗಳಂತೆ ಸಹಸ್ರಾರು ಸಹಕಾರ ಸಂಘಗಳು ಹುಟ್ಟಿಕೊಂಡಿವೆ. ಮಾನ್ಯ ಸಹಕಾರ ಸಚಿವರು ಎಷ್ಟು ಗ್ರಾಹಕರ ಸಂಘಗಳು ಲಾಭದಲ್ಲಿ ನಡೆದಿವೆ, ಎಷ್ಟು ಗ್ರಾಹಕರ ಸಂಘಗಳು ನಷ್ಟದಲ್ಲಿ ನಡೆದಿವೆ ಎನ್ನುವ ಬಗ್ಗೆ ಈ ಸದನದ ಮುಂದೆ ಅಂಕಿಅಂಶಗಳನ್ನು ಇಟ್ಟರೆ ಸತ್ಯಾಂಶ ಗೊತ್ತಾಗುತ್ತದೆ. ಇನ್ನು ಮಿಲ್ಕ್ ಕೋ–ಆಪರೇಟೀವ್ ಸೊಸೈಟಿ ಬಗ್ಗೆ ಹೇಳಬೇಕೆಂದರೆ ಇದೊಂದು ದೊಡ್ಡ ಕಥೆ. ಇವು ರಾಜ್ಯಾದ್ಯಂತ ೨೪೭೨ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದೆ ; ನಮ್ಮ ತಾಲ್ಲೂಕಿನಲ್ಲೂ ಇದೆ ; ನಮ್ಮ ಊರಿನಲ್ಲೂ ಇದೆ, ಅತಿ ಕಡಿಮೆ ದರದಲ್ಲಿ ೮.೫ ಅಂಶ ಇರುವ ಹಾಲಿಗೆ ಎರಡೂವರೆ ರೂಪಾಯಿ ಸಾಮಾನ್ಯ ಧಾರಣೆ ಕೊಟ್ಟು, ಅದೇ ಹಾಲಿನಿಂದ ಬೆಣ್ಣೆ ಅಂಶ ಸಂಪೂರ್ಣ ತೆಗೆದು ೩ರ ಅಂಶಕ್ಕೆ ಇಳಿಸಿ, ಅನಂತರ ನೀರು ಪೌಡರ್ ಹಾಕಿ ರೂ. ೩–೬೫ ಪೈಸೆಗೆ ಹಾಲನ್ನು ಇವುಗಳು ಮಾರುವ ವಿಚಾರ ತಮಗೆ ಗೊತ್ತಿದೆ. ಇಷ್ಟೆಲ್ಲಾ ಆದರೂ ಕೂಡ ಈ ಸಹಕಾರಿ ಸಂಘಗಳು ಲಕ್ಷಾಂತರ ರೂಪಾಯಿ ನಷ್ಟದಲ್ಲಿ ನಡೆಯುತ್ತಿವೆ. ಈ ತರಹ ಆದಮೇಲೆ ಈ ಸಹಕಾರಿ ಸಂಘಗಳು ಏತಕ್ಕೆ ಇರಬೇಕು, ಒಂದು ಕಡೆ ಹಾಲು ಉತ್ಪಾದನೆ ಮಾಡುವವರಿಗೆ ಸರಿಯಾದಂಥ ಬೆಲೆ ದೊರೆಯದೆ, ಅವರ ಶೋಷಣೆಯಾಗುತ್ತಿದ್ದರೆ, ಇನ್ನೊಂದು ಕಡೆ ಬಳಕೆದಾರರಿಗೂ ಸರಿಯಾದ ಹಾಲು ದೊರಕದೆ ಶೋಷಣೆಯಾಗುತ್ತಿದೆ. ಇವೊತ್ತು ಉತ್ಪಾದಕರಿಗೆ ವಂಚನೆ ಆದರೂ ಪರವಾಯಿಲ್ಲ, ಬಳಕೆದಾರರಿಗೆ ಅನುಕೂಲವಾಗುತ್ತದೆಯೋ ಅಂದರೆ ಅದೂ ಇಲ್ಲ. ಈ ನಷ್ಟದಲ್ಲಿ ನಡೆಯುತಕ್ಕ ಸಹಕಾರ ಸಂಸ್ಥೆಗಳು ಯಾರಿಗೆ ಇರಬೇಕು ಎಂದು ನೇರವಾದ ಪ್ರಶ್ನೆಯನ್ನು ನಾನು ಸಹಕಾರ ಸಚಿವರಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ. ಆದುದರಿಂದ, ಇದಕ್ಕೆ ಬೇಕಾದಂಥ ಮಾರ್ಪಾಡು ಮಾಡುವುದು ಅವಶ್ಯವಿದೆ. ಸಹಕಾರ ಸಂಘಗಳನ್ನು ಉಳಿಸುವುದು ಮಾತ್ರವಲ್ಲ ಸಹಕಾರ ಸಂಘಗಳ ಉದ್ದೇಶ ನೇರವೇರುವಂಥ ಕಾರ್ಯಕ್ರಮ

ಹಾಕಿಕೊಳ್ಳಬೇಕೆಂದು ನಾನು ಸಹಕಾರ ಸಚಿವರನ್ನು ಈ ಸದನದ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ತಾಲ್ಲೂಕ್ ಮಟ್ಟದ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಒಂದು ನೇರವಾದ ಪ್ರಶ್ನೆಯನ್ನು ಕೇಳಬೇಕಾಗಿದೆ. ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳ ಉದ್ದೇಶ ವೇನು ? ನನಗೆ ತಿಳಿದಮಟ್ಟಿಗೆ ರೈತನಿಗೆ ಬೇಕಾಗಿರುವಂಥ ಎಲ್ಲಾ ತರಹದ ರಸಗೊಬ್ಬರ, ಕ್ರಿಮಿನಾಶಕ, ಆಹಾರ ಧಾನ್ಯಗಳನ್ನು ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಿ, ಅವನು ಬೆಳೆದಂಥ ಉತ್ಪನ್ನವನ್ನು ಪಡೆದು ಮಾರಾಟ ಮಾಡಬೇಕು, ಇದು ಎಲ್ಲಿ ನಡೆಯುತ್ತಿದೆ ? ತಾವು ಯಾವುದೇ ತಾಲ್ಲೂಕ್ ಮಾರ್ಕೆಟ್ ಸೊಸೈಟಿಗಳನ್ನು ನೋಡಿ, ಈ ಉದ್ದೇಶ ಬಿಟ್ಟು ಬೇರೆ ಎಲ್ಲಾ ಕೆಲಸಗಳು ಅಲ್ಲಿ ನಡೆಯುತ್ತವೆ. ಈ ತರಹ ನಡೆಯುವುದರಿಂದ ಏನು ಪ್ರಯೋಜನ ಇಲ್ಲ. ಸರ್ಕಾರದಿಂದ ಒಂದು ಸುತ್ತೋಲೆ ಹೊರಡಿಸಿದ್ದಾರೆ. ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಗೊಬ್ಬರ ಪಡೆದು ಅದರ ಮೇಲೆ ಟ್ರಾನ್ಸ್‌ಪೋರ್ಟ್ ಕಾಸ್ಟ್ ಹಾಕಿ, ಲಾಭಾಂಶ ಇಟ್ಟು, ಪ್ರಾಥಮಿಕ ಸಹಕಾರ ಸಂಘಗಳಿಗೆ ಕೊಡಬೇಕಾಗುತ್ತದೆ. ತಾಲ್ಲೂಕ್ ಮಟ್ಟದಲ್ಲಿ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಬ್ರಾಂಚ್ ಏನಿವೆ ಅವರು ನೇರವಾಗಿ ಸಹಕಾರ ಸಂಸ್ಥೆಗಳಿಗೆ ಗೊಬ್ಬರವನ್ನು ಒದಗಿಸಿಕೊಡುತ್ತಾರೆ. ಇವೊತ್ತು ತಾಲ್ಲೂಕ್ ಮಾರ್ಕೆಟಿಂಗ್ ಸಹಕಾರ ಸಂಸ್ಥೆಗಳೇ ನಿಷ್ಕ್ರಿಯವಾಗಿವೆ. ಇನ್ನು ಸಿಮೆಂಟ್ ವ್ಯವಹಾರದ ಬಗ್ಗೆ ಹೇಳಬೇಕೆಂದರೆ, ಸಿಮೆಂಟ್ ಏನಾದರೂ ಅಲಾಟ್ ಮಾಡಿದರೆ ಹಣ ಕಟ್ಟಿದರೂ ಕಂಪನಿಯವರು ರಿಲೀಸ್ ಮಾಡಿ ಕೊಡುತ್ತಿಲ್ಲ. ಇನ್ನು ಲೆವಿ ವಿಚಾರವಾಗಿ ಹೇಳಬೇಕೆಂದರೆ, ಇದರಲ್ಲಿ ನೇರವಾಗಿ ಭತ್ತ ಕಳುಹಿಸುವ ಹಕ್ಕು ಇಲ್ಲ. ಇವರು ಕಡ್ಡಾಯವಾಗಿ ಲೆವಿ ಆಜ್ಞೆಯನ್ನು ಪರಿಪಾಲಿಸಿ ತೆರಿಗೆಯನ್ನು ತೆತ್ತು, ಭತ್ತವನ್ನು ಅಕ್ಕಿ ಮಾಡಬೇಕಾಗುತ್ತದೆ. ತಾಲ್ಲೂಕ್ ಮಾರ್ಕೆಟ್ ಸಂಸ್ಥೆಯಲ್ಲಿ ಕೆಲಸ ಮಾಡುವಂಥ ಡೈರೆಕ್ಟರ್ ಆಗಲಿ, ಅಧ್ಯಕ್ಷರಾಗಲಿ, ಇದನ್ನು ಮಾಡಲಿಕ್ಕೆ ಸಾಧ್ಯ ಎಂದು ಸರ್ಕಾರದವರು ಹೇಳುವುದಾದರೆ ನಾನು ಈ ಸದನಕ್ಕೆ ರಾಜೀನಾಮೆ ಕೊಡುತ್ತೇನೆ. ಇವೊತ್ತು ತಾಲ್ಲೂಕ್ ಮಾರ್ಕೆಟ್ ಸಹಕಾರ ಸಂಘಗಳು ಭತ್ತವನ್ನು ಖರೀದಿಸಿ, ಲೆವಿಯನ್ನು ತೆತ್ತು, ಟ್ಯಾಕ್ಸ್ ಕೊಟ್ಟು ಅಕ್ಕಿ ಮಾಡಿ, ಗಿರಣಿಯನ್ನು ಉಳಿಸಿ ಕೊಳ್ಳಲಿಕ್ಕೆ ಸಾಧ್ಯವೇ ಅದನ್ನು ನೋಡಬೇಕಾಗುತ್ತದೆ. ಕೆಲವು ಅಂಶಗಳನ್ನು ತಾವು ಸದನದಲ್ಲಿ ಕೊಟ್ಟು ತಮಗೆ ಯಾವುದು ಬೇಕು ಅದನ್ನು ಹೇಳಿ, ಹಿಂದಿನ ವರ್ಷದ ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟು, ನಮ್ಮಿಂದ ತಮ್ಮ ಬೇಡಿಕೆಗಳಿಗೆ ಒಪ್ಪಿಗೆ ಪಡೆಯುತ್ತೀರಿ, ಅದಕ್ಕೆ ನಾವು ಒಪ್ಪಿಗೆ ಕೊಡಬೇಕಾಗುತ್ತದೆ. ಇಷ್ಟೆಲ್ಲಾ ದುರುಪಯೋಗವಾಗುತ್ತಿರುವುದರಿಂದ, ಈ ಸಹಕಾರ ಆಂದೋಳನ ಯಾವ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದೆ ಇದಕ್ಕೆ ಸರಿಯಾದಂಥ ಒಂದು ಮಾರ್ಗದರ್ಶನ ಕೊಟ್ಟು, ಹೊಸ ಚಾಲನೆ ಕೊಟ್ಟು ಇವುಗಳು ಸಕ್ರಿಯ ಪಾತ್ರ ನಿರ್ವಹಿಸದೇ ಹೋದರೆ ಮುಂದಿನ ಜನಾಂಗ ತಮ್ಮನ್ನು ಶಪಿಸುತ್ತಾರೆ. ಇವೊತ್ತು ಇರತಕ್ಕ ಸಂಸ್ಥೆಗಳನ್ನು ಸರಿಪಡಿಸುವುದು ಬಿಟ್ಟು ಮತ್ತೆ ಮತ್ತೆ ಸಂಸ್ಥೆಗಳನ್ನು ಹುಟ್ಟುಹಾಕುವುದು ಸರಿಯಲ್ಲ. ನಾವು ಕುಟುಂಬ ಕಲ್ಯಾಣ ಯೋಜನೆಯನ್ನು ಏತಕ್ಕೆ ಜಾರಿಗೆ ತರುತ್ತಿದ್ದೇವೆ. ಒಂದು ಸಣ್ಣ ಕುಟುಂಬ ಆದರೆ ಅದರಿಂದ ಸಂಸಾರಕ್ಕೆ ಹೆಚ್ಚು ಸುಖ ಆಗುತ್ತದೆ ; ಅದೇರೀತಿ ಸಂಘಗಳಲ್ಲಿ ಖರ್ಚು ವೆಚ್ಚ ಕಡಿಮೆಯಾದರೆ ಆಡಳಿತದಲ್ಲಿ ಸ್ವಲ್ಪ ಸುಖ ಸಿಕ್ಕುತ್ತದೆ. ಸಹಕಾರ ಮಂತ್ರಿಗಳಿಗೆ ಇದು ಅರ್ಥ ಆಗುವುದಿಲ್ಲವೇ. ಇವೊತ್ತು ಯಾರೇ ಕೇಳಲಿ ಅವರಿಗೆ ಒಂದು ಸಹಕಾರ ಸಂಘ ಕೊಡುವುದು ಆದರೆ ಇದರಿಂದ ಏನು ಪ್ರಯೋಜನ. ಇವೊತ್ತು ಕೋಟ್ಯಾಂತರ ರೂಪಾಯಿ ಪಾಲು ಬಂಡವಾಳ ಕೊಟ್ಟು, ಕೋಟ್ಯಾಂತರ ರೂಪಾಯಿ ಸಬ್ಸಿಡಿ ಕೊಟ್ಟು ಭ್ರಷ್ಟಾಚಾರಕ್ಕೆ ಏತಕ್ಕೆ ಅನುವು ಮಾಡಿಕೊಡುತ್ತೀರಿ ? ಹೊಸ ಹೊಸ ಸಂಸ್ಥೆಗಳನ್ನು ಬೆಳೆಸಲಿಕ್ಕೆ ಏತಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ ? ಈಗ ಇರುವ ಸಂಸ್ಥೆಗಳಲ್ಲೇ ಕೆಲವನ್ನು ಕ್ಲೋಸ್ ಮಾಡಬೇಕಾದಂಥದ್ದು ಇದೆ. ಕೇವಲ ವ್ಯಕ್ತಿಗಳಿಗಾಗಿ, ತಮ್ಮ ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ಹೊಸ ಹೊಸ ಸಂಘ ಸಂಸ್ಥೆಗಳನ್ನು ಹುಟ್ಟುಹಾಕುತ್ತಿದ್ದಾರೆ. ದೇಶದಲ್ಲಿ ಹೊಸ ಕಲ್ಪನೆ, ಚಿಂತನೆ ಮೂಡುತ್ತಿರುವಾಗ ತಾವು ಈ ಮಧ್ಯವರ್ತಿ ಸಂಸ್ಥೆಗಳನ್ನು ನಾವು ಕೊನೆಗೊಳಿಸದೇ ಹೋದರೆ ರೈತನ ಶೋಷಣೆ ತಪ್ಪುವುದಿಲ್ಲ.

ಈಗ ೧೭ ಸಾವಿರ ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳು ಇವತ್ತು ಇವೆ. ಇಷ್ಟು ಏತಕ್ಕೆ ಸ್ವಾಮಿ, ಯಾರನ್ನು ಶೋಷಣೆ ಮಾಡುವುದಕ್ಕೆ ? ತಮಗೆ ಗೊತ್ತಿದೆ ಇವನ್ನು ಅಷ್ಟೊಂದು ಸುಲಭವಾಗಿ ದರ್ಖಾಸ್ತು ಮಾಡುವುದಕ್ಕಾಗುವುದಿಲ್ಲ. ರಾಜ್ಯಮಟ್ಟದಲ್ಲಿರತಕ್ಕ ಸಹಕಾರಿ ಸಂಘಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ರಾಜ್ಯಮಟ್ಟದ ಮುಖಂಡರು ಮಾಡುತ್ತಿದ್ದಾರೆ, ಜಿಲ್ಲಾ ಮಟ್ಟದಲ್ಲಿರತಕ್ಕ ಸಹಕಾರಿ ಸಂಘಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಜಿಲ್ಲಾಮಟ್ಟದ ಮುಖಂಡರು ಮಾಡುತ್ತಿದ್ದಾರೆ.

ಹೀಗಾದರೆ ಇದರ ಕೊನೆ ಎಲ್ಲಿ ಆಗುತ್ತದೆ ? ಇವೆಲ್ಲಾ ಸಂಸ್ಥೆಗಳನ್ನೂ ಉಳಿಸಿಕೊಳ್ಳುವುದಕ್ಕಾಗಿ, ಬೆಳೆಸಿಕೊಳ್ಳುವುದಕ್ಕಾಗಿ ಇವತ್ತು ರೈತ, ಕೃಷಿಕ, ಗ್ರಾಹಕರು ದಂಡ ತೆರಬೇಕಾಗಿದೆ. ಇದನ್ನು ಮೊದಲು ತಾವು ತಪ್ಪಿಸಬೇಕಾಗುತ್ತದೆ. ಇಲ್ಲದೇ ಹೋದರೆ ಬಹುಶಃ ಮುಂದಿನ ಪೀಳಿಗೆ ನಮ್ಮನ್ನು ಶಪಿಸಿತು. ೨೨ ಸಾವಿರದಿಂದ ೨೫ ಸಾವಿರಕ್ಕೆ ನಾವು ಈ ಸಹಕಾರಿ ಸಂಘಗಳನ್ನು ಬೆಳೆಸಿದ್ದರಿಂದ ನಮ್ಮ ಸಹಕಾರ ಆಂಧೋಳನ ಬೆಳೆಯುವುದಿಲ್ಲ. ಇದರಿಂದ ಸಹಕಾರಿ ಆಂಧೋಳನ ಬಹಳ ಕೀಳುಮಟ್ಟಕ್ಕೆ ಹೋಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ತಮಗೆ ಗೊತ್ತಿದ್ದೂ, ಗೊತ್ತಿದ್ದೂ ಈ ರೀತಿ ಹೊಸ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕುವ ಪ್ರಯತ್ನ ಮಾಡುವುದು ಬೇಡಿ. ಇರುವ ಸಹಕಾರಿ ಸಂಸ್ಥೆಗಳಲ್ಲಿ ಎಷ್ಟು ಬರ್ಖಾಸ್ತು ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಬರ್ಖಾಸ್ತುಮಾಡಿ. ಸಹಕಾರಿ ಸಂಘಗಳು ಕಡಿಮೆ ಇದ್ದಷ್ಟು ಜನರಿಗೆ ಅನುಕೂಲವಾಗುತ್ತದೆ. ಒಳ್ಳೆಯದಾಗುತ್ತದೆ. ಹೆಚ್ಚಿಗೆ ಆದಷ್ಟು ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಆದ್ದರಿಂದಲೇ ಈ ಸಹಕಾರಿ ಸಿದ್ಧಾಂತಕ್ಕೆ ಹೊಸ ಚಾಲನೆಯನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಮಗೆ ಸಹಕಾರಿ ಸಂಸ್ಥೆಗಳ ಅವಶ್ಯಕತೆ ಅಷ್ಟಾಗಿ ಇಲ್ಲ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಒಂದೊಂದು ಸಹಕಾರಿ ಸಂಸ್ಥೆಗಳಿದ್ದರೆ ಎಲ್ಲರ ಬೇಡಿಕೆಗಳನ್ನೂ ಈಡೇರಿಸುವುದಕ್ಕೆ ಸಾಧ್ಯ ಇದೆ. ಹರಿಜನಗಿರಿಜನರ, ಧೋಬಿಗಳ, ಮೀನುಗಾರರ, ಕೃಷಿಕರ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಒಂದು ಸಹಕಾರಿ ಸಂಸ್ಥೆ ಇದ್ದರೆ ಸಾಕು. ಅನಾವಶ್ಯಕವಾಗಿ ಹತ್ತಾರು ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕಿ ಎಲ್ಲ ಸಂಸ್ಥೆಗಳೂ ನಿಷ್ಕ್ರಿಯವಾಗುವಂತೆ ಮಾಡುವುದಕ್ಕೆ ಬದಲು ಒಂದೊಂದೇ ಸಂಸ್ಥೆಯನ್ನು ಜಿಲ್ಲಾಮಟ್ಟದಲ್ಲಿ ತೆರೆದು ಅದಕ್ಕೆ ಬೇಕಾದ ಆರ್ಥಿಕ ಸಹಕಾರ, ಹಾಗೂ ಇನ್ನೂ ಮುಂತಾದ ಶಕ್ತಿ-ಚಾಲನೆಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಈಗ ಹೊಸದಾಗಿ ಏನೊಂದು ಸಂಸ್ಥೆ ತಲೆ ಎತ್ತುತ್ತಿದೆ ಅದಕ್ಕೆ ಹೊಸ ಚಾಲನೆಯನ್ನು ಕೊಡುವ ದಿಸೆಯಲ್ಲಿ ತಾವು ಹಿಂದೆ ಉಳಿಯಬಾರದೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರಿ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ನಾನು ಹೆಚ್ಚಿಗೆ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಸಹಕಾರಿ ಸಂಸ್ಥೆಗಳಿಗೆ ಹೊಸ ಚಾಲನೆಯನ್ನು ಕೊಡದೆ ಈಗಿರತಕ್ಕ ಘಟಕಗಳ ವಿಚಾರದಲ್ಲಿ ನಾವು ಎಷ್ಟೇ ಚರ್ಚೆ ಮಾಡಿದರೂ ಅದು ನಿಷ್ಪ್ರಯೋಜನವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಈ ಅಂಕಿಅಂಶಗಳನ್ನು ನಾವು ಆಧಾರವಾಗಿಟ್ಟುಕೊಂಡು ಏನನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ತಾವು ಕೊಟ್ಟಿರತಕ್ಕ ಅಂಕಿಅಂಶಗಳು ಸತ್ಯಕ್ಕೆ ದೂರವಾದುವು. ಬೇರೆ ಸಂದರ್ಭದಲ್ಲಿ ಚರ್ಚೆ ಮಾಡುವುದಾದರೆ ಇದನ್ನು ನಾನು ಸಾಬೀತು ಮಾಡಿ ತೋರಿಸುತ್ತೇನೆ. ಮಾನ್ಯ ಸಹಕಾರಿ ಸಚಿವರು ಬಹಳ ಅನುಭವಿಗಳು. ನಾನು ಹೇಳಿದಂಥ ಅನೇಕ ವಿಚಾರಗಳನ್ನು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ಅವುಗಳನ್ನು ಅನುಷ್ಠಾನಕ್ಕೆ ತರುವಾಗ ಕೆಲವು ತೊಡಕುಗಳು ಬರುತ್ತವೆ. ಇದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ. ಸ್ಥಾಪಿತ ಹಿತಾಸಕ್ತಿವರ್ಗ ಯಾವಾಗಲೂ ಅಡ್ಡಿ ಆತಂಕಗಳನ್ನು ಇದರ ಬಗ್ಗೆ ನಿರ್ಮಿಸುತ್ತಿರುತ್ತಿದೆ. ಆದರೆ ಅವುಗಳನ್ನೆಲ್ಲಾ ತಾವು ಎದುರಿಸಿ ಈ ಸಹಕಾರ ಆಂಧೋಳನದ ಮೂಲ ಉದ್ದೇಶಕ್ಕೆ ಏನು ಬೇಕೋ ಅದನ್ನು ಮಾಡಬೇಕು. ಈ ದೇಶದ ರೈತ ಕಾರ್ಮಿಕರಿಗೆ, ಉತ್ಪಾದಕರಿಗೆ ಯೋಗ್ಯ ವ್ಯವಸ್ಥೆಯನ್ನು ಒದಗಿಸಿಕೊಡುವುದರ ಜೊತೆಗೆ ಎಲ್ಲರಿಗೂ ಅನುಕೂಲವಾಗುವಂಥ ಒಂದು ಯೋಜನೆಯನ್ನು ರೂಪಿಸಿಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಇನ್ನು ರೆಗ್ಯುಲೆಟೆಡ್ ಮಾರ್ಕೆಟ್ ವಿಚಾರದಲ್ಲಿ, ಕೇವಲ ಒಂದೆರಡು ಮಾತುಗಳನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಒಳ್ಳೆಯ ಮಾರ್ಕೆಟ್ ವ್ಯವಸ್ಥೆಯನ್ನು ರೈತರಿಗೆ ಒದಗಿಸಿಕೊಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ. ವಿಶ್ವಬ್ಯಾಂಕ್ ಇದಕ್ಕಾಗಿ ಸಾಕಷ್ಟು ನೆರವು ಕೊಟ್ಟಿದೆ, ಅದರ ಮೇರೆಗೆ ನಾವು ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಪ್ರಾರಂಭಮಾಡಿದ್ದೇವೆ. ಈಗಾಗಲೇ ಕೆಲವು ಕಡೆ ಈ ದಿಸೆಯಲ್ಲಿ ಕೆಲಸಗಳಾಗಿವೆ. ಆದರೆ ಆಗಿರತಕ್ಕವು ನಿಷ್ಕ್ರಯವಾಗಿವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಉಪ-ಮಾರುಕಟ್ಟೆಗಳನ್ನು ನಿರ್ಮಾಣ ಮಾಡಿಕೊಟ್ಟಿದ್ದೇವೆ, ಮತ್ತೆ ಕೆಲವು ಕಡೆ ಕೆಲವು ಕಾರಣಗಳಿಗಾಗಿ ಮಾರ್ಕೆಟ್‌ಗಳನ್ನು ನಿರ್ಮಾಣ ಮಾಡಿಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಹಿಂದೆ ನಮ್ಮ ಹತ್ತಿರ ಈ ಕೆಲಸಗಳಿಗೆ ಸಾಕಷ್ಟು ಬಂಡವಾಳ ಇತ್ತು. ಆಗ ವಿಶ್ವಬ್ಯಾಂಕ್‌ನ ಸಹಾಯದ ಅವಶ್ಯಕತೆ ನಮಗೆ ಇರಲಿಲ್ಲ. ಆದರೂ ನಾವು

ಒಳ್ಳೆಯ ಮಾರ್ಕೆಟುಗಳನ್ನು ರಚಿಸುವ ವ್ಯವಸ್ಥೆ ಮಾಡಿದ್ದೇವೆ. ಆದರೆ ಕಳೆದ ೩ ವರ್ಷಗಳಿಂದ ಈ ಮಾರುಕಟ್ಟೆಯ ಸಮಿತಿ ಇಲ್ಲ, ಮಾರುಕಟ್ಟೆಗಳು ನಿಷ್ಕ್ರಿಯವಾಗುತ್ತಿವೆ. ಇದನ್ನು ನಾನು ಹೇಳಿದರೆ ಅದು ಉತ್ಪ್ರೇಕ್ಷೆ ಆದೀತು. ನಿನ್ನೆ ಮಾನ್ಯ ಅರ್ಥ ಮಂತ್ರಿಗಳು ಉಡುಪಿ ಮಾರುಕಟ್ಟೆಗೆ ಬಂದಿದ್ದರು. ಆ ಮಾರುಕಟ್ಟೆಯನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ನಾನೂ ಒಬ್ಬ ಪಾತ್ರಧಾರಿ ಆಗಿದ್ದೆ. ಮೂಲ ಮಾರುಕಟ್ಟೆ ಸಮಿತಿಯ ಅಧ್ಯಕ್ಷನಾಗಿ ತಳಹದಿಯನ್ನು ಹಾಕಿದವನು ನಾನು. ಆದ್ದರಿಂದ ಅದನ್ನು ನೋಡಿದಾಗ ನನಗೆ ಸ್ವಲ್ಪ ಬೇಸರವಾಯಿತು. ಏಕೆಂದರೆ ಆ ಮಾರುಕಟ್ಟೆ ಸಂಪೂರ್ಣವಾ ಸೋರುತ್ತಿದೆ ಆ ಕಟ್ಟಡಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಅದನ್ನು ಇವತ್ತು ಕೇಳುವವರಿಲ್ಲ. ತಮಗೆ ಸಿಬ್ಬಂದಿ ಇದೆ, ಇಂಜಿನಿಯರಿಂಗ್ ಸೆಲ್ ಇದೆ. ಈ ಕಟ್ಟಡವನ್ನು ಸರಿಪಡಿಸುವ ಬಗ್ಗೆ ತಮಗೆ ಮಾನ್ಯ ಆರ್ಥಿಕ ಮಂತ್ರಿಗಳು ಕೂಡಲೇ ಆದೇಶ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಪಿ. ರಾಮದೇವ್.—ನಿಮ್ಮದು ಒಂದು ರೀತಿಯ ಬಯಲಾಟ ಇದ್ದ ಹಾಗಿದೆ.

ಶ್ರೀ ಎ.ಜಿ. ಕೊಡಗಿ.—ನಮ್ಮ ಬಯಲಾಟವನ್ನು ನೋಡುವುದಕ್ಕೆ ತಮಗೆ ಆಸೆ ಆಗಿರಬಹುದು. ಸ್ವಾಮಿ, ನಮ್ಮ ಬಯಲಾಟವನ್ನು ತಾವು ಕೇಳಿ. ಅದು ಬಹಳ ರಸವತ್ತಾಗಿರುತ್ತೆ. ಯಕ್ಷಗಾನಕ್ಕೆ, ಬಯಲಾಟಕ್ಕೆ ನಾವು ಹೊಸ ಒಂದು ವೈಜ್ಞಾನಿಕವಾದ ಚಾಲನೆಯನ್ನು ಕೊಡುತ್ತಿದ್ದೇವೆ. ಇವತ್ತು ನಮ್ಮ ಬಯಲಾಟ ವಿಶ್ವವಿಖ್ಯಾತವಾಗುತ್ತಿದೆ. ಈಗ ಇದರ ಬಗ್ಗೆ ಮಾತನಾಡುವುದು ಬೇಡ. ಈಗ ಮಾರುಕಟ್ಟೆಗಳು ಏನು ಅಸ್ತವ್ಯಸ್ತವಾಗಿದೆ ಅದನ್ನು ಪರಿಶೀಲಿಸುವುದು ಒಂದು ಕಡೆಯಾದರೆ, ಆಗಿರತಕ್ಕ ಮಾರುಕಟ್ಟೆಗಳು ಶೀಘ್ರವಾಗಿ ಕಾರ್ಯೋನ್ಮುಖವಾಗುವಂತೆ ಮಾಡುವುದು ಇನ್ನೊಂದು ಕಡೆ. ಇಲ್ಲದೇ ಹೋದರೆ ನಾವು ಹಾಕಿರತಕ್ಕ ಬಂಡವಾಳದಿಂದ ಏನೂ ಪ್ರಯೋಜನವಿಲ್ಲದಂತಾಗುತ್ತದೆ. ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಹೂಡಿದ್ದೇವೆ. ಒಳ್ಳೆಯ ಮಾರುಕಟ್ಟೆಯನ್ನು ರಚನೆ ಮಾಡಿದ್ದೇವೆ. ಆದರೆ ಅವು ಕಾರ್ಯೋನ್ಮುಖವಾಗಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು. ಮಾನ್ಯ ಸದಸ್ಯರಾದ ರಾಮಭಟ್‌ರವರು ಮಾತನಾಡುತ್ತಾ ನಾವು ರೈತರಿಂದ ಶೇಕಡ ೨ ಪರ್ಸೆಂಟ್ ಸೆಸ್ ವಸೂಲ್ಮಾಡುತ್ತಿದ್ದೇವೆ. ಇದನ್ನು ವಸೂಲ್ಮಾಡುವ ಉದ್ದೇಶವಾದರೂ ಏನು ಇತ್ತು ಎಂದರೆ ಅಲ್ಲಿಗೆ ಬರತಕ್ಕ ರೈತರಿಗೆ ಯೋಗ್ಯ ಮಾರುಕಟ್ಟೆ ಸೌಲಭ್ಯ ಒದಗಿಸುವುದು, ಅವರಿಗೆ ಬೇಕಾದಂಥ ಉಗ್ರಾಣ, ಇನ್ನೂ ಮುಂತಾದುವನ್ನು ಒದಗಿಸುವ ಯೋಚನೆ ಇತ್ತು. ಆದರೆ ಇವತ್ತು ಅವರಿಗೆ ಇದು ಯಾವುದನ್ನೂ ಕೊಡದೆ ೨ ಪರ್ಸೆಂಟ್ ಸೆಸ್‌ನ್ನು ಸುಲಿಗೆ ಮಾಡುತ್ತಿದ್ದೀರಿ. ನಾನಾದರೂ ಹೇಳುತ್ತೇನೆ ಈ ವ್ಯವಸ್ಥೆ ಬಹಳ ಕಾಲದವರೆಗೆ ನಡೆಯುವುದಿಲ್ಲ. ಇನ್ನು ಮುಂದೆ ಇದೇ ರೀತಿ ವಸೂಲ್ಮಾಡುತ್ತೇವೆಂದು ತಿಳಿದಿದ್ದರೆ ಅದು ತಪ್ಪು ಭಾವನೆಯಾಗುತ್ತದೆ. ರೈತರಿಗೆ ಸುವ್ಯವಸ್ಥಿತ ಮಾರುಕಟ್ಟೆಯನ್ನು ಒದಗಿಸಿಕೊಟ್ಟು ಅವರಿಂದ ಸೆಸ್ ತೆಗೆದುಕೊಂಡರೆ ಯಾರೂ ಬೇಡವೆಂದು ಹೇಳುವುದಿಲ್ಲ. ತಾವು ದಯವಿಟ್ಟು ಈ ಮಾರುಕಟ್ಟೆಗಳು ಅತಿ ಶೀಘ್ರವಾಗಿ ಕಾರ್ಯೋನ್ಮುಖವಾಗುವಂತೆ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್.ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಉಪಸಭಾಪತಿಯವರೆ., ಸಭೆಯ ಮುಂದೆ ಮಂಡಿಸಿರತಕ್ಕ ಸಹಕಾರಿ ಮತ್ತು ನಿಯಂತ್ರಿತ ಮಾರುಕಟ್ಟೆಗೆ ಸಂಬಂಧಪಟ್ಟಂಥ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅನುಮತಿ ಕೊಟ್ಟಿರುವುದಕ್ಕೆ ತಮಗೆ ಅಭಿನಂದಿಸುತ್ತೇನೆ.

ಸಹಕಾರಿ ಇಲಾಖೆ ಮತ್ತು ನಿಯಂತ್ರಿತ ಮಾರುಕಟ್ಟೆ ಇಲಾಖೆಯ ಆದ್ಯ ಕರ್ತವ್ಯ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಅವಶ್ಯಕವಾದ ಎಲ್ಲ ಸಾಲ ಸೌಲಭ್ಯಗಳನ್ನು ಒದಗಿಸಿಕೊಡುವುದು. ಮಾಡಿದಂಥ ಉತ್ಪಾದನೆಯನ್ನು ವ್ಯವಸ್ಥಿತ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡುವುದು, ವ್ಯವಸ್ಥಿತ ಮಾರಾಟದ ಅವಶ್ಯಕತೆಯನ್ನು ಒದಗಿಸಿದ ಮೇಲೆ ಅದನ್ನು ಸರಿಯಾದ ರೀತಿಯಲ್ಲಿ ಗ್ರಾಹಕರಿಗೆ ವಿತರಣೆ ಮಾಡುವುದು. ಈ ಮೂರು ಜವಾಬ್ದಾರಿಗಳೂ ಈ ಎರಡು ಇಲಾಖೆಗಳ ಮೇಲೆ ಬಿದ್ದಿವೆ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಈ ವ್ಯವಸ್ಥಿತ ವಿಭಾಗಗಳಲ್ಲಿ ನಾವು ಎಷ್ಟರಮಟ್ಟಿಗೆ ಗುರಿಯನ್ನು ಮುಟ್ಟಿದ್ದೇವೆ ಎಂಬುದನ್ನು ನಾವು ನಮ್ಮ ಆತ್ಮಶೋಧನೆ ಮುಖಾಂತರ ನಿರ್ಣಯಕ್ಕೆ ಬರಬೇಕಾಗುತ್ತದೆ ಎಂದು ಪ್ರಥಮದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

೩-೩೦ ಪಿ.ಎಂ.

ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ಈವೊತ್ತು ಹೊಸ ಅಧ್ಯಾಯವನ್ನ ನಿರ್ಮಾಣ ಮಾಡತಕ್ಕಂಥ ಸನ್ನಿವೇಶದಲ್ಲಿ ಸಹಕಾರಿ ರಂಗ ಬಹಳ ಅತ್ಯಂತ ಪ್ರಮುಖವಾದ ಪಾತ್ರ ವಹಿಸುತ್ತಿದೆ ಎನ್ನತಕ್ಕಂಥ ಮಾತಂ ನಿರ್ವಿವಾದ. ಈವತ್ತು ಖಾಸಗಿ ರಂಗದಲ್ಲಿ ನಿಮ್ಮ ಆರ್ಥಿಕ ನೆರವು ಉತ್ಪಾದನೆಗೆ ದೊರಕಲಿಕ್ಕೆ ಸಾಧ್ಯವಿಲ್ಲ. ಪ್ರವೇಟ್ ಮನಿಲೆಂಡರ್ಸ್‌ಗಳನ್ನು ತಾವು ನಿರ್ನಾಮ ಮಾಡಿದಂಥ ಸನ್ನಿವೇಶದಲ್ಲಿ ಸಹಕಾರಿ ರಂಗದ ಪಾತ್ರ ಬಹಳ ಪ್ರಮುಖವಾದದ್ದಾಗಿತ್ತು. ಈ ದಿಸೆಯಲ್ಲಿ ತಾವು ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದೀರಿ ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೇ ಈವೊತ್ತು ನಿಮ್ಮ ಈ ಒಂದು ವ್ಯವಸ್ಥೆಯ ಗುರಿಯನ್ನು ಮುಟ್ಟಲಿಕ್ಕೆ ನಾಲ್ಕು ಹಂತದ ವ್ಯವಸ್ಥೆಯನ್ನು ಇಟ್ಟುಕೊಂಡು ಇದಕ್ಕೆ ರಿಸರ್ವ್ ಬ್ಯಾಂಕಿನಿಂದ ಹಣ ಬರಬೇಕಾಗಿದೆ. ಮತ್ತು ಅಲ್ಲಿಂದ ಜಿಲ್ಲಾ ಸಹಕಾರಿ ಬ್ಯಾಂಕಿಗೆ ಹೋಗಬೇಕು. ಅಂತಿಮವಾಗಿ ಪ್ರಾಥಮಿಕ ಸಹಕಾರಿ ಸಂಸ್ಥೆಗಳ ಮುಖಾಂತರ ರಾಜ್ಯದ ರಾಷ್ಟ್ರದ ಎಲ್ಲಾ ಉತ್ಪಾದಕರ ಕೈ ಸೇರಬೇಕು. ಮಾನ್ಯ ಕಕ್ಕಿಲಾಯರವರು ಮಾತನಾಡುತ್ತಾ ರಾಜ್ಯದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ಸಹಕಾರಿ ಸಂಸ್ಥೆಯಾಗಿದೆ ಎನ್ನುವ ಮಾತನ್ನು ಹೇಳಿದರು. ಇದು ಉತ್ಪಾದಕರದೇ ಇರಬಹುದು ಕುಶಲ ಕರ್ಮಿಗಳದೇ ಇರಬಹುದು, ಪ್ರತಿಯೊಂದು ಉತ್ಪಾದನೆಗೂ ಬಹಳ ಮಟ್ಟಿಗೆ ಅವಶ್ಯಕವಾಗಿ ಬಂಡವಾಳವನ್ನು ಒದಗಿಸಲು ಒಂದು ಸಾಧನ ಸಂಸ್ಥೆಯಾಗಿ ಈ ಸಂಸ್ಥೆಗಳು ನಡೆಯಬೇಕಾಗಿದೆ.

ಮಾನ್ಯ ಸಭಾಧ್ಯಕ್ಷರೇ ನಾನು ಮೊದಲನೆಯದಾಗಿ ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುವುದೇನೆಂದರೆ, ನಾನು ಯಾವುದೇ ಸಂಸ್ಥೆಯ ಬಗ್ಗೆ ಭ್ರಷ್ಟಾಚಾರದ ಆಪಾದನೆ ಮಾಡಲಿಕ್ಕೆ ಪ್ರಯತ್ನ ಪಡುವುದಿಲ್ಲ. ಭ್ರಷ್ಟಾಚಾರದ ಮೌಲ್ಯವನ್ನು ಕೂಡ ನಾನು ಹೇಳುವುದಿಲ್ಲ. ಒಂದು ವಿಷಯದ ಮಟ್ಟಿಗೆ ಮಾತ್ರ ಮಾನ್ಯ ಸಚಿವರನ್ನು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಈವೊತ್ತು ನಾಲ್ಕು ಹಂತಗಳಲ್ಲಿ ನಮ್ಮ ಉತ್ಪಾದನೆಗೆ ಬೇಕಾಗಿರತಕ್ಕಂಥ ಬಂಡವಾಳವನ್ನು ಎಷ್ಟರಮಟ್ಟಿಗೆ ಈವೊತ್ತು ತಾವು ಪೂರೈಕೆ ಮಾಡುತ್ತಿದ್ದೀರಿ ಮಾಡುವುದಕ್ಕೆ ಈ ನಾಲ್ಕು ಹಂತಗಳಲ್ಲಿ ಕೆಲಸ ಮಾಡತಕ್ಕ ಸಂಸ್ಥೆಗಳು ಕಾರ್ಯನಿರ್ವಹಣೆ ಮಾಡುತ್ತಿದೆಯೋ ಎನ್ನುವ ಬಗ್ಗೆ ತಾವು ಅರ್ಥಮಾಡಿಕೊಳ್ಳಬೇಕು. ಈ ವಿಷಯದಲ್ಲಿ ಮಂತ್ರಿಗಳ ಲಕ್ಷ್ಯ ಇಲ್ಲ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಇದ್ದಾಗ್ಯೂ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೂ ವಾಸ್ತವಾಂಶವನ್ನು ಸಭೆಯಮುಂದೆ ಇಟ್ಟರೆ ಅವರೂ ಕೂಡ ಈ ಒಂದು ಸಂತ್ಯಾಂಶವನ್ನು ಅರ್ಥಮಾಡಿಕೊಂಡು ಉಂಟಾಗಿರುವ ಸನ್ನಿವೇಶವನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ ಈವೊತ್ತು ನಮ್ಮ ಆರ್ಥಿಕ ನೀತಿ, ಅದರಲ್ಲೂ ಗ್ರಾಮಾಂತರ ಪ್ರದೇಶದ ಜನಜೀವನಾ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸತಕ್ಕಂಥದ್ದರಲ್ಲಿ ಈ ಒಂದು ಇಲಾಖೆ ಅತ್ಯಂತ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆಂದು ಮನಗಂಡರೆ ಈ ದಿಸೆಯಲ್ಲಿ ಏನು ಪ್ರಯತ್ನ ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ನಾವು ಪ್ರಶ್ನೆಯನ್ನು ಕೇಳಬೇಕಾಗಿದೆ. ಈವೊತ್ತು ಕರ್ನಾಟಕ ರಾಜ್ಯದಲ್ಲಿ ೧೯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪೈಕಿ ಬಹುಶಃ ೮ ಜಿಲ್ಲೆ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಅವಸಾನಕಾಲದಲ್ಲಿ ಇದೆ. ಅಥವಾ ಅವಸಾನಕಾಲ ಎನ್ನುವುದಕ್ಕೆ ಬದಲಾಗಿ ಅದು ಜೀವರಹಿತ ಸಂಸ್ಥೆಗಳೆಂದು ಹೇಳಲಿಕ್ಕೆ ವ್ಯಥೆಪಡುತ್ತೇನೆ. ಈ ಸಂದರ್ಭದಲ್ಲಿ ಎಕನಾಮಿಕ್ ಸರ್ವೆ ಆಫ್ ಇಂಡಿಯಾ ಅವರು ಕೊಟ್ಟಿರತಕ್ಕಂಥ ರಿಪೋರ್ಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಇಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. During 1981-82, an amount of Rs. 105 crores of credit is targeted to be disbursed of which an amount of Rs. 41.27 crores has been disbursed. ನಿಮ್ಮ ಗುರಿ ೧೯೮೧-೮೨ ರಲ್ಲಿ ೧೦೫ ಕೋಟಿ ರೂಪಾಯಿಗಳನ್ನು ಈ ರಂಗದಲ್ಲಿ ಉತ್ಪಾದನೆಗೆ ಉಪಯೋಗಿಸಲಿಕ್ಕೆ ತಾವು ವಿತರಣೆ ಮಾಡುತ್ತೇವೆಂದು ಗುರಿ ಇಟ್ಟುಕೊಂಡು ಕೇವಲ ೪೧$\frac{1}{4}$ ಕೋಟಿ ರೂಪಾಯಿಗಳು ನೀವು ವಿತರಣೆ ಮಾಡಿದ್ದೀರಿ. ತಮಗೆ ನಾನು ಪ್ರಶ್ನೆ ಕೇಳಲಿಕ್ಕೆ ಇಚ್ಛೆಪಡುವುದೇನೆಂದರೆ ನಿಮ್ಮ ಸಾಧನೆ ಎಷ್ಟರಮಟ್ಟಿಗೆ ಗುರಿ ಮುಟ್ಟಿದೆ ಎಂದು. ಇದಕ್ಕೆ ಕಾರಣವನ್ನು ಉಲ್ಲೇಖ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಇದಕ್ಕೆ ತಾವು ಒಬ್ಬರೇ ಜವಾಬ್ದಾರರೆಂದು ಹೇಳಲಿಕ್ಕೆ ನಾನು ಇಚ್ಛೆಪಡುವುದಿಲ್ಲ. ಸರ್ಕಾರದ ಧೋರಣೆಯೇ ಈವೊತ್ತು ಈ ರಾಜ್ಯದಲ್ಲಿ ಈ ಸಹಕಾರಿ ಆಂದೋಳನಕ್ಕೆ ಮಾರಕವೆಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಮಾನ್ಯ ಸಭಾಧ್ಯಕ್ಷರೇ, ನಾನು ಈ ಮಾತನ್ನು ಹೇಳುವಾಗ ೧೯೮೧–೮೨ ರ ನಮ್ಮ ಅರ್ಥಸಚಿವರು ಈ ಸದನಕ್ಕೆ ಕೊಟ್ಟಂಥ ಭಾಷಣ, ಅದರಲ್ಲಿ ಒಂದು ಮಾತನ್ನು ಈ ರೀತಿ ಹೇಳಿದ್ದಾರೆ. The Members are aware of the consistent stand taken by Government on the issue of co-operative credit. Proposals for writing off interests due from small farmers and marginal farmers have been made in the context of continued scarcity condition having affected thousands of small farmers and marginal farmers. ಹೀಗೆ ಮುಂದೆ ಹೇಳಿಕೊಂಡು ಹೋಗಿದ್ದಾರೆ. Hereafter small and marginal farmers who avail short term loans are liable to pay interest at the Reserve Bank lending rate. ಸ್ವಾಮಿ ನೇರವಾಗಿ ತಮಗೆ ನಾನು ಪ್ರಶ್ನೆ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಒಂದು ಕಡೆ ರಾಜ್ಯದಲ್ಲಿ ಬೆಳೆ ಬೆಳೆಯುತಕ್ಕಂಥ ರೈತನಿಗೆ ಪೂರ್ತಿ ಇಂಟರೆಸ್ಟನ್ನು ಮನ್ನಾ ಮಾಡುತ್ತೇವೆನ್ನುವ ವಾಗ್ದಾನದ ಮಾತನ್ನು ಈ ಸದನದಲ್ಲಿ ಹೇಳಿದರು. ೧೯೮೦–೮೧ ನೇ ಸಾಲಿನ ತಮ್ಮ ಆಯುವ್ಯಯ ಪಟ್ಟಿಯನ್ನು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಮಾಡಿದ ಭಾಷಣ ಇದು. ಈ ಮಾತನ್ನು ಹೇಳಿ ಮತ್ತೆ ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಿಗೆ ರಿಸರ್ವ್ ಬ್ಯಾಂಕ್ ರೇಟ್ ಆಫ್ ಇಂಟರೆಸ್ಟ್ ಏನು ಇದೆ ಅದೇರೀತಿ ಕೊಟ್ಟು, ಅವರಿಂದ ಕೊಟ್ಟಂಥ ಹಣವನ್ನು ವಸೂಲು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇಲ್ಲಿ ನಾವು ವಾಸ್ತವಾಂಶ ನೋಡೋಣ. ಕೇವಲ ಒಂದು ಫೀನಲ್ ಇಂಟರೆಸ್ಟ್ ವಜಾಮಾಡಬೇಕು ಎನ್ನುವ ಬಗ್ಗೆ ನಡೆದಂಥ ವಾದವಿವಾದದಲ್ಲಿ ಸಹಕಾರಸಚಿವರು ತಮ್ಮ ಅಸಹಾಯಕತೆಯನ್ನು ಈ ಸದನದಲ್ಲಿ ಪ್ರದರ್ಶನಮಾಡಿದ್ದನ್ನು ನಾವು ನೋಡಿದ್ದೇವೆ. ಒಬ್ಬ ಸಚಿವ ಸಂಪುಟದ ಸದಸ್ಯರಾಗಿ, ಸಚಿವ ಸಂಪುಟದ ಮಂತ್ರಿಯಾಗಿ ತಮ್ಮ ಇಲಾಖೆಯ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲು ಅರ್ಥಸಚಿವರು ನಾಗಾಲೋಟದಿಂದ ಓಡಿ ಏನು ಉತ್ತರ ಹೇಳಬೇಕು ಎನ್ನುವ ಅಸಹಾಯಕ ಪರಿಸ್ಥಿತಿಯನ್ನು ವ್ಯಕ್ತ ಮಾಡಿದ್ದನ್ನು ಈ ಸದನದಲ್ಲಿ ನಾವು ನೋಡಿದ್ದೇವೆ. ಈ ವಿಷಯದ ಬಗ್ಗೆ ಸಾಕಷ್ಟು ವಿಮರ್ಶೆಮಾಡಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ೧೯ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ಸ್ ಸಾಲವನ್ನು ಕೊಡತಕ್ಕ ಶಕ್ತಿಯಿಲ್ಲ. ಇಂತಹ ಪರಿಸ್ಥಿತಿಯನ್ನು ತಂದೊಡ್ಡಿರುವುದು ನಿಮ್ಮ ಆಡಳಿತದಲ್ಲಿರುವ ಅನಿಶ್ಚಿತೆ. You have no consistant stand so far as this is concerned. ಆದ್ದರಿಂದ ಇವತ್ತು ನೊಂದ ಮನಸ್ಸಿನಿಂದ ಈ ಮಾತನ್ನು ಹೇಳಬೇಕಾಗುತ್ತದೆ. ಇನ್ನೂ ಕೆಲವು ವಿಷಯಗಳನ್ನು ನಾನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ ೮ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳ ವಿಹಂಗಮ ನೋಟವನ್ನು ನೋಡೋಣ. ಶಿವಮೊಗ್ಗ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ನಾಲ್ಕು ಕೋಟಿ ರೂಪಾಯಿಗಳನ್ನು ಸಂಸ್ತಿಯಲ್ಲಿಟ್ಟಿರತಕ್ಕ ಸನ್ನಿವೇಶವಿದೆ. ಅದೇ ರೀತಿ ನಮ್ಮ ಮತ್ತು ನಿಮ್ಮ ಜಿಲ್ಲೆಯಾದ ಹಾಸನ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೮೨ ಲಕ್ಷ ರೂಪಾಯಿಗಳನ್ನು ಬಾಕಿ ನಿಲ್ಲಿಸತಕ್ಕ ಪರಿಸ್ಥಿತಿ ಬಂದಿದೆ. ಚಿತ್ರದುರ್ಗ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೧೨೫ ಲಕ್ಷ ರೂಪಾಯಿಗಳನ್ನು ಬಾಕಿ ನಿಲ್ಲಿಸತಕ್ಕ ಪರಿಸ್ಥಿತಿ ಬಂದಿದೆ. ಅದೇ ರೀತಿ ಮೈಸೂರು ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೧೬೫ ಲಕ್ಷ ರೂಪಾಯಿಗಳನ್ನು ಬಾಕಿ ನಿಲ್ಲಿಸಿದೆ. ರಾಯಚೂರು ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೭೫ ಲಕ್ಷ ರೂಪಾಯಿಗಳು, ಗುಲ್ಬರ್ಗ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೬೦ ಲಕ್ಷ ರೂಪಾಯಿಗಳು, ಕೋಲಾರ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೫೦ ಲಕ್ಷ ರೂಪಾಯಿಗಳು ತುಮಕೂರು ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ೮೦ ಲಕ್ಷ ರೂಪಾಯಿಗಳು. ಅಪೆಕ್ಸ್ ಬ್ಯಾಂಕ್‌ನವರು ಸ್ವಂತ ಬಂಡವಾಳ ನಿರ್ವಹಣೆಗೆ ಹೋಗಿರತಕ್ಕದ್ದು ಬೇರೆ ಮಾತು. ಇವತ್ತು ಇರತಕ್ಕ ವಾಸ್ತವಾಂಶ ೮ ಜಿಲ್ಲಾ ಬ್ಯಾಂಕ್‌ಗಳು ನಿರ್ಜೀವ ಸಂಸ್ಥೆಗಳಾಗಿದ್ದು ರೈತನಿಗೆ ಸಾಲ ಕೊಟ್ಟು ರೈತ ಉತ್ಪಾದನೆಯನ್ನು ಮಾಡಲು ಸಕಾಲದಲ್ಲಿ ಆರ್ಥಿಕ ನೆರವು ಕೊಡಲು ಸಂಪೂರ್ಣ ವಿಫಲಗೊಂಡಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ರಿಸರ್ವ್ ಬ್ಯಾಂಕ್‌ನವರು ಸಹಕಾರ ಬ್ಯಾಂಕ್‌ಗಳಿಗೆ ನಿರ್ಬಂಧ ಹಾಕಲಾಗಿದೆ. ಅಪೆಕ್ಸ್ ಬ್ಯಾಂಕ್ ಇವತ್ತು ನಿರ್ಜೀವ ಸಂಸ್ಥೆಯಾಗಿ ತನ್ನ ಬಂಡವಾಳವನ್ನೆಲ್ಲಾ ನೆರವು ಕೊಡುವ ಪರಿಸ್ಥಿತಿಯುಂಟಾಗಿದೆ. ಜೂನ್ ೩೦ನೇ ತಾರೀಖಿನೊಳಗೆ ೬೦ ಪರ್ಸೆಂಟ್ ರಿಕವರಿ ಮಾಡದಿದ್ದರೆ ಈ ಸಂಸ್ಥೆಗಳಿಗೆ ಸಾಲವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವ ಆರ್ಡರ್ ಏನಿದೆ ಅದರಿಂದ ಈ ಸನ್ನಿವೇಶದಲ್ಲಿ ರಾಜ್ಯದಲ್ಲಿ ೧೧೫ ಕೋಟಿ ರೂಪಾಯಿ ಸಾಲ ಕೊಡತಕ್ಕ ಲೆಕ್ಕಾಚಾರದ ಗುರಿಯನ್ನು ಏನು

ತಾವು ಇಟ್ಟುಕೊಂಡಿದ್ದೀರಿ ಅದನ್ನು ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ಇದು ಸರ್ಕಾರದ ವೈಫಲ್ಯವೆಂದು ನಾನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ರೈತರ ಬೇಡಿಕೆಗಳನ್ನು ಎಲ್ಲವನ್ನು ಒಪ್ಪಿಕೊಳ್ಳಬೇಕು ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ಆತನ ಕೆಲವು ಮುಖ್ಯವಾದ ಬೇಡಿಕೆಗಳನ್ನು ಅರ್ಥ ಮಾಡಿಕೊಳ್ಳಬೇಕು ಅದನ್ನು ಅರ್ಥ ಮಾಡಿಕೊಳ್ಳದಿರುವುದೇ ಇಂಥ ಪರಿಸ್ಥಿತಿಗೆ ಮೂಲ ಕಾರಣವಾಗಿದೆ. ಮಾನ್ಯ ಶ್ರೀಕಂಠಯ್ಯನವರು ರೈತ ಕುಟುಂಬದಿಂದಲೇ ಬಂದಂತಹ ವ್ಯಕ್ತಿ ಬಹುವರ್ಷಗಳ ಕಾಲ ಶಾಸಕರಾಗಿ ಗ್ರಾಮಾಂತರ ಪ್ರದೇಶದ ಜೀವನವನ್ನು ನೋಡಿದ್ದಾರೆ, ಅನುಭವಿಸಿದ್ದಾರೆ, ಅನುಭವಿಸುತ್ತಿದ್ದಾರೆ. ರೈತನ ಪರಿಸ್ಥಿತಿ ಏನಾಗಿದೆ ? ತಾವು ಕೊಟ್ಟಿರತಕ್ಕ ಆಯವ್ಯಯ ಪಟ್ಟಿಯಲ್ಲಿರತಕ್ಕ ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಾಸನ ಜಿಲ್ಲೆ ಒಂದೇ ಸಾಕು ಅವರು ಒಂದು ಮಾತು ಹೇಳಿದ್ದಾರೆ, Short and Medium term credit limit sanctioned by Reserve Bank of India. ೧೯೮೦-೮೧ರಲ್ಲಿ ೧೨೫ ಲಕ್ಷ ರೂಪಾಯಿಗಳು ೧೯೮೧-೮೨ರಲ್ಲಿ ಸೊನ್ನೆ. ರೈತರ ಹೆಸರಿನಲ್ಲಿ ಆಂದೋಳನವನ್ನು ನೋಡುತ್ತಿದ್ದೇವೆ. ಅವರು ಬಹಳ ಮೌನವಾಗಿ ನಡೆಸಿದ್ದಾರೆ. ಅದರ ಬಗ್ಗೆ ಹಲವಾರು ವ್ಯಾಖ್ಯಾನ ನಡೆದಿದೆ. ರೈತ ಅವನು ಬೆಳೆ ಇಡತಕ್ಕ ಕಾಲದಲ್ಲಿ ೧೦೦ ರೂಪಾಯಿಗೆ ೬೦ ಸೇರು ಭತ್ತವನ್ನು ಬಡ್ಡಿಯ ರೂಪದಲ್ಲಿ ಕೊಟ್ಟು ಸಾಲ ಪಡೆಯುತಕ್ಕ ಪ್ರವೃತ್ತಿಯನ್ನು ನೀವು ತಪ್ಪಿಸಲಿಕ್ಕೆ ಸಾಧ್ಯವಾಗಿಲ್ಲ. ಇದನ್ನು ನೀವು ಯಾರು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಸಕಾಲದಲ್ಲಿ ಸಾಲ ದೊರೆಯದೆ ಅವನು ಖಾಸಗಿಯವರ ಹತ್ತಿರ, ಮನಿ ಲೇಂಡರ್ಸ್ ಹತ್ತಿರ ಹೋಗುತ್ತಾನೆ. ಅವರನ್ನು ನಾವು ನಿಂದನೆ ಮಾಡುತ್ತಿದ್ದೇವೆ. ಮತ್ತು ಆ ಪದ್ಧತಿಯನ್ನು ತೊಡೆದುಹಾಕುತ್ತೇವೆಂದು ಹೇಳುತ್ತೇವೆ. ಆದರೆ ಇದು ವಾಸ್ತವಾಂಶದಲ್ಲಿ ಇಲ್ಲ. ಬಿತ್ತನೆ ಮಾಡತಕ್ಕ ಕಾಲದಲ್ಲಿ ನೂರು ರೂಪಾಯಿಗೆ ೬೦ ಸೇರು ಭತ್ತವನ್ನು ಬಡ್ಡಿಯ ರೂಪದಲ್ಲಿ ಕೊಟ್ಟು ಸಾಲವನ್ನು ಪಡೆಯತಕ್ಕ ಚಿತ್ರವನ್ನು ನಾವು ಇಂದೂ ನೋಡುತ್ತಿದ್ದೇವೆ. ಸರ್ಕಾರಿ ಸಹಕಾರಿರಂಗ ಇದರ ಪ್ರಗತಿ ಯಾವ ಹಂತಕ್ಕೆ ಮುಟ್ಟಿದೆ ಎಂದು ಹೇಳಿದರೆ ೧೦೦ ರೂಪಾಯಿಗಳಿಗೆ ಸಾಲ ಸೌಲಭ್ಯ ಪಡೆಯುತಕ್ಕ ರೈತ ೬೦ ಸೇರು ಭತ್ತ ಬಡ್ಡಿಯ ರೂಪದಲ್ಲಿ ಕೊಡುತ್ತಿದ್ದಾನೆ ಎಂದರೆ ನಾವು ಯಾವ ಪರಿಸರವನ್ನು ನಿರ್ಮಾಣವನ್ನು ಮಾಡಿದ್ದೇವೆಂದು ನಾವೂ ನೀವೂ ಯಾವ ರೀತಿಯಲ್ಲಿ ಯಶಸ್ವಿಯಾಗಿದ್ದೇವೆಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ರಿಸರ್ವ್ ಬ್ಯಾಂಕ್ ಕೂಡ ತನ್ನ ಆರ್ಥಿಕ ನೀತಿಯನ್ನು ಏನು ಇದೆ ಅದು ಮನಿ ಲೆಂಡರ್ಸ್ ಪಾಲಿಸಿ ಅದನ್ನು ಚೇಂಜ್ ಮಾಡಬೇಕಾಗುತ್ತದೆ. ಬಹಳ ಕಾಲ ಜನಗಳಿಗೆ ಮೋಸ ಮಾಡುವುದಕ್ಕಾಗುವುದಿಲ್ಲ. ೪೦ ಪರ್ಸೆಂಟ್ ಸಾಲ ಜೂನ್ ೩೦ನೇ ತಾರೀಖಿನೊಳಗೆ ರಿಕವರಿ ಆದರೆ ಮಾತ್ರ ಸಾಧ್ಯ. Even though their dues are going to be cleared by its own resources of the State Apex Bank. ೩೦ನೇ ಜೂನ್‌ನೊಳಗೆ ಡಿ.ಸಿ.ಸಿ. ಬ್ಯಾಂಕ್‌ಗಳು ೪೦ ಪರ್ಸೆಂಟ್ ರಿಕವರಿ ಮಾಡದಿದ್ದರೆ ಇನ್ ಎಲಿಜಬಲ್ ಎನ್ನತಕ್ಕ ಧೋರಣೆ ಏನಿದೆ ಅದನ್ನು ಕಿತ್ತುಹಾಕದಿದ್ದರೆ ಬಹುಶಃ ನಾವು ಏನು ಉಪಕಾರ ಮಾಡಿದಂತಾಗುವುದಿಲ್ಲ. ಯಾರಿಗೆ ಸಮಯಕ್ಕೆ ಸರಿಯಾಗಿ ಸಾಲ ದೊರೆಯಬೇಕೋ ಅವರಿಗೆ ದೊರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಸೂಚನೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಸಭೆಗೆ ಕೊಡತಕ್ಕ ಪ್ರಾಗ್ದಾನಗಳು ಭರವಸೆಗಳು ಇದರಿಂದ ನಿಮ್ಮ ಮನಸ್ಸಿಗೆ ತೃಪ್ತಿ ಆಗುವುದಾದರೆ ನಿಮ್ಮ ಸಾಧನೆ ಶೂನ್ಯ. ಸಭೆಯಲ್ಲಿ ಅಂಕಿಅಂಶಗಳಿಂದ ವಿವರಗಳಿಂದ ನಮ್ಮನ್ನು ಮನ ಒಲಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮಾನ್ಯ ಅರ್ಥ ಸಚಿವರು ಸಭೆಗೆ ಬಂದಿದ್ದಾರೆ, ಅವರ ಭಾಷಣದ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಅದನ್ನು ಅವರೇ ಹೇಳಿದ್ದಾರೆ. ಫೈನಾನ್ಸಿಯಲ್ ವಿಚಾರದಲ್ಲಿ ತಮ್ಮನ್ನು ಒಂದು ವಿಧದಲ್ಲಿ ಮೆಚ್ಚಿಕೊಳ್ಳುತ್ತೇನೆ. ರಾಜ್ಯದ ಅರ್ಥ ಸಚಿವರು ಆರ್ಥಿಕ ಪರಿಸ್ಥಿತಿಯನ್ನು ಸರಿಯಾದ ಹತೋಟಿಯಲ್ಲಿಟ್ಟುಕೊಂಡು ಬಿಗಿ ಮಾಡಿದ್ದೀರಿ. ಸದನಕ್ಕೆ ಆಶ್ವಾಸನೆ ಕೊಟ್ಟಿರುವುದನ್ನು ಜಾರಿಗೆ ತರಲಿಕ್ಕೆ ಮಾನ್ಯ ಸಚಿವರು ತಿಳಿಸಿದ್ದಾರೆ. ನಾನು ಮತ್ತೊಮ್ಮೆ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ರೇಟ್ ಆಫ್ ಇಂಟರೆಸ್ಟ್ ಬಗ್ಗೆ ನಾನು ಮಾತನಾಡುತ್ತೇನೆ. ರಿಸರ್ವ್ ಬ್ಯಾಂಕ್‌ನವರು ಏಳು ಕಾಲು ಪರ್ಸೆಂಟ್ ಚಾರ್ಜ್ ಮಾಡುತ್ತಿದ್ದಾರೆ. ಅದೇ ಪ್ರಾಥಮಿಕ ಹಂತದ ಸಹಕಾರಿ ಸಂಘಗಳು ಹನ್ನೆರಡೂವರೆ ಪರ್ಸೆಂಟ್ ಬಡ್ಡಿಯನ್ನು ರೈತನಿಗೆ ಹಾಕುತ್ತಿವೆ. ಇದು ರೈತನ ಬಗ್ಗೆ ತುಂಬಾ ಅನುಕಂಪದ ಮಾತು. ನಾವು ಅಷ್ಟು ಸಾಲ ಮನ್ನಾ ಮಾಡಿದ್ದೇವೆ, ಇಷ್ಟು ಬಡ್ಡಿ ಬಿಟ್ಟಿದ್ದೇವೆ, ಅಷ್ಟು ಸೌಲಭ್ಯ ನೀಡಿದ್ದೇವೆಂದು ಹೇಳುತ್ತಿದ್ದೀರಿ ಅದರ ಬಗ್ಗೆ ಅಗ್ರಿಕಲ್ಚರ್ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ವ್ಯವಸ್ಥೆ

ಯನ್ನು ತುಲನೆ ಮಾಡಬೇಕು. 12% ultimately the borrower will have to pay the interest... ಪಕ್ಕದ ರಾಜ್ಯವಾದ ಕೇರಳದಲ್ಲಿ ಪ್ರಾಂಪ್ಟ್ ಪೇಮೆಂಟ್ ಯಾವ ರೈತ ಮಾಡುತ್ತಾನೆ ಅಂತಹ ರೈತನಿಗೆ ೩ ಪರ್ಸೆಂಟ್ ಸಬ್ಸಿಡಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ.

ಆದರೆ ನಮ್ಮಲ್ಲಿ ಈ ಒಂದು ವ್ಯವಸ್ಥೆ ಇಲ್ಲ. ಪೀನಲ್ ಇಂಟರೆಸ್ಟ್ ವಜಾ ಮಾಡಬೇಕೆಂದು ನಾವು ಇಲ್ಲಿ ಬಹಳವಾಗಿ ಸರ್ಕಾರವನ್ನು ಕೇಳಬೇಕಾಗಿ ಬಂತು. ಇಲ್ಲಿ ಮತ್ತೊಂದು ಮುಖ್ಯ ಸಂಗತಿ ಎಂದರೆ, ಕೈಗಾರಿಕಾ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಆಗಬೇಕೆಂದು ಬಡ್ಡಿ ರಹಿತ ಸಾಲವನ್ನು ತಾವು ಕೊಡುತ್ತಿದ್ದೀರಿ ೧೯೮೧–೮೨ರಲ್ಲಿ ೫ ಕೋಟಿ ರೂ. ಗಳನ್ನು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಲೋನ್ ಎಂದು ಕೊಟ್ಟಿರಿ ಈ ವಿಚಾರದಲ್ಲಿ ಹೆಚ್ಚು ಅಂಕಿ ಅಂಶಗಳನ್ನು ಸಂಗ್ರಹ ಮಾಡಲು ನನಗೆ ಸಾಧ್ಯವಾಗಲಿಲ್ಲ. ಏಕೆಂದರೆ, ಈ ಇಲಾಖೆಯ ಮೇಲೆ ಮಾತನಾಡಬೇಕೆಂದು ನಾನು ಈ ದಿನ ಬೆಳಿಗ್ಗೆ ಹತ್ತೂವರೆ ಗಂಟೆಯಲ್ಲಿ ತೀರ್ಮಾನ ಮಾಡಿದೆ. ಆದಕಾರಣ ನಾನು ಹೇಳುವುದರಲ್ಲಿ ಏನಾದರೂ ತಪ್ಪಿದ್ದರೆ ತಿದ್ದಬೇಕು. ಮೈಸೂರಿನಲ್ಲಿರುವ ಮಹೇಂದ್ರ ಮಹೇಂದ್ರ ಎಂಬ ಸಂಸ್ಥೆಗೆ ೩೦ ರಿಂದ ೩೫ ಲಕ್ಷ ರೂ. ಗಳನ್ನು ಬಡ್ಡಿ ರಹಿತ ಸಾಲ ಎಂದು ಕೊಟ್ಟಿದ್ದೀರಿ. ಅವರು ತುಂಬಾ ಬಡವರು ಎಂದು ತಾವು ಕೊಟ್ಟಿರಬಹುದು. ಅದೇ ರೈತ ಸಮುದಾಯಕ್ಕೆ ಏನು ಕೊಟ್ಟಿದ್ದೀರಿ. ರೈತರೆಲ್ಲಾ ಶ್ರೀಮಂತರೆಂದು ತಾವು ತಿಳಿದಿರಬಹುದು ಇಲ್ಲವೇ ನಾವು ಯಾವಾಗಲೂ ರೈತರ ಬಗ್ಗೆ ವಾದ ಮಾಡುತ್ತೇವೆಂದು ತಾವು ಹೇಳಬಹುದು. ಈ ಸಣ್ಣಸಣ್ಣ ರೈತರನ್ನು ನಮ್ಮ ಒಂದು ಲಾಭಕ್ಕೋಸ್ಕರ ಉಪಯೋಗಿಸಿಕೊಳ್ಳುತ್ತೇವೆ ಚುನಾವಣೆಯ ದೃಷ್ಟಿಯಿಂದ ಇವರ ಬಗ್ಗೆ ಹೇಳುತ್ತೇವೆ. ಅಥವಾ ಬೇರೆ ದೃಷ್ಟಿಯಿಂದ ಹೇಳುತ್ತೇವೆಂದು ಹೇಳಬಹುದು ಆದರೆ ರೈತರಿಗೆ ಬಡ್ಡಿ ರಹಿತ ಸಾಲ ಕೊಡಲು ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಈಗ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ೫೨ ತಾಲ್ಲೂಕುಗಳು ಬಹಳ ಹಿಂದುಳಿದಿವೆ ಎಂಬ ಕಾರಣದಿಂದ ಹಲವಾರು ರಿಯಾಯಿತಿಗಳನ್ನು ತೋರಿಸಿದ್ದೀರಿ. ಆದರೆ ಈ ರಾಜ್ಯದಲ್ಲಿ ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುವ ಹಾಗೂ ಒಣ ಪ್ರದೇಶಗಳು ಏನಿವೆ, ಅಲ್ಲಿರುವಂತಹ ರೈತರಿಗೆ ವಿಶೇಷವಾದಂಥ ಯಾವ ರಿಯಾಯಿತಿಗಳನ್ನು ತೋರಿಸಿದ್ದೀರಿ ? ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಕೋಟಿ ಕೋಟಿ ರೂ. ಗಳನ್ನು ಬಡ್ಡಿ ರಹಿತ ಸಾಲ ಎಂದು ಕೊಡುತ್ತೀರಿ, ಇದರ ಜೊತೆಗೆ ಸರ್ಕಾರದ ನೌಕರರಿಗೆ ಮನೆ ಕಟ್ಟಿಸಿ ಕೊಳ್ಳಲು ೮ ಪರ್ಸೆಂಟ್ ಬಡ್ಡಿ ಮೇಲೆ ಸಾಲ ಕೊಡುತ್ತೀರಿ. ಇಲ್ಲಿ ನಾನೇನಾದರೂ ಸರ್ಕಾರದ ನೌಕರರ ಬಗ್ಗೆ ಮಾತನಾಡಿದರೆ ನಾನು ಅವರಿಗೆ ವಿರುದ್ಧವಾಗಿದ್ದೇನೆಂದು ಹೇಳಬಹುದು. ಆದರೆ ಇರುವ ವಿಚಾರವನ್ನು ಹೇಳಬೇಕೆಂದರೆ, ಇದೇ ಸರ್ಕಾರದ ನೌಕರರು ಮೋಟಾರ್ ಸೈಕಲ್ ಸಾಲ ತೆಗೆದುಕೊಂಡರೆ ೬ ರಿಂದ ೮ ಪರ್ಸೆಂಟ್ ಬಡ್ಡಿ ವಿಧಿಸುತ್ತೀರಿ. ಸರ್ಕಾರದ ಚೀಫ್ ಸೆಕ್ರೆಟರಿ ಅವರಿಗೆ ಮೂರರಿಂದ ಮೂರೂವರೆ ಸಾವಿರ ರೂ ಗಳನ್ನು ಸಂಬಳ ಎಂದು ಕೊಟ್ಟರೂ ಸಹ ಅವರಿಗೆ ತೊಂದರೆಯಾಗಬಾರದೆಂದು ೮ ಪರ್ಸೆಂಟ್ ಬಡ್ಡಿ ಮೇಲೆ ಕಾರನ್ನು ಕೊಳ್ಳಲು ಸಾಲ ಕೊಡುತ್ತೀರಿ. ಆದರೆ ರೈತರಿಗೆ ನೀವು ವಿಧಿಸುವ ಬಡ್ಡಿ ಎಷ್ಟು ? ಈ ಒಂದು ನಿಮ್ಮ ಆರ್ಥಿಕ ನೀತಿಯನ್ನು ಎಷ್ಟು ಕಾಲ ಮುಂದುವರೆಸುತ್ತೀರಿ ? ರೈತರು ನಿಮ್ಮ ಮೇಲೆ ಸಿಡಿದೇಳುವುದಕ್ಕೆ ಹೀಗೆ ನಾನಾ ಕಾರಣಗಳಿವೆ. ಇದಕ್ಕೆ ನಿಮ್ಮ ಕಳೆದ ಎರಡು ವರ್ಷಗಳ ಆಡಳಿತದ ಧೋರಣೆಯೇ ಕಾರಣ ಎಂದು ಹೇಳುವುದಕ್ಕೆ ಬದಲಾಗಿ ಕಳೆದ ೩೦ ವರ್ಷಗಳಿಂದಲೂ ಈ ರೈತ ಸಮುದಾಯವನ್ನು ಈ ನಮ್ಮ ಸಮಾಜ ಯಾವ ರೀತಿ ನೋಡಿಕೊಂಡು ಬಂದಿದೆ ಹಾಗೂ ಈ ರೈತವರ್ಗ ಯಾವ ಒಂದು ನಿರ್ಲಕ್ಷಕ್ಕೆ ಒಳಪಟ್ಟಿದೆ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಇವೊತ್ತು ನಮ್ಮ ರಾಜ್ಯದಲ್ಲಿ ಉತ್ಪಾದನೆಯನ್ನು ಹೆಚ್ಚಿಸತಕ್ಕಂಥ ಅನೇಕ ಸೊಸೈಟಿಗಳಿವೆ. ಸಹಕಾರಿ ಕ್ಷೇತ್ರದಲ್ಲಿರುವ ಈ ಸೊಸೈಟಿಗಳಿಗೆ ಸಾಲ ಕೊಡಲು ತಾವು ಏನು ವ್ಯವಸ್ಥೆ ಮಾಡಿದ್ದೀರಿ ? ಇದರ ಬಗ್ಗೆ ತಾವು ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ತಮಗೆ ಒಂದು ವಿವೇಕದ ಮಾತನ್ನು ಹೇಳುವುದಕ್ಕೆ ಬಯಸುವುದೇನೆಂದರೆ. ತಾವು ರೈತರಿಗೆ ಏನೋ ಕೊಟ್ಟಿದ್ದೇವೆಂದು ಇಲ್ಲಿ ಮಾತನಾಡುವುದಕ್ಕೆ ಬದಲು ಅಷ್ಟಕ್ಕೇ ಸಂತೃಪ್ತರಾಗುವುದಕ್ಕೆ ಬದಲು, ಆ ಒಂದು ಒಣ ಪ್ರತಿಷ್ಠೆಯ ಮೇಲೆ ನಿಲ್ಲುವುದಕ್ಕೆ ಬದಲು ಈ ಬಗ್ಗೆ ಪ್ರಾಮಾಣಿಕವಾಗಿ ಆಲೋಚನೆ ಮಾಡಿ. ಈಗ ೫ ಪರ್ಸೆಂಟ್ ಹ್ಯಾಂಡ್ಲಿಂಗ್ ಚಾರ್ಜಸ್ ಎಂದು ಏನಿದೆ, ಇದನ್ನು ಕಡಿಮೆ ಮಾಡಬಹುದು. ಮಾನ್ಯ ಶ್ರೀಕಂಠಯ್ಯನವರ ರಾಜಕೀಯ ಜೀವನ ಸಹಕಾರಿ ಸಂಸ್ಥೆಯಿಂದಲೇ ಪ್ರಾರಂಭವಾಯಿತು ಆದಕಾರಣ ಈ ಬಗ್ಗೆ ಅವರಿಗೆ ಸಾಕಷ್ಟು ಗೊತ್ತಿದೆ. ತಮಗೆ ವಿಷಯ ಗೊತ್ತಿಲ್ಲ ಎಂದು ಅಲ್ಲ ಆದಕಾರಣ ಈ ಅನುಪಯುಕ್ತವಾದಂಥ ವೆಚ್ಚಗಳನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೇ ? ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಪ್ರಾಥಮಿಕ

ಸಹಕಾರ ಸಂಘಗಳು ಏನು ಬಡ್ಡಿ ವಿಧಿಸುತ್ತಿವೆ, ಅದನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೇ ಎಂಬುವನ್ನು ತಾವು ಯೋಚನೆ ಮಾಡಬೇಕು.

ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಈಗ ಕಮರ್ಷಿಯಲ್ ಬ್ಯಾಂಕುಗಳು ಪ್ರೈಮರಿ ಕೋಆಪರೇಟಿವ್ ಸೊಸೈಟಿಗಳಿಗೆ ಕೊಡುವ ಸಾಲದ ಮೇಲೆ ೧೪ ಪರ್ಸೆಂಟ್ ಬಡ್ಡಿಯನ್ನು ಚಾರ್ಜ್ ಮಾಡುತ್ತಿವೆ. ಇದಕ್ಕೆ ಯಾರು ಹೊಣೆ ? ರೈತರೇನಾದರೂ ತಮ್ಮ ಅರ್ಜಿಗಳನ್ನು ಕಮರ್ಷಿಯಲ್ ಬ್ಯಾಂಕ್‌ಗಳಿಗೆ ಅಟ್ಯಾಚ್ ಮಾಡಿ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್‌ಗಳ ಮೂಲಕ ಸಾಲ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದರೆ ? ಈ ವಿಚಾರವನ್ನು ಈ ಮೊದಲೂ ಸಹ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಆದಕಾರಣ ಇದರ ಬಗ್ಗೆ ಮಾನ್ಯ ಮಂತ್ರಿಗಳು ಚಿಂತನೆ ಮಾಡಬೇಕಾಗುತ್ತದೆ. ಈ ವಿಚಾರವನ್ನು ತಾವು ಕೇಂದ್ರದ ಆರ್ಥಿಕ ಮಂತ್ರಿಗಳಿಗೆ ಹಾಗೂ ರಿಜರ್ವ್ ಬ್ಯಾಂಕ್‌ನವರಿಗೆ ತಿಳಿಸ ಬೇಕಾಗುತ್ತದೆ. ಏಕೆಂದರೆ ಎಲ್ಲ ರೈತರಿಗೂ ಒಂದೇ ರೀತಿಯ ಬಡ್ಡಿ ವಿಧಿಸಬೇಕೇ ಹೊರತು ತಾರತಮ್ಯ ಮಾಡುವುದು ಸರಿಯಲ್ಲ. ಈಗ ತಾವು ಈ ಪೀನಲ್ ಇಂಟರೆಸ್ಟ್‌ನ್ನು ವಜಾ ಮಾಡಬೇಕೆಂದ ಕಮರ್ಷಿಯಲ್ ಬ್ಯಾಂಕ್‌ಗಳಿಗೆ ಪತ್ರ ಏನೋ ಬರೆದಿದ್ದೀರಿ. ಅದಕ್ಕೆ ಅವರು ಎಷ್ಟು ಮಾನ್ಯತೆ ಕೊಟ್ಟಿದ್ದಾರೆ ? ತಮ್ಮ ಒಂದು ಕೋರಿಕೆ ಪತ್ರಕ್ಕೆ ಅವರು ಕೊಟ್ಟಿರುವ ಉತ್ತರವನ್ನು ತಾವು ತಿಳಿಸ ಬೇಕು. ಇದರ ಬಗ್ಗೆ ತಾವು ಎಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿದ್ದೀರೆಂಬುದನ್ನು ಈ ಸಭೆಗೆ ತಿಳಿಸಬೇಕು. ಮಾನ್ಯ ಮಂತ್ರಿಗಳ ಮನಸ್ಸಿನಲ್ಲಿ ಕೋಆಪರೇಟಿವ್ ಇಲಾಖೆ ಎಂದರೆ ಏನಿದೆ ಎಂಬುದು ಗೊತ್ತಿಲ್ಲ ಆದರೆ ಮಹಾರಾಷ್ಟ್ರದಲ್ಲಿ ಸಹಕಾರ ಇಲಾಖೆಯನ್ನು ಹೊಂದಿರುವ ಮಂತ್ರಿ ಅತ್ಯಂತ ಜನಸಂಪರ್ಕವನ್ನು ಹೊಂದಿರುವಂತಹ ಹಾಗೂ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಬಹುದಾದಂಥ ಇಲಾಖೆಯಾದ ಕಾರಣ, ಈ ಇಲಾಖೆಗೆ ಅಲ್ಲಿ ಹೆಚ್ಚಿನ ಒತ್ತಡ ಇದೆ ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಈ ಖಾತೆ ಯನ್ನು ಹೊಂದಿರುವ ಮಾನ್ಯ ಶ್ರೀಕಂಠಯ್ಯನವರು ರೈತ ಕುಟುಂಬದಿಂದ ಬಂದಿರುವವರಾಗಿದ್ದಾರೆ. ಇವರು ಈ ಇಲಾಖೆಯನ್ನು ವಹಿಸಿಕೊಂಡು ಎರಡು ವರ್ಷಗಳಾಯಿತು. ಆದಕಾರಣ ಇಲ್ಲಿಯವರೆಗೆ ನಿಮ್ಮ ಭುಜವನ್ನು ತಟ್ಟಿಕೊಳ್ಳುವ ರೀತಿಯಲ್ಲಿ ಏನೇನು ಕೆಲಸಗಳನ್ನು ಮಾಡಿದ್ದೀರಾ ಎಂದು ನಾನು ತಮ್ಮನ್ನು ಕೇಳ ಬಯಸುತ್ತೇನೆ.

ಇನ್ನು ಅಗ್ರಿಕಲ್ಚರಲ್ ರೀ-ಫೈನಾನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏನಿದೆ, ಇದು ನಾನಾ ರೀತಿಯ ಸ್ಕೀಮುಗಳಿಗೆ ಸಾಲ ಕೊಡುತ್ತದೆ. ಕೋಕೋ, ರಬ್ಬರ್, ಕಾಫಿ, ಗ್ರೇಪ್ಸ್, ಹೀಗೆ ನಾನಾ ರೀತಿಯಿಂದ ಇವುಗಳ ಒಂದು ಬೆಳವಣಿಗೆಗೆಂದು ಸಾಲ ಕೊಡುತ್ತದೆ. ಈ ಒಂದು ದಿಕ್ಕಿನಲ್ಲಿ ನೀವು ಅಲ್ಲಿಂದ ಸಹಾಯ ಪಡೆಯಲು ಎಷ್ಟರಮಟ್ಟಿಗೆ ಪ್ರಯತ್ನ ಮಾಡಿದ್ದೀರಿ ಎಂಬುದನ್ನು ಸಹ ಈ ಸಭೆಗೆ ತಿಳಿಸಬೇಕು.

೪-೦೦ ಪಿ. ಎಂ.

ಅಲ್ಲೂ ಕೂಡ ರಿಸರ್ವ್ ಬ್ಯಾಂಕ್‌ನವರು ಮತ್ತೊಂದು ಲಗಾಮು ಹಾಕಿದ್ದಾರೆ. ೬೦ ಪರ್ಸೆಂಟ್ ಲೋನ್ಸ್ ಅಪ್ಟು ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕ್‌ಗೆ ಕ್ಲಿಯರ್ ಮಾಡದೇ ಹೋದರೆ Such District Central Co-operative Banks are not eligible to utilise A. R. D. C. Financial assistance ಅಂತ ಮಾಡಿದ್ದಾರೆ. ಇದನ್ನು ನೋಡಿದರೆ ಈವೊತ್ತು ಹಂತಹಂತಕ್ಕೂ ಹಣ ಕೊಡತಕ್ಕಂಥಾದ್ದರ ಬಗ್ಗೆ ರೈತರ ಕತ್ತನ್ನು ಹಿಸುಕಿ ಹಿಸುಕಿ ಯಾವರೀತಿ ಕೊಡು ತ್ತಿದ್ದಾರೆ ಅನ್ನುವುದನ್ನು ನಿಮ್ಮ ರಿಪೋರ್ಟಿನಲ್ಲಿ ಓದಿದರೆ ನಿಮ್ಮ ಸ್ವಭಾವ ಏನು ಅನ್ನುವುದನ್ನು ನೀವೇ ಆಲೋಚನೆ ಮಾಡಿಕೊಳ್ಳಬೇಕು ಎಂದು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ೧೯೮೦-೮೧ ಮತ್ತು ೧೯೮೧-೮೨ ರ ಎಕನಾಮಿಕ್ಸ್ ಸರ್ವೆ ರಿಪೋರ್ಟ್ ಅನ್ನು ಈ ಸಭೆಯ ಮುಂದೆ ಇಟ್ಟಿದ್ದೀರಿ ನಿಮ್ಮ ಸರ್ಕಾರ ಆಡಳಿತಕ್ಕೆ ಬಂದು ೨ ವರ್ಷ ತುಂಬಿತು, ಈಗ ೩ನೇ ವರ್ಷಕ್ಕೆ ಕಾಲು ಇಟ್ಟಿದೆ. ಈ ಎಕನಾಮಿಕ್ಸ್ ಸರ್ವೆ ರಿಪೋರ್ಟ್‌ನಲ್ಲಿ ಏನು ಬರೆದಿದ್ದೀರಿ ಅನ್ನುವುದನ್ನು ತಮ್ಮ ಗಮ ನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ.—

"The total assistance extended by these institutions, Karnataka has secured Rs. 182 crores or about 7.5% of the total assistance during 1979-80,

ಅದೇ ರೀತಿಯಾಗಿ ತಾವು ಸಭೆಗೆ ಕೊಟ್ಟಿರತಕ್ಕಂಥಾ ಇನ್‌ಫರ್ಮೇಷನ್ ಪ್ರಕಾರ

"The total assistance extended by these institutions during 1980-81, the Karnataka has secured Rs. 155 crores."

It has come down to 5.52%. Further, for the year 1979-80.

"The per capita assistance from all these institutions during the same period is 42 for Karnataka as against 41 in All India Average."

For the year 1980-81,

"The per capita assistance from all these institutions for the year was Rs. 52 for Karnataka.,"

ತಾವು ಸಹಕಾರ ಮಂತ್ರಿಗಳಾಗಿ ಕೆಲಸಮಾಡುತ್ತಾ ಇರುವುದರಿಂದ ಇದರಲ್ಲಿ ನಿಮಗೆ ಅಷ್ಟು ಅನುಭವ ಇಲ್ಲ ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಆದರೆ the progress you achieved as considerably come down due to the inefficiency of the department or there is no mind ?

ಇದಕ್ಕೆ ಕಾರಣ ಏನು ? ಆಲ್ ಇಂಡಿಯಾ ಆವರೇಜ್ ತೆಗೆದುಕೊಳ್ಳುವುದಾದರೆ Punjab Rs. 77, Haryana Rs. 76, Maharashtra Rs. 58. ಆದುದರಿಂದ ದಯಾಮಾಡಿ ಈ ದೇಶದಲ್ಲಿ ಈ ಒಂದು ಇಲಾಖೆಯ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಸರ್ಕಾರಕ್ಕೆ ನಾನು ಒಂದು ಸೂಚನೆಯನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ತಮಗೆ ಈ ಸಂದರ್ಭದಲ್ಲಿ ಇನ್ನು ೨-೩ ಸೂಚನೆಯನ್ನು ಕೊಡಲಿಕ್ಕೆ ಅಪೇಕ್ಷಪಡುತ್ತೇನೆ. ಅದೇನೆಂದರೆ ಮೊದಲನೆಯದಾಗಿ ಸಾಲವನ್ನು ಸಕಾಲದಲ್ಲಿ ತರಿಸಿಕೊಳ್ಳತಕ್ಕಂಥಾದ್ದು, ಎರಡನೆಯದಾಗಿ, ಅವನಿಗೆ ರೇಟ್ ಆಫ್ ಇಂಟರೆಸ್ಟ್ ಅನ್ನು ಕಡಿಮೆ ಮಾಡತಕ್ಕಂಥಾದ್ದು ಮೂರನೆಯದಾಗಿ, ರಿಸರ್ವ್ ಬ್ಯಾಂಕ್ ಮುಖಾಂತರ ಐ. ಡಿ. ಬಿ. ಐ. ಇನ್ನು ಬೇರೆ ಬೇರೆ ಕಡೆಯಿಂದ ರಾಜ್ಯಕ್ಕೆ ಬರತಕ್ಕಂಥಾ ಸವಲತ್ತುಗಳು ಇದೆ ಅದನ್ನು ರಾಜ್ಯದ ಬೆಳವಣಿಗೆಗೆ ಉಪಯೋಗಿಸಿಕೊಳ್ಳತಕ್ಕಂಥಾದ್ದು. ಇವೆಲ್ಲಾ ಕೆಲಸಗಳನ್ನು ಅತ್ಯಂತ ಅವಶ್ಯಕವಾಗಿ ಮಾಡಬೇಕೆಂದು ನಾನು ತಮಗೆ ಮನವರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಟೇಬಲ್ ೩ ರಲ್ಲಿ ಏನು ಹೇಳಿದ್ದೀರಿ ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ. Total outlay under various scheme is Rs. 3,033.155 lakhs and the expenditure is Rs. 1,966.370. Under central sector, the out-lay is Rs. 781.385 and the expenditure is 470.380. ತಾವು ಆಲೋಚನೆ ಮಾಡಬೇಕು. ಸೆಂಟ್ರಲ್ ಸೆಕ್ಟರ್ ಬಗ್ಗೆ ೭೮೧ ಲಕ್ಷ ರೂಪಾಯಿ ಗುರಿ ಇಟ್ಟುಕೊಂಡಿದ್ದರೆ, ತಾವು ೪೭೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಏತಕ್ಕೆ ಈರೀತಿ ಮಾಡಿದ್ದೀರಿ ? ನಿಮ್ಮ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲವೇ ? ಸಾಕಷ್ಟು ಸಿಬ್ಬಂದಿ ಇದ್ದರೂ ಕೂಡ ಪ್ರಗತಿಪರವಾದ ಕೆಲಸವನ್ನು ಮಾಡತಕ್ಕಂಥಾ ಕಾಲದಲ್ಲಿ ತಾವು ಹಿಂದೆಹಿಂದಕ್ಕೆ ಹೋಗುತ್ತಿದ್ದೀರಲ್ಲಾ ಇದಕ್ಕೆ ಕಾರಣ ಏನು ಎಂಬುದನ್ನು ಹೇಳಬೇಕು. ಇನ್ನು ಮುಂದಾದರೂ ಕೂಡ ತಾವು ಈ ದಿಸೆಯಲ್ಲಿ ಪ್ರಗತಿಪರವಾದ ಹೆಜ್ಜೆ ಇಡಬೇಕೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಒಂದು ಸಂಸ್ಥೆಯನ್ನು ರೀಆರ್ಗನೈಸ್ ಮಾಡಬೇಕೆಂದು ತಾವು ಪ್ರಯತ್ನ ಮಾಡಿದ್ದೀರಿ. ಅದಕ್ಕೆ ಕಾರಣ ನೀವೇ ಕೊಡಬೇಕು. ಫೈನಾನಿಯಲ್ ವಯಬಿಲಿಟಿ ಆಧಾರದ ಮೇಲೆ ರಿಸರ್ವ್ ಬ್ಯಾಂಕ್ ನವರು ಕೊಟ್ಟಂಥಾ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಈ ಇಲಾಖೆಯಲ್ಲಿನ್ನು ರೀಆರ್ಗನೈಸೇಷನ್ ಮಾಡುವುದಕ್ಕೆ ಪ್ರಯತ್ನ ಮಾಡಿದೆವು ಎಂದು ಹೇಳುವುದು, ಅದೇನೇ ಇರಲಿ ಈ ರೀಆರ್ಗನೈಸೇಷನ್ನನ್ನು ರಾಜಕೀಯ ಹಿನ್ನೆಲೆಯಲ್ಲಿ ಮಾಡುವುದಕ್ಕೆ ಹೋಗಬಾರದು ಎನ್ನುವ ಮಾತನ್ನು ನಾನು ಹೇಳುತ್ತೇನೆ

ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಮಾತು ಹೇಳುತ್ತೇನೆ. ಅದೇನೆಂದರೆ ಈ ಇಲಾಖೆಯ ಅಧಿಕಾರವನ್ನು ತಾವು ಸ್ವೀಕಾರ ಮಾಡಿದಾಗ ಈ ಇಲಾಖೆಯನ್ನು ರೀಆರ್ಗನೈಸ್ ಮಾಡುತ್ತೇನೆ ಪ್ರತಿಯೊಂದು ಪಂಚಾಯಿತಿಗೂ ಒಂದು ಸಹಕಾರೀ ಸಂಸ್ಥೆ ಕೊಡುತ್ತೇವೆಂದು ಹೇಳಿದಿರಿ, ಈವೊತ್ತಿನ ತಮ್ಮ ಒಂದು ವಿತರಣೆಯ ವ್ಯವಸ್ಥೆ ನೋಡಿದರೆ ಆರೀತಿ ಇಲ್ಲ ಈ ವಿತರಣೆ ವ್ಯವಸ್ಥೆ ಸ್ಥಳೀಯ ಮಟ್ಟದಲ್ಲಿ ಸಹಕಾರೀ ಸಂಘಗಳ ಮುಖಾಂತರ ಆಗಬೇಕಾಗಿತ್ತು. ಪ್ರತಿಯೊಂದು ಕೋಆಪರೇಟಿವ್ ಇನ್ಸ್ಟಿಟ್ಯೂಷನ್ಸ್‌ಗೆ ಏನು ಜವಾಬ್ದಾರಿ ಕೊಟ್ಟಿದ್ದೀರಿ ಆ ಜವಾಬ್ದಾರಿಯನ್ನರಿತು ಆ ಪಂಚಾಯಿತಿಗಳು ಕೆಲಸ ಮಾಡಬೇಕಾಗಿತ್ತು. ಮತ್ತು ಈ ಬಗ್ಗೆ ತಾವು ಏನು ಒಂದು ತತ್ವವನ್ನು ಹಾಕಿಕೊಂಡಿದ್ದೀರೋ ಅದನ್ನು ಸರಿಯಾಗಿ ಅನುಷ್ಠಾನಕ್ಕೆ ತರಬೇಕಾಗಿತ್ತು. ಅನುಷ್ಠಾನದಲ್ಲಿರತಕ್ಕಂಥಾ ಜನ ಏನು ಇದ್ದಾರೆ ಅವರು ಪ್ರಾಮಾಣಿಕರಾಗಿ ಈ ಗ್ರಾಹಕರಿಗೆ ಉತ್ತಮವಾದ ರೀತಿಯಲ್ಲಿ ವಿತರಣೆಯಾಗುವ ವ್ಯವಸ್ಥೆ ಮಾಡಬೇಕಾಗಿತ್ತು. ಈ ಕೆಲಸವನ್ನು ವಿಳಂಬ ಮಾಡುತ್ತಿದ್ದೀರಿ. ಈಗಲಾದರೂ ಈ ಒಂದು ವಿತರಣೆ ವ್ಯವಸ್ಥೆಯನ್ನು ಜಾರಿಗೆ ತರುವುದರಲ್ಲಿ ವಿಳಂಬ ಮಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಇನ್ನು ಹೆಚ್ಚು ಕಾಲ ತೆಗೆದುಕೊಂಡು ಕಾಲಹರಣ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಹಕಾರ ಸಚಿವರಿಗೆ ಈ ಒಂದು ಅತಿ ಮುಖ್ಯವಾದ ವಿಷಯವನ್ನು ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಸಹಕಾರ ಸಂಘಗಳ ಆಡಿಟ್ ವ್ಯವಸ್ಥೆ ಬಗ್ಗೆ ಹೇಳುತ್ತೇನೆ. ನಾನು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷನಾಗಿದ್ದಾಗ ಒಂದು ಸೂಚನೆ ಕೊಟ್ಟಿದ್ದೇನೆ. ಆದೇನೆಂದರೆ ಇದಕ್ಕೆ ಒಂದು ಪ್ರತ್ಯೇಕವಾದ ಆಡಿಟ್ ಇಲಾಖೆ ಇರಬೇಕು ಮತ್ತು ಇದನ್ನು ಅಡ್ವೋಕೇಟ್ ಜನರಲ್‌ರವರ ಒಂದು ವ್ಯಾಪ್ತಿಗೆ ತೆಗೆದುಕೊಳ್ಳಬೇಕು ಎಂದು ಸೂಚನೆ ಮಾಡಿದ್ದೇವೆ. ಅದಕ್ಕೆ ತಾವೇನಾದರೂ ಪ್ರಯತ್ನ ಮಾಡಿದ್ದೀರಾ ? ಈ ವರದಿಯಲ್ಲಿ ಒಂದು ಕಡೆ ಓದಿದೆ, ಅದು ಈ ರೀತಿ ಇದೆ.—

> The total percentage of societies that has been audited is something like 52 or so. This has been given in the table No. 13. The percentage of audit for the year ending 1980 March was 58.22 and it has come down to 55.42% for the year ending 1982 March.

ಇದಕ್ಕೆ ಕಾರಣ ಏನು ಅನ್ನುವುದನ್ನು ಹೇಳುತ್ತೀರಾ ? ತಮಗೆ ಸಿಬ್ಬಂದಿ ಕೊರತೆ ಏನಾದರೂ ಇದೆಯೇ ? ಅಥವಾ ಇದರ ಒಂದು ವ್ಯವಸ್ಥೆಗೆ ಯಾವರೀತಿಯಿಂದಲಾದರೂ ಅಡಚಣೆ ಬಂದಿದೆಯೇ ಅನ್ನುವುದನ್ನು ನೋಡಿದರೆ ನಾವ್ಯಾರೂ ಕೂಡ ಏನು ಅಡಚಣೆ ತಂದಿಲ್ಲ. ಇದನ್ನು ತಾವು ಸರಿಯಾಗಿ ಜಾರಿಗೆ ತಂದಿದ್ದರೆ ಅದರ ಪೂರ್ಣಫಲ ಕೊಡುತ್ತಿತ್ತು, ಇದಕ್ಕೆ ಮೂಲ ಕಾರಣರಾರು ಎನ್ನುವುದನ್ನು ನಾನು ಹೇಳಬೇಕಾಗಿದೆ ಈ ಸಂಸ್ಥೆ ಜವಾಬ್ದಾರಿಯನ್ನು ಹೊತ್ತಿರತಕ್ಕಂಥಾ ಸಂಸ್ಥೆ, ಇವರು ವರ್ಷೇ ವರ್ಷೇ ಜನರಲ್ ಬಾಡಿಯನ್ನು ಕರೆಯದೆ ಇರುವುದು, ಅದರ ಲೆಕ್ಕಪತ್ರವನ್ನು ಆಯಾಯ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇಡುವುದಕ್ಕೆ ಅವಕಾಶ ಕೊಡದೆ ಇರುವುದು ಇವರ ತಪ್ಪೇ ಅಥವಾ ಸರ್ಕಾರದ ತಪ್ಪೇ ಅನ್ನುವುದನ್ನು ತಾವು ನಮಗೆ ತಿಳಿಯಪಡಿಸಿದರೆ ಅರ್ಥ ಮಾಡಿಕೊಳ್ಳಬಹುದು.

೧೯೭೮–೭೯ರ ಆಡಿಟ್ ರಿಪೋರ್ಟ್‌ನ್ನು ಇವತ್ತು ನೀವು ಜನರಲ್ ಬಾಡಿ ಮೀಟಿಂಗ್ ಮಾಡಿ ಪರಿಶೀಲನೆ ಮಾಡುವುದಾದರೆ, ಆ ಸಂದರ್ಭದಲ್ಲಿ ಹಣವನ್ನು ತಿಂದು ಹೋದವರ ಮೇಲೆ ಜವಾಬ್ದಾರಿಯನ್ನು ಅಷ್ಟು ಸುಲಭವಾಗಿ ಹೊರಿಸುವುದಕ್ಕೆ ಆಗುವುದಿಲ್ಲ. ಕೋರ್ಟಿನಿಂದಲೂ ಈ ಕೆಲಸ ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಸಹಕಾರ ಸಂಘಗಳಿಗೂ ಲೆಕ್ಕ ಪತ್ರಗಳನ್ನು ಆಡಿಟ್ ಮಾಡತಕ್ಕ ವ್ಯವಸ್ಥೆ ಜನರಲ್ ಬಾಡಿಗೆ ಮುಂಚೆಯೇ ಆಗುವಂತೆ ವ್ಯವಸ್ಥೆ ಮಾಡಬೇಕು. ಜನರಲ್ ಬಾಡಿಗಿಂತ ಮುಂಚೆಯೇ ಆಡಿಟ್ ಆದರೆ, ಯಾವ ಮನುಷ್ಯ ತಪ್ಪು ಮಾಡಿರುತ್ತಾನೆಯೋ ಅವನ ಮೇಲೆ ಜವಾಬ್ದಾರಿಯನ್ನು ಹೊರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ವ್ಯವಸ್ಥೆಯನ್ನು ನೀವು ಮಾಡದೆ ಹೋದರೆ ಯಾರು ೧೦–೨೦ ಲಕ್ಷ ರೂಪಾಯಿಗಳನ್ನು ತಿಂದಿರುತ್ತಾರೆಯೋ ಅವರ ಬಗ್ಗೆ ನಾವು ಇಲ್ಲಿ ಮಾತನಾಡಿದರೆ ಅದು ಬರೀ ಅರಣ್ಯರೋಧನವಾಗುತ್ತದೆ. ಅವನು ಒಂದಲ್ಲಾ ಒಂದು ರೀತಿಯಿಂದ ರಕ್ಷಣೆ ಪಡೆದುಕೊಂಡು ಬಚಾವ್ ಆಗಿ ಹೋಗುತ್ತಾನೆ. ಈ ದೋಷವನ್ನು ತಿದ್ದತಕ್ಕ ಪ್ರಯತ್ನವನ್ನು ತಾವು ಮಾಡಬೇಕು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ವಿಷಯವನ್ನು ತಮಗೆ ನಾನು ಹೇಳಬೇಕೆಂದಿದ್ದೇನೆ. ರಿಸೋರ್ಸಸ್ ಮೊಬಿಲೈಸೇಷನ್ ವಾಣಿಜ್ಯ ಬ್ಯಾಂಕುಗಳದ್ದು ಸುಮಾರು ೭೮೫ ಪಟ್ಟು ಜಾಸ್ತಿಯಾಗಿದೆಯೆಂದು ತಾವು ಹೇಳಿದ್ದೀರಿ. ಇದರ ಬಗ್ಗೆ ತಮ್ಮ ವರದಿಯಲ್ಲಿ ಕೊಟ್ಟಿರುವುದನ್ನು ನಾನು ಓದುತ್ತೇನೆ. ರಿಸೋರ್ಸಸ್ ಮೊಬಿಲೈಸೇಷನ್ ನೋಡಿದಾಗ ನಿಮ್ಮ ಸಾಧನೆ ತಾವು ಭುಜವನ್ನು ತಟ್ಟಿಕೊಳ್ಳತಕ್ಕ ಸಾಧನೆಯಲ್ಲ ಎಂದು ತಮ್ಮ ಮನಸ್ಸಿಗೆ ಅನಿಸಿದರೆ ಸಾಕು. ಈದಿಸೆಯಲ್ಲಿ ತಾವು ಇನ್ನೂ ಹೆಚ್ಚಿನ ಪ್ರಯತ್ನ ನಡೆಸಬೇಕು. Between 1969 and 1981 the deposits have been increased from Rs. 5,138 crores to 38.066 crores ಸಹಕಾರ ಬ್ಯಾಂಕುಗಳು ಮತ್ತು ಸಹಕಾರ ಸಂಸ್ಥೆಗಳು ಕೇವಲ್ಲ ಸರ್ಕಾರದ ನೆರವನ್ನೇ ಆಶ್ರಯಿಸಿ ಬಾಳತಕ್ಕದ್ದಾದರೆ ಇದು ಬಹಳ ಕಾಲ ನಡೆಯುವುದಕ್ಕೆ ಸಾಧ್ಯವಿಲ್ಲ. ಇವುಗಳಿಗೆ ಅವಸಾನ ಸ್ಥಿತಿ ತನ್ನಷ್ಟಕ್ಕೆ ತಾನೆ ಬರುತ್ತದೆ ಎನ್ನುವಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಹೋದ ಸಾರಿ ಸದನದಲ್ಲಿ ೧೪ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಲೈಸೆನ್ಸ್ ತರುವುದರ ಬಗ್ಗೆ ಹೇಳಿದ್ದೀರಿ. ಮಾನ್ಯ ಮಂತ್ರಿಗಳಾದ ರಾವ್ ಬೀರೇಂದ್ರಸಿಂಗ್ ಅವರನ್ನು ಭೇಟಿ ಮಾಡಿದ್ದರ ಬಗ್ಗೆಯೂ ಹೇಳಿದ್ದೀರಿ.

ಶ್ರೀ ಎಚ್. ಶ್ರೀಕಂಠಯ್ಯ.—ಆರನೆಯ ಪ್ಲಾನ್‌ನಲ್ಲಿ ಇದನ್ನೆಲ್ಲಾ ನಾವು ಪ್ರಪೋಸ್ ಮಾಡಿದ್ದೇವೆ.

ಶ್ರೀ ಹೆಚ್. ಡಿ. ದೇವೆಗೌಡ.—ನಾನು ಇದನ್ನು ಹೇಳುವಾಗ ನಿಮ್ಮಲ್ಲಿರತಕ್ಕ ಉತ್ಸಾಹವನ್ನು ನಿರುತ್ಸಾಹ ಗೊಳಿಸುವುದಕ್ಕೆ ಹೋಗುವುದಿಲ್ಲ. ಆದರೆ ಎಷ್ಟು ಪ್ರಪೋಸೆಲ್ಸ್ ಕ್ಲಿಯರ್ ಆಗಿವೆ ? ಮಹಾರಾಷ್ಟ್ರದವರು ಎಷ್ಟು ಮುಂದೆ ಹೋಗಿದ್ದಾರೆ ಕರ್ನಾಟಕದವರು ಹೆಚ್ಚು ಪ್ರಗತಿಗೆ ಅವಕಾಶ ವಿದ್ದರೂ ಎಷ್ಟು ಮುಂದೆ ಹೋಗಿದ್ದಾರೆ, ಇದರಲ್ಲಿ ನೀವು ವಿಫಲರಾಗಿದ್ದೀರಿ ಎನ್ನುವುದನ್ನು ಮನವರಿಕೆ ಮಾಡಿಕೊಡುವುದಕ್ಕೆ ಮಾತ್ರ ನಾನು ಈ ಮಾತನ್ನು ಹೇಳಬೇಕಾಗಿದೆ. ನೀವು ಪ್ರಪೋಸಲ್ಸ್‌ನ್ನು ಕಳುಹಿಸುವಾಗ ವರ್ಷದ ಕೊನೆಯ ಹಂತದಲ್ಲಿ ಕಳುಹಿಸಿದ್ದೀರಿ, ಅಷ್ಟು ಹೊತ್ತಿಗೆ ಬೇರೆ ರಾಜ್ಯದವರು ತಮ್ಮ ಲಾಭವನ್ನು ಪಡೆದುಕೊಂಡು ಸಫಲರಾಗಿದ್ದರು. ಈ ವಿಚಾರದಲ್ಲಿ ಏನಾದರೂ ಒಂದು ಬೇಸಿಸ್ ಇರಲೇಬೇಕಾಗುತ್ತದೆ. ನಮ್ಮಲ್ಲಿ ಕಾಟನ್ ಎಷ್ಟು ಉತ್ಪಾದನೆ ಮಾಡುತ್ತೇವೆ. ಮಹಾರಾಷ್ಟ್ರದವರು ಎಷ್ಟು ಉತ್ಪಾದನೆ ಮಾಡುತ್ತಾರೆ, ಗುಜರಾತಿನವರು ಎಷ್ಟು ಉತ್ಪಾದನೆ ಮಾಡುತ್ತಾರೆ, ಅದಕ್ಕನುಗುಣವಾಗಿ ಲೈಸೆನ್ಸ್‌ಗಳನ್ನು ಕೊಡತಕ್ಕ ವ್ಯವಸ್ಥೆ ಇದೆಯೋ ಅಥವಾ ಇದರಲ್ಲಿ ರಾಜಕೀಯ ಪ್ರಭಾವ ಇರತಕ್ಕವರಿಗೆ ಲೈಸೆನ್ಸ್ ಕೊಡಬೇಕೆನ್ನುವುದು ಇದೆಯೆ ? ಇದರ ಬಗ್ಗೆ ಯಾವ ವ್ಯವಸ್ಥೆ ಇದೆಯೆನ್ನುವುದನ್ನು ತಾವು ಸಭೆಗೆ ತಿಳಿಸಬೇಕು. ಇದರ ಬಗ್ಗೆ ತಾವು ಹಿಂದೆ ಹಿಡಿದಂಥ ಜಾಡನ್ನು ಹಿಡಿದು ಹೋದರೆ ಪರಿಸ್ಥಿತಿ ವಿಷಮವಾಗುತ್ತದೆ ಎನ್ನುವುನ್ನು ತಾವು ಅರ್ಥಮಾಡಿಕೊಳ್ಳಬೇಕು. ಕರ್ನಾಟಕದ ಪ್ರಗತಿ ಕೇವಲ ಭಾಷಣ ಮಾಡುವುದರಿಂದಲೇ ಸಾಧನೆಯಾಗುವುದಿಲ್ಲ ತಾವು ಕಾರ್ಯತತ್ಪರರಾದರೆ ಮಾತ್ರ ಸಾಧನೆಯಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಆ ಜಾಗದಲ್ಲಿ ಕೂತಿರುವುದರಿಂದ ಈ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ತಾವು ಕೋ-ಆಪರೇಟೀವ್ ಷುಗರ್ ಫ್ಯಾಕ್ಟರೀಸ್‌ಗೆ ಎಷ್ಟು ಲೈಸೆನ್ಸ್‌ನ್ನು ತೆಗೆದುಕೊಂಡು ಬಂದಿದ್ದೀರಿ ?

ಶ್ರೀ ಎಚ್, ಶ್ರೀಕಂಠಯ್ಯ.—ಎರಡಕ್ಕೆ.

ಶ್ರೀ ಹೆಚ್. ಡಿ. ದೇವೇಗೌಡ.—ಬಹಳ ಸಂತೋಷ. ಈ ಎರಡಕ್ಕೆ ನಿಮಗೆ ಬಹಳ ಸಮಾಧಾನವಾಗಿದೆಯೆಂದು ಕಾಣುತ್ತದೆ. ಮಹಾರಾಷ್ಟ್ರದವರು ಎಷ್ಟು ಲೈಸೆನ್ಸ್ ತೆಗೆದುಕೊಂಡು ಬಂದಿದ್ದಾರೆ, ಉತ್ತರ ಪ್ರದೇಶದವರು ಎಷ್ಟು ಲೈಸೆನ್ಸ್ ತೆಗೆದುಕೊಂಡಿದ್ದಾರೆ ನೀವು ಎಷ್ಟು ಲೈಸೆನ್ಸ್‌ನ್ನು ತೆಗೆದುಕೊಂಡಿದ್ದೀರಿ ಎಂದು ನೋಡಿದಾಗ ನಿಮ್ಮ ಪರಿಸ್ಥಿತಿ ಅರ್ಥವಾಗುತ್ತದೆ. ನಮ್ಮ ರೈತರು ಹೆಚ್ಚಾಗಿ ಕಬ್ಬನ್ನು ಬೆಳೆದು ಕಣ್ಣೀರಿನಲ್ಲಿ ಕೈ ತೊಳೆಯುವ ಪರಿಸ್ಥಿತಿಗೆ ತಂದಿದ್ದೀರಿ ಎಂದರೆ ತಪ್ಪಾಗಲಾರದು. ರೈತರ ಸಾಧನೆಯ ಫಲವನ್ನು ನೀವು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ. ನಮ್ಮ ರಾಜ್ಯದಲ್ಲಿ ರೈತರು ಸುಮಾರು ೬೫ ಲಕ್ಷ ಟನ್ ಕಬ್ಬನ್ನು ಬೆಳೆದಿದ್ದಾರೆಂದು ದೊಡ್ಡದಾಗಿ ಹೇಳಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಿ. Owing to the high price of jaggery during this year sugar factories have not been able to attract adequate price. ೧೯೮೧-೮೨ರಲ್ಲಿ ಕಬ್ಬನ್ನು ನಿಮ್ಮ ಮನೆಯ ಬಾಗಿಲಿಗೆ ತೆಗೆದುಕೊಂಡುಬಂದ ರೈತರಿಗೆ ನೀವು ಲಾಟಿ ಚಾರ್ಜ್ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲವೇ ? ಈ ಮಾತನ್ನು ನಾನು ಹೇಳುವಾಗ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲವೆಂದು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಈ ಅಂಶಗಳನ್ನೆಲ್ಲಾ

ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನಿಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು ಲಾಭದಲ್ಲಿವೆ, ಇವುಗಳ ಛೇರ್ಮನ್‌ರವರು ಯಾರು ? ನಿಮ್ಮ ಐ.ಎ.ಎಸ್ ಅಧಿಕಾರಿಗಳು ಇವುಗಳ ಮೇಲ್ವಿಚಾರಣೆಯಲ್ಲಿದ್ದು ಏಕೆ ಇವು ನಷ್ಟವನ್ನು ಅನುಭವಿಸಿದವು ? ಬಿ.ಎ.ಡಿ.ಯು ಬೇಡಿಕೆ ಬಂದಾಗ ನಾನು ಕೂಲಂಕುಷವಾಗಿ ಈ ಅಧಿಕಾರಿಗಳ ಬಗ್ಗೆ ಮಾತನಾಡುತ್ತೇನೆ. ಮೈಸೂರು ಜಿಲ್ಲೆಯಲ್ಲಿಯೂ ಒಂದು ದೊಡ್ಡ ಸಕ್ಕರೆ ಕಾರ್ಖಾನೆಯನ್ನು ಮಾಡಿದ್ದೀರಿ, ಮಹದೇಶ್ವರ ಸಕ್ಕರೆ ಕಾರ್ಖಾನೆ, ಇದು ಹೋದ ವರ್ಷ ಎಷ್ಟು ನಷ್ಟವನ್ನು ಅನುಭವಿಸಿತು ?

ಶ್ರೀ ಎಚ್. ಶ್ರೀಕಂಠಯ್ಯ.—ಸುಮಾರು ನಾಲ್ಕು ಕೋಟಿ ರೂಪಾಯಿಗಳು.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ಯಾರು ಮ್ಯಾನೇಜ್ ಮಾಡುತ್ತಿದ್ದರು ಸ್ವಾಮಿ ? ಕಂಪ್ಲಿ ಸಕ್ಕರೆ ಕಾರ್ಖಾನೆ, ಗೋರಿಬಿದನೂರು ಸಕ್ಕರೆ ಕಾರ್ಖಾನೆ ಈ ರೀತಿಯಾಗಿ ಒಂದೊಂದು ಸಕ್ಕರೆ ಕಾರ್ಖಾನೆಯೂ ಎಷ್ಟೆಷ್ಟು ನಷ್ಟವನ್ನು ಅನುಭವಿಸಿದೆ ? ನಿಮ್ಮ ಐ.ಎ.ಎಸ್. ಅಧಿಕಾರಿಗಳು ತುಂಬಾ ಚೆನ್ನಾಗಿ ಇವುಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆಂದು ಹೇಳುತ್ತೀರಿ, ಏಕೆ ಈ ಕಾರ್ಖಾನೆಗಳು ನಷ್ಟವನ್ನು ಅನುಭವಿಸಬೇಕು ? ಈ ಒಂದು ತಪ್ಪು ಕಲ್ಪನೆ ಏನು ಇದೆ ಇದನ್ನು ತಾವು ಬಿಡಬೇಕು. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಇಟ್ಟಿರತಕ್ಕ ಸಕ್ಕರೆ ರಿಲೀಸ್ ಮಾಡ ಬೇಕಾದರೆ ವಸೂಲಿ ಬಾಜಿ ಮಾಡಿದರು, ಸ್ಟಾಕ್ ಇರತಕ್ಕ ಸಕ್ಕರೆಯ ಮೇಲೆ ಎಷ್ಟು ರೇಟ್ ಆಫ್ ಇಂಟರೆಸ್ಟ್ ಬೀಳುತ್ತದೆ, ಎಲ್ಲಾ ಹಂತಗಳಲ್ಲಿಯೂ ದುರ್ವ್ಯವಹಾರ. ಇದೆಲ್ಲಾ ತಮ್ಮ ಗಮನಕ್ಕೆ ಬಂದಿಲ್ಲವೇ ? ಹಾಸನ ಜಿಲ್ಲೆಯಲ್ಲಿ ಹೇಮಾವತಿ ಸಕ್ಕರೆ ಕಾರ್ಖಾನೆಯ ಬಗ್ಗೆ ಕಳೆದ ವರ್ಷದಿಂದ ನೀವು ಹೇಳುತ್ತಿದ್ದೀರಿ, ಇದಕ್ಕೆ ಐ. ಡಿ. ಬಿ. ಐ. ನವರು ಕೆಲವು ಷರತ್ತುಗಳನ್ನು ನೀವು ಒಪ್ಪಿಕೊಂಡಾಗ ಮೂರೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತಾರೆಂದು ಹೇಳಿದ್ದೀರಿ. ಇನ್ನೊಂದು ಕಡೆ ಅಪೆಕ್ಸ್ ಬ್ಯಾಂಕ್‌ನವರ ಷರತ್ತುಗಳು, ರಿಸರ್ವ್ ಬ್ಯಾಂಕ್‌ನವರ ಷರತ್ತುಗಳು. ಮತ್ತೆ ಇವತ್ತಿನ ದಿವಸ ಈ ರಿಸರ್ವ್ ಬ್ಯಾಂಕ್‌ನ ಷರತ್ತುಗಳು ಇವೆ. ಇದರಿಂದಾಗಿ ಇವತ್ತು ನಮ್ಮ ಜಿಲ್ಲೆಯಲ್ಲಿ ರೈತರು ನೀವು ಕೊಟ್ಟಂತಹ ಆಶ್ವಾಸನೆ ಆಧಾರದಮೇಲೆ ಕಬ್ಬನ್ನು ಬೆಳೆದು ಅದನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಹೋಗಲಾರದೆ ಮಾರ್ಗ ಮಧ್ಯದಲ್ಲಿಯೇ ಪೋಲೀಸರಿಂದ ಲಾಠಿ ಏಟನ್ನು ತಿಂದು ನರಕಯಾತನೆ ಅನುಭವಿಸತಕ್ಕಂಥ ಪರಿಸ್ಥಿತಿಗೆ ಬಂದಿದೆ. ಈ ಒಂದು ಹೊಣೆಯನ್ನು ನಿಮ್ಮ ಇಲಾಖೆಯ ಮುಖ್ಯಾಧಿಕಾರಿಗಳೇ ಹೊರಬೇಕಾಗುತ್ತದೆ. ಇರತಕ್ಕಂಥ ಪರಿಸ್ಥಿತಿಯ ಬಗ್ಗೆ ರೈತರೆಲ್ಲಾ ಇವತ್ತು ಅವರ ಮುಂದೆ ಹೋಗಿ ಕಣ್ಣಲ್ಲಿ ನೀರು ತಂದುಕೊಂಡು ಹೇಳಿದ್ದಾರೆ. ಆದರೂ ಅವರಿಗೆ ಕಣ್ಣೀರಿನ ಕಥೆ ಅರ್ಥವಾಗಿಲ್ಲ. ಅಂತಹ ಒಂದು ಪರಿಸ್ಥಿತಿ ಇಲ್ಲ ಎಂದು ನಾವು ಯಾರೂ ಹೇಳುವುದಕ್ಕಾಗುವುದಿಲ್ಲ. ಇವತ್ತು ಕಬ್ಬಿಗೆ ಒಂದು ಟನ್‌ಗೆ ೨೧೨ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಆದರೂ ಕೂಡ ಒಂದು ಷುಗರ್ ಫ್ಯಾಕ್ಟರಿಯಲ್ಲಿ ೨೭೫ ರೂಪಾಯಿಗಳನ್ನು ಕೊಡುವುದು. ಇನ್ನೊಂದು ಷುಗರ್ ಫ್ಯಾಕ್ಟರಿಯಲ್ಲಿ ೨೫೦ ರೂಪಾಯಿಗಳನ್ನು ಕೊಡುವುದು. ಇನ್ನೊಂದರಲ್ಲಿ ೨೧೨ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಈ ಒಂದು ವ್ಯವಸ್ಥೆಯು ರೈತರ ಮನಸ್ಸಿನ ಮೇಲೆ ಭೀಕರವಾದ ಪರಿಣಾಮವನ್ನು ಬೀರುವುದಕ್ಕೆ ಸಾಧ್ಯವಾಗುವುದಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ. ಕೆಲವು ಕಡೆಗಳಲ್ಲಿ ಅವರು ಏನೊಂದು ವಾದವನ್ನು ಮಂಡನೆ ಮಾಡುತ್ತಾರೆ ಎಂದರೆ ನಾವು ೨೧೨ ರೂಪಾಯಿಗಳ ಮೇಲೆ ಬೆಲೆ ಕೊಡುವುದಾದರೆ ನಮಗೆ ತುಂಬಲಾರದ ನಷ್ಟ ವುಂಟಾಗುತ್ತದೆ ಎಂದು ವಾದ ಮಾಡುತ್ತಾರೆ. ನಾನು ಏನು ಕೇಳಿದೆ ಎಂದರೆ, ಸರ್ಕಾರದವರು ಡೆವಲಪ್‌ಮೆಂಟ್ ಲೋನ್ ಎಂದು ಹೇಳಿ ೫ ಕೋಟಿ ರೂಪಾಯಿಗಳನ್ನು ಎಲ್ಲಾ ಇಂಡಸ್ಟ್ರೀಸ್‌ಗೂ ಕೊಡುತ್ತಾರೆ. ನೀವು ಇದರಲ್ಲಿ ಏತಕ್ಕೆ ಹೀಗೆ ಮಾಡುತ್ತೀರಿ ಎಂದು ಕೇಳಿದೆ. ಅದಕ್ಕೆ ಅವರಲ್ಲಿ ಉತ್ತರ ಇಲ್ಲ. ಪಾಪ ಶ್ರೀ ರುದ್ರಪ್ಪನವರು ಇದರ ಬಗ್ಗೆ ಒಂದು ಸಂದರ್ಭದಲ್ಲಿ ದೊಡ್ಡ ಭಾಷಣ ಮಾಡಿದರು. ಆಗ ನಾನು ನಮ್ಮ ಪಕ್ಷದ ಅಧ್ಯಕ್ಷನಾಗಿದ್ದೆ ಇವರು ಏನು ನಡೆಸುತ್ತಾರೆ ನೋಡೋಣ ಎಂದು ನಾನು ಸುಮ್ಮನೆ ಕುಳಿತಿದ್ದೆ. ಇದು ತುಂಬಾ ಕಾಲ ಹೀಗೆ ಇರುವುದಕ್ಕೆ ಸಾಧ್ಯವಿಲ್ಲ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿವಿಧ ಬಾಬುಗಳಿಗೆ ಇವರು ಲೀಲಾಜಾಲ ವಾಗಿ ಹಣವನ್ನು ಖರ್ಚು ಮಾಡುತ್ತಾರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಉತ್ತರ ಕೊಡುತ್ತ ವಿಶ್ವ ಕನ್ನಡ ಸಮ್ಮೇಳನಕ್ಕೆ ಆರೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಇದೆಲ್ಲಾ ಯಾರ ಪ್ರೇರಣೆಯಿಂದ ಆಯಿತು ? ಅದೇ ಆರು ಕೋಟಿ ರೂಪಾಯಿ

ಗಳನ್ನು ರೈತರಿಗೆ ಕೊಡಬೇಕು ಎಂದರೆ ಇವರು ಜೀವ ಹಿಸುಕಿಕೊಳ್ಳುತ್ತಾರೆ. ರೈತರಿಗೆ ಒಂದು ಗುಂಟೆ ತರೀ ಜಮೀನು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಅಗ್ರಿಕಲ್ಚರಲ್ ಡಿಮ್ಯಾಂಡ್ ಬರಲಿ, ಆಗ ಈ ವಿಚಾರವನ್ನು ನಾನು ಹೇಳುತ್ತೇನೆ. ಹೀಗೆ ಅನುಪಯುಕ್ತವಾದ ಹಾಗೂ ಅನಾವಶ್ಯಕವಾದ ವೆಚ್ಚಗಳನ್ನು ಕಡಿಮೆ ಮಾಡಿ ಅದೇ ಹಣವನ್ನು ಉಪಯೋಗಿಸಿಕೊಂಡು ನಿಜವಾಗಿ ಯಾರೂ ಕಷ್ಟಕ್ಕೊಳಗಾಗಿದ್ದಾರೆ ಆ ಜನತೆಗೆ ಏಕೆ ಸಹಾಯ ಮಾಡಬಾರದು ? ಆ ಜನತೆಗೆ ಸಹಾಯ ಮಾಡತಕ್ಕಂಥ ವಿಶಾಲ ಹೃದಯಬೇಕು. ಮಾನ್ಯ ಚರಣಸಿಂಗ್‌ರವರು ದೆಹಲಿಯಲ್ಲಿ ಬೋಟ್‌ಕ್ಲಬ್‌ನಲ್ಲಿ ೧೦ ಲಕ್ಷ ಜನರನ್ನು ಸೇರಿಸಿ ಭಾಷಣ ಮಾಡಿದರು. ದೇಶದ ನಾನಾ ಮೂಲೆಗಳಿಂದ ಜನರು ಅದಕ್ಕೆ ಹೋದರು. ಹೀಗೆ ಬರೀ ಭಾಷಣವನ್ನು ಮಾಡುತ್ತಾ ಹೋದರೆ ರೈತರು ಮುಂದೆ ಬರುತ್ತಾರೆಯೇ ? ಇದು ಎಲ್ಲಿಯವರೆಗೆ ಹೀಗೆ ನಡೆದುಕೊಂಡು ಹೋಗುವುದಕ್ಕೆ ಸಾಧ್ಯ ? ಇನ್ನು ಇದು ಸಾಧ್ಯವಿಲ್ಲ, ಇವತ್ತು ಫರ್ಟಿಲೈಸರ್ಸ್ ಬೆಲೆಗಳೆಲ್ಲಾ ಹೆಚ್ಚಾಗಿದೆ. ಅದರ ಬಗ್ಗೆ ನಾವು ಮಾತನಾಡುವುದಕ್ಕೂ ಆಗುವುದಿಲ್ಲ. ಅಷ್ಟೊಂದು ಜಾಸ್ತಿಯಾಗಿದೆ. ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಒಂದು ಚೀಲಕ್ಕೆ ೨೧೨ ರೂಪಾಯಿಗಳ ಬೆಲೆ ನಿಗಧಿ ಮಾಡಿದ್ದಾರೆ. ಯಾವ ಒಂದು ಶಾಸ್ತ್ರದ ಆಧಾರದ ಮೇಲೆ ಅದನ್ನು ನಿಗಧಿ ಮಾಡಿದ್ದಾರೆ ? ಅದಕ್ಕೆ ಸರ್ಕಾರದವರು ಸಬ್ಸಿಡಿಯನ್ನು ಕೊಡಬೇಕು. ರೈತರ ಕಷ್ಟಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಹೃದಯಬೇಕು. ಆ ಜನತೆಯನ್ನು ಇದೇ ರೀತಿ ಇನ್ನು ಮುಂದೆ ಕೂಡ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಯತಕ್ಕಂಥವರಿಗೆ ನೀವು ಏನು ಸಬ್ಸಿಡಿ ಕೊಟ್ಟಿದ್ದೀರಿ ? ಯು.ಪಿ. ಯಲ್ಲಿ ಏನು ಸಬ್ಸಿಡಿ ಕೊಟ್ಟಿದ್ದಾರೆ ಎಂಬುದನ್ನು ನೋಡಿ. ದಯವಿಟ್ಟು ಈಗಲಾದರೂ ಇದನ್ನು ಅರ್ಥ ಮಾಡಿಕೊಳ್ಳಿ. In 1977-78 when Janatha Government was there, on account of Lekhi Committee Report when the sugar price went upto Rs. 2·50 per kg., the U. P. and Bihar Governments took a decision to subsidise. At that time Late Sri Devaraj Urs did not oblige even though we demanded on the floor of the House. ನೀವು ಶ್ರೀ ದೇವರಾಜ ಅರಸ್‌ರವರ ಶಿಷ್ಯರು ಅಂತ ಹೇಳಿ ಅದನ್ನೇ ನೀವೂ ಕೂಡ ಕಂಟಿನ್ಯೂ ಮಾಡುವುದಾದರೆ ಇನ್ನು ಮುಂದೆ ನೀವು ರೈತರ ಬಗ್ಗೆ ಮಾತನಾಡಬೇಡಿ. ಮಾನ್ಯ ಕಂದಾಯ ಸಚಿವರು ಇದೇ ಸಭೆಯಲ್ಲಿ ಕ್ರಾಪ್ ಇನ್‌ಷ್ಯೂರೆನ್ಸ್ ಬಗ್ಗೆ ಮಾತನಾಡಿದರು. ೩೭ ತಾಲ್ಲೂಕುಗಳಲ್ಲಿ ಈ ಕ್ರಾಪ್ ಇನ್‌ಷ್ಯೂರೆನ್ಸನ್ನು ಜಾರಿಗೆ ತರತಕ್ಕಂತಹ ಪ್ರಯತ್ನ ಮಾಡಿದ್ದೇವೆ ಎಂದು ಈ ಸಭೆಯಲ್ಲಿ ಹೇಳಿದರು. ಸರ್ಕಾರದ ಹಣಕ್ಕೆ ದೋಖ ಬರಬಾರದ ರೀತಿಯಲ್ಲಿ ಎಷ್ಟು ಚೆನ್ನಾಗಿ ನಿರ್ಣಯ ತೆಗೆದುಕೊಂಡಿದ್ದಾರೆ. ಯಾವುದೋ ಅನುಪಯುಕ್ತವಾದ ವಾಹನಕ್ಕೆ ಇನ್‌ಷ್ಯೂರೆನ್ಸ್ ಮಾಡಿಸಿ, ಅದನ್ನು ಎಲ್ಲಿಯಾದರೂ ಡ್ಯಾಷ್ ಹೊಡೆಸಿ ೨ ಲಕ್ಷ ರೂಪಾಯಿಗಳನ್ನು ಹೊಡೆದುಕೊಂಡು ಹೋಗಬಹುದು, ರೈತನು ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಿಸಿ ಅವನು ಹಾಗೆ ಇರಬೇಕು, ರೈತರ ಹಣೆಬರಹ ಆ ರೀತಿ ಆಗಿದೆ. ಅವರು ಹಣ ಹೊಡೆಯತಕ್ಕಂಥ ಪಾಪದ ಕೆಲಸಕ್ಕೆ ಕೈ ಹಾಕಬಾರದು. ಈ ಸದನದಲ್ಲಿ ಕುರುಬ, ಹರಿಜನ, ಲಿಂಗಾಯಿತ —ಈ ಜನಾಂಗಗಳ ಪ್ರತಿನಿಧಿಗಳು ಇದ್ದಾರೆ. that community people should not come together. If they come together they have no place. ಎನ್ನುವ ರೀತಿಯಲ್ಲಿ ಮಾಡಿದ್ದಾರೆ. ಅದರ ಪರಿಣಾಮ ಆ ರೀತಿ ಇದೆ. ಆದರೂ ಶ್ರೀಮಾನ್ ರುದ್ರಪ್ಪನವರು ಈ ದಿಶೆಯಲ್ಲಿ ಹೋರಾಟಕ್ಕೆ ಹೊರಟಿದ್ದಾರೆ. ಅದಕ್ಕೆ ಏನು ಮಾಡುವುದಕ್ಕಾಗುತ್ತದೆ. ನೀವು ಇದರಲ್ಲಿ ಏನು ಮಾಡಿದ್ದೀರಿ ಎಂದರೆ ಯಾರ ವರಮಾನ ೨,೦೦೦ ರೂಪಾಯಿಗಳ ಒಳಗೆ ಇರುತ್ತದೋ ಅಂತಹವನು can come under the purview of your Crop Insurance, which is only wet-crop. ಅಷ್ಟೊಂದು ಜಾಗ್ರತೆ ವಹಿಸಿ ಈ ಸರ್ಕಾರಕ್ಕೆ ಅಪಾಯ ತಟ್ಟದ ರೀತಿಯಲ್ಲಿ ಈ ಸ್ಕೀಮನ್ನು ಜಾರಿಗೆ ತರತಕ್ಕಂಥ ಪ್ರಯತ್ನ ಮಾಡಿದ್ದೀರಿ, ನಾನು ಹೇಳುತ್ತೇನೆ, ನೀವು ರೈತ ಬೆಳೆದಂತಹ ಎಲ್ಲಾ ಬೆಳೆಗಳಿಗೆ ಕ್ರಾಪ್ ಇನ್‌ಷೂರೆನ್ಸ್ ಸೌಲಭ್ಯವನ್ನು ದೊರಕಿಸಿಕೊಡುವುದಾದರೆ ನಿಮ್ಮ ಅಪೆಕ್ಸ್ ಬ್ಯಾಂಕ್ ಆಗಲೀ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಆಗಲೀ, ಯಾವುದೇ ಬ್ಯಾಂಕ್ ಆಗಲೀ ಸಫರ್ ಆಗುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಾಡದೇ ಹೋದರೆ ನೀವೇನು ೧೧೫ ಕೋಟಿ ರೂಪಾಯಿಗಳನ್ನು ಹಂಚತಕ್ಕಂಥ ಗುರಿಯನ್ನು ಇಟ್ಟುಕೊಂಡಿದ್ದೀರಿ ಅದರಲ್ಲಿ ೪೦ ಪರ್ಸೆಂಟ್‌ನಷ್ಟೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಯಾವುದೇ ಜಮೀನಿನಲ್ಲಿ ಯಾವುದೇ ಬೆಳೆಯಾಗಲೀ, ಅದು ಖುಷ್ಕಿ ಬೆಳೆಯಾಗಲೀ—ತರಿ ಬೆಳೆಯಾಗಲಿ ಒಣ ಬೆಳೆಯಾಗಲಿ ಯಾವುದೇ ಆಗಲಿ ಅದೆಲ್ಲಕ್ಕೂ ಕ್ರಾಪ್ ಇನ್‌ಷ್ಯೂರೆನ್ಸ್ ಸೌಲಭ್ಯವನ್ನು

ಒದಗಿಸಿಕೊಡಬೇಕು. ಅದನ್ನು ಮಾಡುವುದಕ್ಕೆ ನಿಮಗೆ ಮನಸ್ಸು ಇಲ್ಲ. ನೀವು ಈ ರೀತಿಯ ಆತ್ಮವಂಚನೆಯ ಕೆಲಸದಿಂದ ಅವರನ್ನು ಸಂತೃಪ್ತರನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಮಹಾರಾಷ್ಟ್ರದಲ್ಲಿ ಇವತ್ತು ರೈತರಿಗೆ ಸುಮಾರು ೫೦ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದಾರೆ. ತಮಿಳುನಾಡಿನಲ್ಲಿ ಸುಮಾರು ೪೦ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದ್ದಾರೆ. ಆಂಧ್ರದಲ್ಲಿ ಕೂಡ ಇವತ್ತು ಎಲ್ಲಿ ಅವರು ಸಾಲ ಕೊಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿ ಅದನ್ನೆಲ್ಲಾ ರೀಸ್ಟ್ರಕ್ಚರ್ ಮಾಡಿದ್ದಾರೆ ಮತ್ತು ಕನ್‌ವರ್‌ಷನ್ ಮಾಡಿದ್ದಾರೆ. ಆದರೆ ನೀವು ಈ ಕರ್ನಾಟಕದಲ್ಲಿ ಈ ಬಗ್ಗೆ ನಮಗೆ ರಿಸರ್ವ್ ಬ್ಯಾಂಕಿನವರು ಅಡ್ಡಿ ಬರುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ, ರಿಸರ್ವ್ ಬ್ಯಾಂಕ್‌ನವರು ಅಲ್ಲಿ ಏತಕ್ಕೆ ಅಡ್ಡಿ ಬರಲಿಲ್ಲ ಎಂದು ನಾನು ಕೇಳುತ್ತೇನೆ. ಅವರು ಅಲ್ಲಿ ಸ್ಟೇಟ್ ಜನರಲ್ ರೆವಿನ್ಯೂನಿಂದ ಹಣ ತುಂಬಿದರು.

೪-೩೦ ಪಿ.ಎಂ.

ತಾವು ಸುಮಾರು ೧೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ಸುಮಾರು ೭೬.೮೪ ಲಕ್ಷ ರೂಪಾಯಿಗಳು ಖರ್ಚು ಮಾಡಿದ್ದಾರೆ. ಇದಕ್ಕಾಗಿಯೇ ಒಂದು ಸಮಿತಿಯನ್ನು ಸಹ ನೇಮಕ ಮಾಡಿದ್ದಾರೆ. And authorised the Registrar of Co-operative Societies to release the sums to the respective District Banks for reimbursing the amount involved and the loan waived ಇದರ ಪೈಕಿ ೭೬.೮೪ ಲಕ್ಷ ರೂಪಾಯಿಗಳನ್ನು ತಾವು ವೇವ್ ಮಾಡಿದ್ದೀರಿ. ಮತ್ತೆ ಇದಕ್ಕೆ ಅನುಗುಣವಾಗಿರುವಂತಹ ಒಂದು ಷರತನ್ನು ಕೂಡ ತಾವು ಹಾಕಿದ್ದೀರಿ ಅದು ಏನೆಂದರೆ the circumstances of the applicants should be such that they are unable to pay the loan in question ಇದರಲ್ಲಿ ಗೈಡ್‌ಲೈನ್ಸ್ ಏನಾದರೂ ಇದೆಯೇ ಎಂಬುದನ್ನು ತಾವು ತಿಳಿಸಬೇಕು. ಮತ್ತು ಕೃಷಿಕರಿಗೆ ತಾವು ಕೊಡುವಂತಹ ಇರಾದೆಯಾದರೂ ಏನು ? ಈ ರೀತಿ ಮಾಡಿದ ಮೇಲೆ, ತಾವು ಅದಕ್ಕೆ ಏನಾದರೂ ಒಂದು ಸರಿಯಾದ ಸಮಜಾಯಿಸಿ ಹೇಳಬೇಕು. ನಾವು ತಿಳಿದುಕೊಂಡಿರುವುದೇನೆಂದರೆ ಸರ್ಕಾರಕ್ಕೆ ರೈತರ ಬಗ್ಗೆ ಅನುಕಂಪ ಇದೆಯೆಂದು. ಆದರೆ ತಾವು ಯಾವ ಅನುಕಂಪವನ್ನೂ ಸಹ ಇದುವರೆವಿಗೂ ತೋರಿಸಿಲ್ಲ. ತಾವು ಒಂದು ರೀತಿಯಲ್ಲಿ ರೈತರನ್ನು ನಿರ್ಜೀವಿಗಳನ್ನಾಗಿ ಮಾಡುತ್ತಿದ್ದೀರಿ. ತಮಿಳು ನಾಡಿನಲ್ಲಿ ಮತ್ತು ಮದ್ರಾಸ್ ರಾಜ್ಯಗಳಲ್ಲಿ ರಿಯಾಯಿತಿ ಕೊಟ್ಟಿರಬಹುದು ಆದರೆ ನಾವು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರದವರು ಹೇಳಬಹುದು. ಆದರೆ ತಾವು ಅದನ್ನು ಸಹ ಹೇಳುವುದಿಲ್ಲ. ಈಗ ಒಬ್ಬ ರೈತನು ಸುಮಾರು ೩ ಸಾವಿರ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡರೆ ಅವನು ತನ್ನ ಸಾಲವನ್ನು ಪೂರ್ತಿಯಾಗಿ ಮರುಪಾವತಿ ಮಾಡುವಷ್ಟರಲ್ಲಿ ಅದು ಸುಮಾರು ೬,೫೦೦ ರೂಪಾಯಿಗಳಷ್ಟಾಗುತ್ತದೆ. ಇಷ್ಟು ಹಣವನ್ನು ಅವನು ಸಂದಾಯ ಮಾಡಿದರೂ ಸಹ ಇನ್ನೂ ೫ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಅವನ ಮೇಲೆ ಅಟ್ಯಾಚ್‌ಮೆಂಟ್ ಮತ್ತು ಇತರೆ ವಿಧವಾದ ಕಿರುಕುಳವನ್ನು ಕೊಡುತ್ತಾರೆ. ಈಗ ತಮ್ಮ ಸಹಕಾರಿ ಸಂಘಗಳ ನಿಯಮದ ಪ್ರಕಾರ ಯಾವ ಒಬ್ಬ ವ್ಯಕ್ತಿ ಸಾಲವನ್ನು ತೆಗೆದುಕೊಂಡು ಆತನ ಸಾಲಕ್ಕಿಂತ ಜಾಸ್ತಿಯಾಗಿ ಮರುಪಾವತಿ ಮಾಡಿದ್ದರೆ ಆತನ ಸಾಲವನ್ನು ವಜಾ ಮಾಡಬೇಕೆಂಬ ಕಾನೂನು ಇದೆ. ಮತ್ತು ಆತನ ಸಾಲವನ್ನು ಪೂರ್ತಿಯಾಗಿ ರದ್ದು ಮಾಡಬೇಕೆನ್ನುವ ನಿಯಮ ಕೂಡ ಇದೆ. ಆ ರೀತಿ ಈ ಸದನದಲ್ಲಿ ಯುನಾನಿಮಸ್ ಆಗಿ ಒಂದು ಬಿಲ್ ತನ್ನಿ ಎಲ್ಲರ ಒಮ್ಮತದಿಂದ ಪಾಸ್ ಮಾಡೋಣ. ಆದರೆ ನಿಮ್ಮ ಸೆಕ್ರೇಟರಿಯೇಟ್‌ನಲ್ಲಿರುವಂತಹ ಅಧಿಕಾರಿಗಳು ಇದನ್ನು ಒಪ್ಪುವುದಿಲ್ಲ. ತಾವು ಏತಕ್ಕೆ ಇಷ್ಟು ಲಘುವಾಗಿ ತೆಗೆದುಕೊಳ್ಳುತ್ತೀರಿ. The inconsistent attitude of the Government is the main cause for these lapses. ಇದನ್ನು ತಾವು ಏತಕ್ಕೆ ಮಾಡಬೇಕು. ತಾವು ಜನತೆಯಿಂದ ಓಟು ಪಡೆದುಕೊಂಡು ಬಂದಾಗ ಹೇಳಿದ ಮಾತು ಏನು ಎಂಬುದನ್ನು ಎಲ್ಲರೂ ಕೇಳುತ್ತಾರೆ.

ಇನ್ನು ಈ ರೆಗ್ಯುಲೇಟೆಡ್ ಮಾರ್ಕೆಟ್ಸ್ ಬಗ್ಗೆ ಹೇಳುವುದಾದರೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಸುಧೀಂದ್ರರಾವ್ ಕಸಭೆಯವರು ಈ ಇಲಾಖೆಗೆ ಒಂದು ರೀತಿಯ ತಿಮಿಂಗಲ ಇದ್ದ ಹಾಗೆ. ಅವರಿಗೆ ಜಾಗವಿದೆ. At times I feel the whole institution is a force.

ಮಾನ್ಯ ಅರ್ಥಸಚಿವರಾದ ಶ್ರೀಮಾನ್ ವೀರಪ್ಪಮೊಯ್ಲಿಯವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ. Our Government is embarking upon a scheme for structural changes in the organisation of Regulated Market Committees which will be in favour of small producers.' ಆದರೆ ಈ ರೆಗ್ಯುಲೇಟೆಡ್ ಮಾರ್ಕೆಟ್ ಯಾವ ರೀತಿಯಲ್ಲಿಯೂ ಸಹ ಪ್ರಯೋಜನವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಈ ರೆಗ್ಯುಲೇಟೆಡ್ ಮಾರ್ಕೆಟ್ಸ್‌ಗಳಲ್ಲಿ ರೈತರಿಗೆ ನ್ಯಾಯ ಬೆಲೆಯನ್ನು ಒದಗಿಸಿಕೊಡುತ್ತೇವೆಂದು ಹೇಳಿದರು. ಆದರೆ ಈ ರೆಗ್ಯುಲೇಟೆಡ್ ಮಾರ್ಕೆಟ್ಸ್‌ಗಳಲ್ಲಿರುವಂತಹ ಅವ್ಯವಸ್ಥೆಯನ್ನು ನೋಡಿದರೆ ಯಾವ ರೀತಿಯಲ್ಲಿ ರೈತರಿಗೆ ಸಹಾಯ ದೊರಕುತ್ತದೆಂದು ಗೊತ್ತಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಹಾಸನ ಜಿಲ್ಲೆಯ ರೆಗ್ಯುಲೇಟೆಡ್ ಮಾರ್ಕೆಟ್. ಇಲ್ಲಿ ರೈತರಿಂದ ರಕ್ತವನ್ನು ಹೀರುತ್ತಾರೆ. ರೈತರನ್ನು ಹಿಂಸೆ ಮಾಡುತ್ತಾರೆ. ಇಂತಹ ಜನರ ಒಂದು ದೊಡ್ಡ ಗ್ಯಾಂಗ್ ಅಲ್ಲಿ ಇದೆ. ಅವರು ಯಾವ ರೀತಿಯಲ್ಲಿ ತೊಂದರೆ ಕೊಡುತ್ತಾರೆಂದು ಮಾನ್ಯ ಮಂತ್ರಿಗಳು ಮಾಹಿತಿಯನ್ನು ತರಿಸಿಕೊಂಡು ನೋಡಿದರೆ ಮಾತ್ರ ಗೊತ್ತಾಗುತ್ತದೆ. ಅವರಿಗೆ ಯಾವುದೋ ದುಡ್ಡು ಬರುತ್ತದೆ. ಆದ್ದರಿಂದ ಸುಮಾರು ೩೦-೪೦ ಸಾವಿರ ರೂಪಾಯಿಗಳು ಬೆಲೆಬಾಳುವಂತಹ ಕಟ್ಟಡಗಳನ್ನು ಕಟ್ಟಿಸಿದ್ದರೂ ಕೂಡ ಯಾವ ವಿಧವಾದಂತಹ ಪ್ರಯೋಜನವೂ ಕೂಡ ಈ ರೆಗ್ಯುಲೇಟೆಡ್ ಮಾರ್ಕೆಟ್‌ನಿಂದ ಆಗುತ್ತಿಲ್ಲ. ಆ ಕಟ್ಟಡದಲ್ಲಿ ಇವತ್ತು ಏನಾಗಿದೆ ಎಂದರೆ ಕತ್ತೆಗಳು ವಾಸ ಮಾಡುತ್ತಿವೆ. ಕೆಲವಾರು ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಬಿಟ್ಟರೆ ಉಳಿದ ರೆಗ್ಯುಲೇಟೆಡ್ ಮಾರ್ಕೆಟ್ಸ್‌ಗಳ ಅವಸ್ಥೆ ಇದೇ ರೀತಿಯಾಗಿದೆ. ಇವತ್ತು ಚನ್ನಪಟ್ಟಣದಲ್ಲಿ ಇಂತಹ ಒಂದು ರೆಗ್ಯುಲೇಟೆಡ್ ಮಾರ್ಕೆಟ್‌ನ ಭವ್ಯ ಭವನವನ್ನು ಕಟ್ಟಿಸಿದ್ದಾರೆ ಅದರಿಂದ ಸರ್ಕಾರಕ್ಕೆ ಏನು ಪ್ರಯೋಜನವಾಗುತ್ತಿದೆ ? ಎನ್ನುವಂತಹ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ.

ಇನ್ನು ಸಹಕಾರಿ ಸಂಘಗಳ ಆಂಧೋಲನ ನಡೆಯುತ್ತಿದೆ. ಇದರಿಂದ ಏನಾಗುತ್ತದೆ ಎಂದರೆ ಜನರಲ್ಲಿ ನಮ್ಮ ಮೇಲೆ ಇರುವಂತಹ ವಿಶ್ವಾಸ ಮತ್ತು ಒಳ್ಳೆಯ ಭಾವನೆ ಹೋಗಲಾಡಿಸುವಂತಹ ವಾತಾವರಣ ನಿರ್ಮಾಣವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ ಯಾವುದೇ ಒಂದು ಪಕ್ಷದ ರಾಜಕೀಯಕ್ಕೆ ಅವಶ್ಯಕತೆ ಇಲ್ಲ. ಮಾನ್ಯ ಮಂತ್ರಿಗಳು ತಮ್ಮ ರಾಜಕೀಯ ಜೀವನದಲ್ಲಿ ಅದೂ ಅಲ್ಲದೆ ಸಹಕಾರೀ ಕ್ಷೇತ್ರದಲ್ಲಿ ನುರಿತಂತಹ ವ್ಯಕ್ತಿಯಾಗಿದ್ದಾರೆ ಆದ್ದರಿಂದ ನಾನು ಹೇಳುವುದೇನೆಂದರೆ ಶ್ರೀಮಾನ್ ಕೆ. ಹೆಚ್. ಪಟೇಲ್‌ರವರು ಸರ್ಕಾರಕ್ಕೆ ಸಲ್ಲಿಸಿರುವಂತಹ ವರದಿಯನ್ನು ತಾವು ಅನುಸರಿಸಿ ಅವರ ಒಂದು ತತ್ವವನ್ನು ಮುಂದುವರಿಸಿಕೊಂಡು ಹೋಗುತ್ತೀರೋ ಅಥವಾ ಇಲ್ಲವೋ ಎನ್ನುವಂತಹ ಒಂದು ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಏತಕ್ಕೆ ತಾವು ಈ ಸಹಕಾರಿ ಸಂಸ್ಥೆಗಳನ್ನು ತಮ್ಮ ಹಿಡಿತದಲ್ಲಿ ಹಿಡಿದುಕೊಂಡಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸಹಕಾರಿ ಸಂಸ್ಥೆಗಳ ಸದಸ್ಯರನ್ನು ಸರ್ಕಾರದವರು ನೇರವಾಗಿ ನಾಮಿನೇಷನ್ ಮಾಡುತ್ತೇವೆಂದು ಹೇಳಿ ಹೊರಟ್ಟಿದ್ದೀರಿ ಇದು ಒಂದು ರೀತಿಯಲ್ಲಿ ಹೊಡೆದಾಟವಾಗುವುದಕ್ಕೆ ಶುರುವಾಗುತ್ತದೆ ಮತ್ತು ಶ್ರೀಮಾನ್ ಪಟೇಲ್‌ರ ವರದಿಯಲ್ಲಿರುವಂತಹ ತತ್ವವನ್ನು ಎಲ್ಲರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ಕಾರ ನಾಮಿನೇಷನ್ ಮಾಡಬೇಕೆಂದು ಏನು ಹೊರಟಿತ್ತು ಅದನ್ನು ಖಂಡಿತವಾಗಿ ತಾವು ಕೈಬಿಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುವಾಗ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಮತ್ತೇ ಇನ್ನೊಂದು ವಿಷಯವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅದು ಏನೆಂದರೆ ಈಗ ಸಹಕಾರಿ ಸಂಘಗಳಲ್ಲಿ ಏನು ಒಂದು ಆಂಧೋಲನ ನಡೆಯುತ್ತಿದೆ. ಅದರಿಂದ ನಿಮ್ಮ ಸರ್ಕಾರಕ್ಕೆ ಭಾರಿ ಪೆಟ್ಟು ಬೀಳುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕಾಪು ಸಂಜೀವ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದಿಟ್ಟಿರುವ ಸಹಕಾರ ಇಲಾಖೆಯ ಬೇಡಿಕೆಗಳ ವಿಷಯದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಕರಿಗೆ ಬೇಕಾದ ಸಾಲ ಸೌಲತ್ತುಗಳು ಈ ಸಹಕಾರ ಇಲಾಖೆಯಿಂದ ಬರಬೇಕಾದುದು ಬಹಳ ಮುಖ್ಯವಾದುದು. ಇವತ್ತು ನಮ್ಮ ರಾಜ್ಯದಲ್ಲಿ ಭೂಸುಧಾರಣಾ ಕಾಯಿದೆ ಜಾರಿಗೆ ಬಂದ ಮೇಲೆ ಬಹಳಷ್ಟು ಜನ ಸಣ್ಣ ರೈತರು, ಮಾಧ್ಯಮ ತರಗತಿಯ

ರೈತರು ಗ್ರಾಮಾಂತರ ಪ್ರದೇಶದಲ್ಲಿರುವುದರಿಂದ ಅವರಿಗೆ ಬೇಸಾಯ ಮಾಡಲು ಹೆಚ್ಚಿನ ಸಾಲ ಸೌಲಭ್ಯ ಬೇಕಾಗಿದೆ. ತಮಗೆ ಗೊತ್ತಿದ್ದಂತೆ, ಮಾನ್ಯ ಮಿತ್ರರಾದ ಕೊಡಗಿಯವರು ಹೇಳಿದಹಾಗೆ, ನಮ್ಮ ರಾಜ್ಯದಲ್ಲಿ ೩ ಟೈರ್ ಸಿಸ್ಟಂ ಇದೆ. ನಮ್ಮ ರಾಜ್ಯದಲ್ಲಿ ಅಪೆಕ್ಸ್, ಬ್ಯಾಂಕ್, ಅಲ್ಲಿಂದ ಡಿ.ಸಿ.ಸಿ. ಬ್ಯಾಂಕ್, ಅಲ್ಲಿಂದ ಪ್ರೈಮರಿ ಸೊಸೈಟಿಗಳಿಗೆ ಹಣದ ವ್ಯವಸ್ಥೆಯಾಗಿ ಪ್ರತಿ ಸಂಘಸಂಸ್ಥೆಗಳಿಂದ ಬರುವಾಗ ಅವರು ಹಾಕುವ ಬಡ್ಡಿಯಿಂದಾಗಿ ರೈತರಿಗೆ ಸಾಲ ಸೌಲಭ್ಯ ಸಿಕ್ಕುವಾಗ ಬಡ್ಡಿ ಬಹಳ ದುಬಾರಿಯಾಗುತ್ತದೆ. ಇದರಿಂದ ಏನಾಗಿದೆಯೆಂದರೆ, ಈ ಒಂದು ವ್ಯವಸ್ಥೆಯನ್ನು ಬೇಗನೆ ಬದಲಾವಣೆಮಾಡುವುದಕ್ಕೆ ಬಾರದೇ ಇರುವುದರಿಂದ ಸಣ್ಣ ರೈತರಿಗೆ, ಮಧ್ಯಮ ತರಗತಿಯ ರೈತರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಾಹುಕಾರ ಬಡ್ಡಿ ಬಿದ್ದ ರೀತಿಯಲ್ಲಿ ಈ ಬಡ್ಡಿಯೂ ಬೀಳುವುದರಿಂದ ಈ ಬಡ್ಡಿಯನ್ನು ಆದಷ್ಟು ಕಡಿಮೆ ಮಾಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ. ಕೆಲವು ವರ್ಷಗಳ ಹಿಂದೆ ಪ್ರಾಥಮಿಕ ಸಹಕಾರ ಸಂಘಗಳನ್ನು ಅಮಾಲ್ಗಮೇಷನ್ ಮಾಡಿರುವುದರಿಂದ ಬಹಳಷ್ಟು ಸಂಘಗಳಲ್ಲಿ ತೊಂದರೆಯಾಗಿದೆ. ಇದರ ಬಗ್ಗೆ ಹಲವಾರು ಮಿತ್ರರು ಹೇಳಿದರು ಇಂತಹ ಪುನರ್ಸಂಘನೆಯಿಂದ ೮–೧೦ ಮೈಲಿ ದೂರ ಚಿಕ್ಕ ರೈತರು ಹೋಗಬೇಕಾದ ಪರಿಸ್ಥಿತಿ ಬಂದಿದೆ. ಏಕೆಂದರೆ, ಮೊದಲು ಸ್ವಲ್ಪ ಜನ, ಭೂಮಾಲೀಕರು, ದೊಡ್ಡ ರೈತರು ಇರುವಾಗ ಐದಾರು ಮೈಲಿ ಹೋದರೆ ಅವರಿಗೆ ತೊಂದರೆಯಾಗುತ್ತಾ ಇರಲಿಲ್ಲ. ಆದರೆ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ರೈತರು ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ದೂರದ ಪ್ರದೇಶಕ್ಕೆ ಹೋಗಿ, ಸಾಲಸೌಲತ್ತುಗಳನ್ನೂ, ಸಾಗುವಳಿಗೆ ಬೇಕಾದ ವಸ್ತುಗಳನ್ನು ತರಲಿಕ್ಕೆ ಬಹಳ ಕಷ್ಟವಾಗುತ್ತಿದೆ, ಹೆಚ್ಚಿನ ತೊಂದರೆ ಕೂಡ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ ಹಿಂದಿನ ಕಳಾವರ ಸೊಸೈಟಿಯನ್ನು ಕೋಟೇಶ್ವರ ಸೊಸೈಟಿಗೆ ಸೇರಿಸಿದ್ದಾರೆ, ಅದು ೪ ಗ್ರಾಮಗಳ ಒಂದು ಪಂಚಾಯಿತಿಯಿಂದ ನಡೆಯುಂಥಾದ್ದು. ಈ ಒಂದು ಕೋಟೇಶ್ವರ ಸಹಕಾರ ಸಂಘ ಹೋದಮೇಲೆ ಅಲ್ಲಿಯೂ ಕೂಡ ಒಂದು ವಂಚನೆ ಪ್ರಕರಣ ನಡೆದಿದೆ. ಈ ವಂಚನೆ ಪ್ರಕರಣ ಸುಮಾರು ಎರಡೂ ಮುಕ್ಕಾಲು ಲಕ್ಷ ರೂಪಾಯಿಗಳದ್ದು. ಅದರ ಬಗ್ಗೆ ತನಿಖೆಯಾಗುತ್ತಾ ಇರುವಾಗ ಮತ್ತೊಂದು ೩೦ ಸಾವಿರ ರೂಪಾಯಿಗಳ ವಂಚನೆ ಈ ವರ್ಷ ಆಗಿದೆ. ನಮ್ಮ ಸಂಘ ಬಹಳ ಚೆನ್ನಾಗಿ ನಡೆಯುತ್ತಿತ್ತು. ಇಂಥಾ ಒಂದು ಹಾಳು ಸಂಘದ ಒಟ್ಟಿಗೆ ಕೂಡಿ ನಮಗೂ ನಷ್ಟವಾಗಿದೆ, ನಮ್ಮ ಸಂಘ ಕೂಡ ಹಾಳಾಗಿದೆ. ಅಲ್ಲಿ ರೈತರಿಗೆ ಸಾಲ ಸೌಲಭ್ಯ ಸಿಕ್ಕುವುದಿಲ್ಲ. ಅಲ್ಲದೆ ರೈತರಿಗೆ ಬೇಕಾದ ರಸಗೊಬ್ಬರ, ಕ್ರಿಮಿನಾಶಕ ವಸ್ತುಗಳ ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲ, ಇದರಿಂದ ರೈತರಿಗೆ ಬಹಳ ಕಷ್ಟವಾಗಿದೆ, ಆದುದರಿಂದ ಎಲ್ಲೆಲ್ಲಿ ಅಗತ್ಯವುಂಟೋ ಆ ಮಟ್ಟಿಗಾದರೂ ಸಂಘಗಳನ್ನು ವಾಪಸ್ ಕೊಡುವ ಬಗ್ಗೆ. ಪುನರ್ವ್ಯವಸ್ಥೆ ಮಾಡುವ ರೀತಿಯಲ್ಲಿ ಸರ್ಕಾರ ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಈ ಗೋದಾಂ ಕಟ್ಟಡಗಳ ಅವಶ್ಯಕತೆ ಬಹಳಷ್ಟು ಉಂಟು. ತಮಗೆ ಗೊತ್ತಿದ್ದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ತಮ್ಮ ಬೆಳೆ ಬೆಳೆದು, ಫಸಲು ಬಂದು ಅದು ಮಾರಾಟಕ್ಕೆ ಬರುವಾಗ ಧಾರಣೆಗಳು ಬಹಳ ಕಡಿಮೆ ಇರುತ್ತದೆ, ಈ ಸಮಯದಲ್ಲಿ ಫಸಲನ್ನು ಮಾರಿದರೆ ಒಳ್ಳೆಯ ಬೆಲೆ ರೈತನಿಗೆ ಸಿಕ್ಕುವುದಿಲ್ಲ. ಆದುದರಿಂದ ಭತ್ತ ಮುಂತಾದ ಸಾಮಗ್ರಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇಡಲಿಕ್ಕೆ ೫೦ ಟನ್, ೧೦೦ ಟನ್ ಹಿಡಿಸುವಂಥ ಗೋದಾಂಗಳ ಅವಶ್ಯಕತೆ ಉಂಟು. ಇದರಿಂದಾಗಿ ರೈತ ಇಡೀ ವರ್ಷ ಕಷ್ಟಪಟ್ಟು ಬೆಳೆಸಿದ ಕೃಷಿ ಉತ್ಪಾದನೆಯನ್ನು ಇಂತಹ ಗೋದಾಂಗಳಲ್ಲಿ ಇಟ್ಟು, ಮುಂದೆ ಹೆಚ್ಚಿನ ಧಾರಣೆ ಬಂದಾಗ ಮಾರಾಟಮಾಡುವಂತೆ ಪ್ರಯೋಜನ ಸಿಕ್ಕುವ ರೀತಿಯಲ್ಲಿ ಅವಕಾಶವಾಗಬೇಕು. ಹಲವಾರು ಕಡೆಗಳಲ್ಲಿ ಗೋದಾಂಗಳುಂಟು, ಆದರೆ ಅವುಗಳ ಕೆಲಸ ಅರ್ಧಂಬರ್ಧ ಆಗಿದೆ. ಹೆಚ್ಚಿನ ಕಡೆಗಳಲ್ಲಿ ಗೋದಾಂ ಕಟ್ಟಡ ಆಗಿಲ್ಲ. ಇದಕ್ಕಾಗಿ ಹೊಸ ಗೋದಾಂಗಳನ್ನು ಕೊಡಲಿಕ್ಕೆ ಸರ್ಕಾರದ ತಡೆ ಉಂಟು ಎಂದು ನಾನು ಕೇಳಿದ್ದೇನೆ. ಯಾರೋ ಮಾಡಿದ ತಪ್ಪಿಗಾಗಿ ಈ ರೀತಿ ಮಾಡ ಕೂಡದು. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಗೋದಾಂಗಳನ್ನು ಕೊಟ್ಟು ರೈತಾಪಿ ಜನರಿಗೆ ಸಹಾಯ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ರಸಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳ ವಿಷಯದಲ್ಲಿ ಹೇಳುವುದಾದರೆ, ಮಾನ್ಯ ಕೊಡಗಿಯವರು ಹೇಳಿದಹಾಗೆ ಇವತ್ತು ಸಹಕಾರಿ ಸಂಘಗಳಿಗೆ ಇದು ಮನಾಪಲಿ ರೀತಿಯಲ್ಲಿ ಮಾಡಲಿಕ್ಕೆ ಇಲ್ಲ. ಈ ಫರ್ಟಿಲೈಸರ್ಸ್ ಸಹಕಾರಿ ಸಂಸ್ಥೆಗಳಲ್ಲಿ ಮಾರುವುದಕ್ಕೆ ಇದ್ದರೂ ಕೂಡ, ಮಾರ್ಕೆಟಿಂಗ್ ಫೆಡರೇಷನ್‌ನಿಂದ, ತಾಲ್ಲೂಕು ಮಂಡಲಿಗೆ, ಅಲ್ಲಿಂದ ಮಾರ್ಕೆಟಿಂಗ್ ಸೊಸೈಟಿಗೆ ಬಂದು ಅಲ್ಲಿಂದ ಪ್ರೈಮರಿ

ಸೊಸೈಟಿಗೆ ಬಂದು ಅಲ್ಲಿಂದ ರೈತರಿಗೆ ಬರುವಾಗ ರಸಗೊಬ್ಬರಗಳು ಮತ್ತು ಕೃಷಿ ಉಪಕರಣಗಳ ಮೇಲೆ ಬಹಳಷ್ಟು ಹೆಚ್ಚಿನ ಧಾರಣೆ ಬಿದ್ದು. ರೈತರಿಗೆ ಹೆಚ್ಚು ನಷ್ಟವಾಗಿ ಹೋಗುತ್ತಾ ಇದೆ. ಈ ಒಂದು ಕೃಷಿ ಉತ್ಪನ್ನಗಳ ಬೆಲೆ ಒಳ್ಳೆಯದು ಇಲ್ಲದೇ ಇರುವಾಗ ಕೂಲಿ ಹೆಚ್ಚುತ್ತಾ ಇರುವಾಗ, ಕೃಷಿ ಉಪಕರಣಗಳ ಬೆಲೆ ಬಹಳಷ್ಟು ಹೆಚ್ಚುತ್ತಾ ಹೋದರೆ ರೈತರಿಗೆ ಕಷ್ಟವಾಗುತ್ತದೆ. ಖಾಸಗಿ ಜನರು ಹೆಚ್ಚು ಹೆಚ್ಚಾಗಿ ಕಡಿಮೆ ರೇಟಿನಲ್ಲಿ ತಂದು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಿಗೆ ಕೊಡುವಾಗ ಈ ಸಂಘಗಳು ಹೆಚ್ಚು ಲಾಭದಾಯಕವಾಗಿ ನಡೆಸಲಿಕ್ಕೆ ಆಗುವುದಿಲ್ಲ. ಅಲ್ಲದೆ ತಾಲ್ಲೂಕು ಮಟ್ಟದಲ್ಲಿ ಇಂಥಾ ಒಂದು ತಾಲ್ಲೂಕು ಮಾರ್ಕೆಂಟಿಂಗ್ ಸೊಸೈಟಿ ಇರುವಾಗ ಮಾರ್ಕೆಟಿಂಗ್ ಫೆಡರೇಷನ್ ಬ್ರಾಂಚು, ಆಗ್ರೋ ಇಂಡಸ್ಟ್ರೀಸ್ ಬ್ರಾಂಚುಗಳೂ ಕೂಡ ಹೀಗೆ ಎರಡು, ಮೂರು ಬ್ರಾಂಚುಗಳನ್ನು ಇಟ್ಟುಕೊಳ್ಳುತ್ತಾರೆ ಕುಂದಾಪುರದಲ್ಲಿ ಇಂಥಾ ಮೂರು ಬ್ರಾಂಚುಗಳು ಇರುವುದರಿಂದ ಮೂರು ಸಂಘಗಳೂ ನಷ್ಟವಾಗಿ, ಈ ಮೂರು ಸಂಸ್ಥೆಗಳೂ ಒಳ್ಳೆಯ ರೀತಿಯಲ್ಲಿ ನಡೆಯುವುದಿಲ್ಲ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ಒಂದು ಕೇಂದ್ರದಲ್ಲಿ ಯಾವುದಾದರೂ ಒಂದು ಸಂಘ ಇದ್ದರೆ ಸಾಕು. ಇಂತಹ ಎರಡು ಮೂರು ಸಂಘಗಳನ್ನು ಮಾಡುವುದು ಸರಿಯಲ್ಲವೆಂದು ಈ ಸಮಯದಲ್ಲಿ ಸಲಹೆ ಕೊಡುತ್ತಿದ್ದೇನೆ.

ಇನ್ನು ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೭೩ರಲ್ಲಿ ರಿಜಿಸ್ಟರಾದ ಸಹಕಾರ ಸಕ್ಕರೆ ಕಾರ್ಖಾನೆ; ಬ್ರಹ್ಮಾವರ, ಇದರ ಕೆಲಸವು ಕಳೆದ ೭-೮ ವರ್ಷಗಳಿಂದ ನೆನಗುದಿಗೆ ಬಿದ್ದಿದೆ. ನಾನು ಬಹಳ ಸಂತೋಷದಿಂದ ಒಂದು ವಿಷಯವನ್ನು ಹೇಳುವುದೇನೆಂದರೆ, ನಮ್ಮ ರಾಜ್ಯ ಸರ್ಕಾರದಲ್ಲಿ ಈಗಿನ ಸಹಕಾರ ಮಂತ್ರಿಗಳು ಮತ್ತು ನಮ್ಮ ಆರ್ಥಿಕ ಮಂತ್ರಿಗಳು ಬಂದ ಮೇಲೆ ಕಳೆದ ಎರಡು ವರ್ಷಗಳಿಂದ ಸಕ್ಕರೆ ಕಾರ್ಖಾನೆಗೆ ಬೇಕಾದಷ್ಟು ಸೌಲತ್ತನ್ನು ಕೊಟ್ಟು ಇವತ್ತು ಅಭಿವೃದ್ಧಿ ಪಥದಲ್ಲಿ ಹೋಗುವಂತೆ ಮಾಡಿದ್ದಾರೆ. ಈ ಬಗ್ಗೆ ಬೇಕಾದಷ್ಟು ಕಟ್ಟಡಗಳು ಬರುತ್ತಾ ಉಂಟು. ಅಲ್ಲದೆ ಅಲ್ಲಿ ಮೆಷಿನ್‌ಗಳು ಆಗಲೆ ಬಂದಿವೆ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಸಕ್ಕರೆ ಕಾರ್ಖಾನೆ ರಿಜಿಸ್ಟರಾಗಿ ೭-೮ ವರ್ಷಗಳಾದ ಮೇಲೆ ಷೇರು ಕೊಟ್ಟ ರೈತರಿಗೆ ತಮ್ಮ ಸಾಲಕ್ಕಿಂತ ಬಡ್ಡಿ ಜಾಸ್ತಿಯಾಗಿದೆ ರೈತ ಈ ಒಂದು ಕಷ್ಟದಲ್ಲಿರುವಾಗ ಇದನ್ನು ಇನ್ನೂ ಉದ್ದಕ್ಕೆ ಬೆಳಸದೆ ಆದಷ್ಟು ಬೇಗನೆ ಇದು ಮುಗಿಯುವ ರೀತಿಯಲ್ಲಿ ಅದಕ್ಕೆ ಎಲ್ಲಾ ಸಹಕಾರವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಂದು ನಂಬಿದ್ದೇನೆ, ಈ ಒಂದು ಕೆಲಸವನ್ನು ಮಾಡಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಅದೇರೀತಿ ಕೊಕೋ ಸಂಸ್ಕರಣದ ಒಂದ ಯೂನಿಟ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೆ. ೧೯೮೦ರಲ್ಲಿ ಈ ಕೊಕೋಗೆ ಬೆಲೆ ಬಿದ್ದಾಗ, ಆಗಿನ ಮನಾಪಲಿ ಕ್ಯಾಡ ಬರೀಸ್ ಸಂಸ್ಥೆಯವರು ಮತ್ತು ಅಮುಲ್ ಸಂಸ್ಥೆಯವರು ತಮ್ಮ ಖರೀದಿಯನ್ನು ನಿಲ್ಲಿಸಿದ್ದಾಗ ಆ ಜಿಲ್ಲೆಯಲ್ಲಿ ಕೊಕೋ ಬೆಳೆಗಾರರಿಗೆ ಬಹಳ ಕಷ್ಟ ಇತ್ತು, ಆ ಸಮಯದಲ್ಲಿ ಕ್ಯಾಂಕೊ ಸಂಸ್ಥೆಯವರು ಮುಂದೆ ಬಂದು ಈ ಕೊಕೋವನ್ನು ಖರೀದಿಮಾಡಿ ಸ್ವಲ್ಪಮಟ್ಟಿಗೆ ಸಹಾಯಕ್ಕೆ ಬಂದರೂ ಆದರೂ ಧಾರಣೆ ಒಳ್ಳೆಯದು ಇರಲಿಲ್ಲ. ಇವತ್ತು ನಮ್ಮ ರಾಜ್ಯಸರ್ಕಾರ ಕ್ಯಾಂಕೋ ಸಂಸ್ಥೆಯವರು ಕೊಕೋ ಸಂಸ್ಕರಣ ಯೂನಿಟ್ಟನ್ನು ಸುಮಾರು ೮ ಕೋಟಿ ರೂಪಾಯಿಗಳ ಖರ್ಚಿನಿಂದ ಮಾಡುತ್ತಾ ಇದ್ದಾರೆ. ತಮಗೆ ಗೊತ್ತಿದ್ದ ಹಾಗೆ ನಮ್ಮ ಜಿಲ್ಲೆಯಲ್ಲಿ ಸುಮಾರು ೧೦ ಸಾವಿರ ಎಕರೆಯಲ್ಲಿ ಕೊಕೋ ಬೆಳೆಯುತ್ತಿದ್ದಾರೆ. ಅಲ್ಲದೆ ನೆರೆ ರಾಜ್ಯವಾದ ಕೇರಳದಲ್ಲಿ ಇದಕ್ಕಿಂತಲೂ ಹೆಚ್ಚು ವಿಸ್ತೀರ್ಣದಲ್ಲಿ ಕೋಕೋ ಬೆಳೆಯುವಾಗ ಈ ಒಂದು ಸಂಸ್ಥೆ ಆದಷ್ಟು ಬೇಗ ಹೆಚ್ಚು ಕೆಲಸ ಮಾಡಿ ನಿಜವಾಗಿಯೂ ಕಷ್ಟದಲ್ಲಿರುವಂಥ ಕೋಕೋ ಬೆಳೆಗಾರಿಗೆ ಹೆಚ್ಚಿನ ಪ್ರಯೋಜನವಾಗುವ ಹಾಗೆ ಪ್ರಯತ್ನ ಮಾಡುತ್ತಾರೆಂದು ನಾನು ಭಾವಿಸುತ್ತೇನೆ ಮತ್ತು ಕೋಕೋವನ್ನು ಹೊರದೇಶಗಳಿಗೂ ಕೂಡ ಎಕ್ಸ್‌ಪೋರ್ಟ್ ಮಾಡಿ ವಿದೇಶಿ ವಿನಿಮಯಗಳಿಸುವ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಈ ಒಂದು ಒಳ್ಳೆಯ ಕೆಲಸವನ್ನು ರಾಜ್ಯಸರ್ಕಾರ ಮಾಡಿದೆ. ಇದಕ್ಕಾಗಿ ರೈತರ ಪರವಾಗಿ ನಮ್ಮ ರಾಜ್ಯ ಸರ್ಕಾರಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಇನ್ನು ಪಿ.ಎಲ್.ಡಿ. ಬ್ಯಾಂಕುಗಳ ವಿಚಾರದಲ್ಲಿ ಹೇಳುವುದಾದರೆ. ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ತಾಲ್ಲೂಕು ಮಟ್ಟದಲ್ಲಿ ಪಿ.ಎಲ್.ಡಿ. ಬ್ಯಾಂಕುಗಳು ಉತ್ತಮವಾದ ಕೆಲಸವನ್ನು ಮಾಡುತ್ತಾ ಇವೆ. ಅದರಲ್ಲಿ ಕೃಷಿಕರಿಗೆ ಬೇಕಾದ ಹಲವಾರು ವಿಶೇಷವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ವಿಶ್ವ ಬ್ಯಾಂಕಿನ ನೆರವಿನಿಂದ ಗೇರು ಕೃಷಿಯ ಬಗ್ಗೆ ಪಿ.ಎಲ್.ಡಿ. ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ಹೆಚ್ಚಿನ ಕೆಲಸವನ್ನು ಮಾಡುತ್ತಾ ಇವೆ. ಇದರಲ್ಲಿ ಒಂದು ವಿಷಯ ಏನೆಂದರೆ, ಪಿ.ಎಲ್.ಡಿ. ಬ್ಯಾಂಕಿನವರು ಪಟ್ಟಾ ಭೂಮಿಗೆ ಮತ್ತು ತಮ್ಮ ಸ್ವಂತ ಭೂಮಿಗೆ ಮಾತ್ರ

ಸಾಲ ಸಬ್ಸಿಡಿ ಕೊಡುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ೧೯೫೬ನೇ ಇಸವಿಯಲ್ಲಿ ರಾಜ್ಯ ಸರ್ಕಾರ ಈ ಕ್ಯಾಷ್ಯು ಬೆಳೆಗಾಗಿ ಸಾವಿರಾರು ಎಕರೆ ಸ್ಥಳವನ್ನು ರೈತರಿಗೆ ಕೊಟ್ಟಿದ್ದಾರೆ. ಆದರೆ ಈ ಒಂದು ಯೋಜನೆ ಪ್ರಕಾರ, ಕಂಡೀಷನ್ ಇರುವುದರಿಂದ ಲೀಸ್‌ಗೆ ಹಣ ಕೊಡಲಿಕ್ಕೆ ವ್ಯವಸ್ಥೆ ಇಲ್ಲ ಎಂದು ನಾನುಕೇಳಿದ್ದೇನೆ. ಏಕೆಂದರೆ ಆ ಸ್ಥಳ ಎತ್ತರವಾದ ಗುಡ್ಡ ಪ್ರದೇಶದಲ್ಲಿದೆ ಅದು ಸಾವಿರಾರು ಎಕರೆ ಜಮೀನು ಇರುವಾಗ ಅದಕ್ಕೆ ಸಾಲ ಮತ್ತು ಸಬ್ಸಿಡಿ ಸಿಗಲಿಕ್ಕೆ ಕಾನೂನಿನಲ್ಲಿ ಸ್ವಲ್ಪ ತೊಂಗರೆಯುಂಟು. ಕಮರ್ಷಿಯಲ್ ಬ್ಯಾಂಕ್ ಸಾಲ ಕೊಡಲಿಕ್ಕೆ ಮುಂದೆ ಬಂದಿದ್ದಾರೆ. ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ಈ ಒಂದು ತೊಡಕನ್ನು ತೆಗೆಸಿಹಾಕಿ, ನಮ್ಮ ಜಿಲ್ಲೆಯಲ್ಲಿ ಗೇರು ಕೃಷಿ ಹೆಚ್ಚಿಗೆ ಅಭಿವೃದ್ಧಿಗೆ ಬರುವ ರೀತಿಯಲ್ಲಿ ತಾವು ಸಹಾಯಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಹಲವಾರು ಜನ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗುತ್ತಿದೆಯೆಂದು ಹೇಳಿದರು, ಅದು ನಿಜ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಅಲ್ಲಿ ಸರಿಯಾದ ಇನ್ಸ್‌ಪೆಕ್ಷನ್ ಇಲ್ಲದೇ ಇರುವುದರಿಂದ, ಸರಿಯಾದ ಆಡಿಟ್ ಸ್ಟಾಫ್ ಇಲ್ಲದೇ ಅವರು ಸರಿಯಾಗಿ ತನಿಖೆ ಮಾಡದೇ ಇರುವುದೇ ಒಂದು ಕಾರಣವಾಗಿರಬೇಕೆಂದು ಹೇಳುತ್ತೇನೆ. ಈ ಒಂದು ಸಹಕಾರ ಸಂಘಗಳಲ್ಲಿ ಲೆಕ್ಕವನ್ನು ವರ್ಷೇ ವರ್ಷೇ ಆಡಿಟ್ ಮಾಡಿದರೆ ಅದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಕೂಡಲೇ ಸಿಗುತ್ತದೆ. ಆದರೆ ಇವತ್ತಿನ ದಿವಸ ಅವರಿಗೆ ಸಾಕಷ್ಟು ಸ್ಟಾಫ್ ಇವೆಯೋ ಇಲ್ಲವೋ ಗೊತ್ತಿಲ್ಲ. ಆದುದರಿಂದ ತಾವು ಚೌಕಾಶಿ ಮಾಡದೇ ಅವರಿಗೆ ಬೇಕಾದಷ್ಟು ಸ್ಟಾಫ್‌ನ್ನು ಕೊಡಿ. ಇಲ್ಲದಿದ್ದರೆ ತಡ ಮಾಡಿದಷ್ಟು ಹೆಚ್ಚಿನ ವಂಚನೆಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಮತ್ತು ಹೆಚ್ಚಿನ ಹಣ ದುರುಪಯೋಗವಾಗುವುದಕ್ಕೆ ಅನುಕೂಲವಾಗುತ್ತದೆ. ಇನ್ನು ತಮಗೆ ಗೊತ್ತಿರುವ ಹಾಗೆ ನಮ್ಮ ಜಿಲ್ಲೆಯ ಒಂದು ಬ್ಯಾಂಕ್‌ನಲ್ಲಿ ೧೦-೧೮ ಲಕ್ಷ ರೂಪಾಯಿಗಳ ವಂಚನೆಯಾಗಿದೆ ಆದುದರಿಂದ ಅದನ್ನು ರಿಕವರಿ ಮಾಡುವ ಬಗ್ಗೆ ಇನ್ನೂ ಏರ್ಪಾಡು ಆಗಿಲ್ಲ ಆದುದರಿಂದ ಆದಷ್ಟು ಬೇಗ ಅದನ್ನು ವಸೂಲಿ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೃಷಿ ಮಾರುಕಟ್ಟೆ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಮಾರ್ಕೆಟ್‌ಗಳ ಸಮಿತಿಯು ವಿಸರ್ಜನೆ ಆಗಿ ಹಲವಾರು ವರ್ಷಗಳಾಯಿತು. ವಿಶ್ವಬ್ಯಾಂಕ್‌ನಿಂದ ಹಣದ ಸಹಾಯವನ್ನು ಪಡೆದುಕೊಳ್ಳುವಾಗ ಉಪ ಮಾರ್ಕೆಟ್ ಸಮಿತಿಗಳನ್ನು ನಮ್ಮ ತಾಲ್ಲೂಕ್‌ಗಳಲ್ಲಿ ಆಗಬೇಕೆಂದು ತೀರ್ಮಾನವಾಗಿತ್ತು. ನಮ್ಮ ಜಿಲ್ಲೆಯಲ್ಲಿ ಶ್ರೀ ಎ ಜಿ. ಕೊಡಗಿಯವರು ಅಧ್ಯಕ್ಷರಾಗಿದ್ದರು. ಆಗ ಉಪ ಸಮಿತಿಗಳು ಸ್ಥಾಪನೆಯಾಗಿದ್ದವು, ಆದರೆ ಈಗ ಎಲ್ಲಾ ಉಪ ಸಮಿತಿಗಳನ್ನು ವಿಸರ್ಜನೆ ಮಾಡಲಾಗಿದೆ. ಹೊಸದಾಗಿ ಇನ್ನೂ ಏನೂ ಮಾಡಿಲ್ಲ. ಇದೇ ರೀತಿ ಕುಂದಾಪುರದಲ್ಲಿಯೂ ಹಾಗೆಯೇ ಇದೆ. ಮಾನ್ಯ ಮಂತ್ರಿಗಳವರು ಬಂದಿದ್ದರು ಆಗ ಅವರಿಗೆ ಈ ವಿಷಯವನ್ನು ತಿಳಿಸಿದ್ದೇವೆ. ಆದುದರಿಂದ ಇದನ್ನು ಆದಷ್ಟು ಬೇಗ ಮಾಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇದೇ ರೀತಿ ಉಡುಪಿ ಉಪ ಮಾರ್ಕೆಟ್ ಸಮಿತಿ ಕೂಡ ಕೆಲಸ ಮಾಡುತ್ತಿಲ್ಲ. ಮೊನ್ನೆ ದಿವಸ ಅಲ್ಲಿಗೆ ಮಾನ್ಯ ಶ್ರೀ ವೀರಪ್ಪಮೊಯ್ಲಿಯವರು ಅಲ್ಲಿಗೆ ಹೋಗಿದ್ದರು, ಅಲ್ಲಿಯೂ ಕೂಡ ದೊಡ್ಡ ಕಾಂಪ್ಲೆಂಕ್ಸ್ ಕೂಡ ಆಗಿ ನಿಂತಿದೆ, ಆದುದರಿಂದ ಅಲ್ಲಿಯೂ ಕೂಡ ಒಂದು ಮಾರ್ಕೆಟ್ ಉಪಸಮಿತಿಯನ್ನು ಮಾಡಿದರೆ ಅದರಿಂದ ಸರ್ಕಾರಕ್ಕೂ ಬೇಕಾದಷ್ಟು ಹಣ ಬರುತ್ತದೆ. ಇದೇ ರೀತಿ ಪುತ್ತೂರು ತಾಲ್ಲೂಕಿನಲ್ಲಿ ಒಂದು ಉಪಮಾರ್ಕೆಟ್ ಸಮಿತಿಗೆ ಬಿಲ್ಡಿಂಗ್ ಆಗಿದೆ ಆದರೆ ಅಲ್ಲಿಗೆ ಹೋಗುವುದಕ್ಕೆ ದಾರಿಯೇ ಇಲ್ಲವೆಂದು ಕೇಳಿದ್ದೇನೆ. ಆದುದರಿಂದ ಇದರ ಕಡೆಗೂ ಸರ್ಕಾರದವರು ಲಕ್ಷ್ಯ ನೀಡಬೇಕೆಂದು ಹೇಳಿ, ಇದರಲ್ಲಿರತಕ್ಕ ಲೋಪದೋಷಗಳನ್ನು ಆದಷ್ಟು ಬೇಗ ಸರಿಮಾಡಿ ಅದರಿಂದ ರೈತರಿಗೆ ಉಪಯೋಗವಾಗುವ ರೀತಿಯಲ್ಲಿ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಸಹಕಾರ ಸಚಿವರು ಮತ್ತು ಮುಜರಾಯಿ ಮಾರ್ಕೆಟ್ ಸಚಿವರು ಈ ಸಭೆಯ ಮುಂದಿಟ್ಟಿರತಕ್ಕ ಅವರ ಇಲಾಖೆಯ ಬೇಡಿಕೆಗಳನ್ನು ಪುರಸ್ಕರಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಸಹಕಾರ ಸಚಿವರು ತಮ್ಮ ವರದಿಯಲ್ಲಿ ತಿಳಿಸಿರುವ ರೀತಿಯಲ್ಲಿ ಸುಮಾರು ೨೨ ಸಾವಿರ ಸಹಕಾರ

ಸಂಘಗಳ ವ್ಯಾಪ್ತಿಯಲ್ಲಿ ಸುಮಾರು ೩೨.೭೪ ಲಕ್ಷ ರೈತ ಕುಟುಂಬಗಳನ್ನು ಅದರ ವ್ಯಾಪ್ತಿಯಲ್ಲಿ ತಂದಿದ್ದೇವೆ ಎನ್ನತಕ್ಕದ್ದನ್ನು ತಿಳಿಸಿದ್ದಾರೆ. ಅದು ಶೇಕಡ ೭೫ರಷ್ಟು ಆಗುತ್ತದೆ. ಇದು ಬಹಳ ಸಂತೋಷದ ವಿಷಯ. ಆದರೆ ಇಷ್ಟು ಲಕ್ಷ ರೈತ ಕುಟುಂಬಗಳೇನು ನಿಮ್ಮ ಸಹಕಾರ ಸಂಘದ ಸದಸ್ಯರಾಗಿದ್ದರೆಂದು ಹೇಳಿದ್ದೀರಿ, ಅದಾದ ನಂತರ ಅವರಲ್ಲಿ ಎಷ್ಟು ಜನರಿಗೆ ಸಾಲವನ್ನು ಬಟವಾಡೆ ಮಾಡಿದ್ದೀರಿ, ಎಷ್ಟು ಜನ ಸುಸ್ತಿದಾರರಾಗಿದ್ದಾರೆ? ಎಷ್ಟು ಜನ ನಿಮ್ಮಿಂದ ಪಡೆದಿರತಕ್ಕ ಹಣವನ್ನು ಮರುಪಾವತಿ ಮಾಡಿಲ್ಲ ಎನ್ನುವ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಿದ್ದರೆ ನಿಮ್ಮ ವರದಿ ಚೆನ್ನಾಗಿರುತ್ತಿತ್ತು ಎಂದು ನನಗೆ ಅನ್ನಿಸುತ್ತದೆ. ಇನ್ನು ನೀವು ಅನೇಕ ಸಮಾರಂಭಗಳಲ್ಲಿ ಭಾಗವಹಿಸಿದಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದರಲ್ಲಿ ಅತಿಮುಖ್ಯವಾಗಿ ಒಂದೊಂದು ಪಂಚಾಯಿತಿಗೂ ಒ ದೊಂದು ಸಹಕಾರ ಸಂಘಗಳು ಇರಬೇಕು ಎನ್ನುವ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೀರಿ. ಆದರ ಈ ಮಾತನ್ನು ಬರೀ ಸಮಾರಂಭಗಳಲ್ಲಿ ಭಾಗವಹಿಸಿದಾಗ ಆಡಿದ್ದೀರೇ ವಿನಃ ಕಾರ್ಯಗತ ಮಾಡಿಲ್ಲ ಎನ್ನತಕ್ಕ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಆದುದರಿಂದ ತಾವು ದಯಮಾಡಿ ಯಾವ ಒಂದು ಹಿನ್ನೆಲೆಯಲ್ಲಿ ಪ್ರತಿಯೊಂದು ಪಂಚಾಯಿತಿಗೂ ಒಂದೊಂದು ಸಹಕಾರ ಸಂಘಗಳು ಇರಬೇಕು ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಎನ್ನುವುದನ್ನು ತಮ್ಮ ಉತ್ತರದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ೨-೩ ಪಂಚಾಯಿತಿಗಳಿಗೆ ಒಂದೊಂದು ಸಹಕಾರ ಸಂಘಗಳನ್ನು ಅಸ್ತಿತ್ವಕ್ಕೆ ತಂದಿದ್ದೀರಿ, ಇದರಿಂದ ರೈತಾಪಿ ಜನರಿಗೆ ಹೆಚ್ಚಿನ ಅನುಕೂಲವಾಗುತ್ತಿಲ್ಲ ಆದುದರಿಂದ ಇದನ್ನು ತೆಗೆದುಹಾಕಿ ಒಂದೊಂದು ಪಂಚಾಯಿತಿಗೆ ಒಂದೊಂದು ಸಹಕಾರ ಸಂಘಗಳನ್ನು ಮಾಡಿದರೆ ರೈತಾಪಿ ಜನರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಹಕಾರ ಸಂಘಗಳ ಮೂಲಕ ಅನೇಕ ಜೀವನಾವಶ್ಯಕ ವಸ್ತುಗಳನ್ನು ಕೊಡುತ್ತಿದ್ದೇವೆಂದು ತಾವು ಹೇಳಿದಿರಿ. ಆದರೆ ೩ ಪಂಚಾಯಿತಿಗಳಿಗೊಂದು ಸಹಕಾರ ಸಂಘಗಳು ಇರುವಾಗ ಆ ಸಹಕಾರ ಸಂಘದ ಕೊನೆಯ ಗ್ರಾಮದಲ್ಲಿರುವ ಹಳ್ಳಿಗಳಿಗೆ ಜೀವನಾವಶ್ಯಕ ವಸ್ತುಗಳನ್ನು ಹಂಚುವುದಕ್ಕೆ ಸಾಧ್ಯವಾಗುತ್ತದೆಯೇ? ಖಂಡಿತವಾಗಿಯೂ ಸಮರ್ಪಕವಾಗಿ ಹಂಚಿಕೆ ಮಾಡುವುದಕ್ಕಾಗುವುದಿಲ್ಲ. ದೂರದಲ್ಲಿರತಕ್ಕ ಗ್ರಾಮಕ್ಕೆ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ, ಆಗ ದುರ್ವ್ಯವಹಾರ ಪೋಲಾಗುವುದಕ್ಕೆ ಅವಕಾಶಗಳಿರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಾಲವನ್ನು ಬಟವಾಡೆ ಮಾಡುವಾಗ ಒಂದೇ ರೀತಿಯ ಉದ್ದೇಶದ ಸಾಲಕ್ಕೆ ವಿವಿಧ ರೀತಿಯ ಬಡ್ಡಿ ದರದಲ್ಲಿ ಸಾಲ ಕೊಡುತ್ತಿದ್ದೀರಿ. ಉದಾಹರಣೆಗೆ, ನಮ್ಮ ರಾಜ್ಯ ಸುಮಾರು ೨೭,೩೨ ಸಿಲ್ಕ್ ರೀಲರ್ಸ್ ಕೋ ಆಪರೇಟಿವ್ ಸೊಸೈಟಿಗಳು ಅಸ್ತಿತ್ವದಲ್ಲಿದೆ. ಅವಕ್ಕೆ ವಾಣಿಜ್ಯ ಬ್ಯಾಂಕ್‌ನವರು ಒಂದು ರೀತಿಯ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಪಂಜಾಬ್ ಬ್ಯಾಂಕ್‌ನವರು ಅವರು ಒಂದು ರೀತಿಯ ಬಡ್ಡಿದರದಲ್ಲಿ ಸಾಲ ಕೊಡುತ್ತಿದ್ದಾರ ಮತ್ತು ಸ್ಟೇಟ್ ಬ್ಯಾಂಕ್‌ನವರು ಒಂದು ರೀತಿಯಲ್ಲಿ ಹೀಗೆ ಒಂದೇ ಉದ್ದೇಶದ ಸಾಲವಾಗಿದ್ದರೂ ಕೂಡ ಒಬ್ಬೊಬ್ಬರೂ ಒಂದೊಂದು ರೀತಿಯ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಆದುದರಿಂದ ತಾವು ಈ ಎಲ್ಲಾ ವಾಣಿಜ್ಯ ಬ್ಯಾಂಕ್‌ಗಳವರನ್ನು ಕರೆಸಿ ಸಭೆ ಮಾಡಿ ಆ ಸಭೆಯಲ್ಲಿ ಒಂದೇ ರೀತಿಯ ಬಡ್ಡಿದರದಲ್ಲಿ ಸಾಲವನ್ನು ಕೊಡುವ ಹಾಗೆ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಸಹಕಾರ ಸಂಘಗಳನ್ನು ಒಬ್ಬ ಸಾಲವನ್ನು ತೆಗೆದುಕೊಂಡಂಥ ರೈತ ಅವನಿಗೆ ಬಹುಶಃ ೧೦೦೦೦ ರೂ. ಸಾಲವನ್ನು ತೆಗೆದುಕೊಂಡರೆ ಅದರಲ್ಲಿ ತನ್ನದೇ ಆಗಿರತಕ್ಕ ೧೦೦ ರೂಪಾಯಿಗಳ ಷೇರು ಇರುತ್ತದೆ, ಇನ್ನು ೯೦೦ ರೂ.ಗಳು ಅವನ ಕೈಗೆ ಸಿಗುತ್ತದೆ ಇದರ ಜೊತೆಗೆ ಅವನು ಸಣ್ಣ ರೈತನಾಗಿದ್ದ ಪಕ್ಷದಲ್ಲಿ ಅವನಿಗೆ ಸಬ್ಸಿಡಿ ಕೊಡುತ್ತೀರಿ. ಅದರೂ ಕೂಡ ಅವನು ತೆಗೆದುಕೊಳ್ಳತಕ್ಕ ೧,೦೦೦ ರೂ.ಗಳಿಗೆ ೧೦ ವರ್ಷಗಳಿಗೆ ನೀವು ಹಾಕತಕ್ಕ ಬಡ್ಡಿಯನ್ನು ಲೆಕ್ಕಾಚಾರ ಮಾಡುವುದಾದರೆ ಅವನ ಷೇರ್ ಕ್ಯಾಪಿಟಲ್ ಮತ್ತು ನೀವು ಅವನಿಗೆ ಕೊಡತಕ್ಕ ಸಬ್ಸಿಡಿ ಹಣಕ್ಕೂ ಕೂಡ ಅವನು ಬಡ್ಡಿ ಕಟ್ಟಬೇಕಾಗಿರುತ್ತದೆ. ಆದುದರಿಂದ ಇದನ್ನು ತಾವು ವಿಮರ್ಶೆ ಮಾಡಿ ನೋಡಬೇಕೆಂದು ಹೇಳುತ್ತೇನೆ.

ಇನ್ನು ತಮ್ಮ ವರದಿಯಲ್ಲಿ ಸಹಕಾರ ಸಂಘಗಳಲ್ಲಿ ದುರ್ವ್ಯವಹಾರವಾಗಿರತಕ್ಕ ಹಣ ೧.೩೮ ಲಕ್ಷ ರೂಪಾಯಿಗಳೆಂದು ತೋರಿಸಿದ್ದೀರಿ. ಇವತ್ತು ಸರ್ಕಾರದವರು ಸಹಕಾರ ಸಂಘಗಳ ಮೂಲಕ ಕೊಟ್ಟಿರತಕ್ಕ ಹಣದಲ್ಲಿ ಎಷ್ಟು ಹಣ ವಾಪಸ್ಸು ಬಂದಿದೆ, ಎಷ್ಟು ಸದುಪಯೋಗವಾಗಿದೆ ಎನ್ನುವ ಬಗ್ಗೆ ಸಮೀಕ್ಷೆ ಮಾಡಿ ನೋಡಿದಾಗ, ಈ ಸಹಕಾರ ಸಂಘಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಸಹಕಾರ ಸಂಘಗಳ ಮೂಲಕ ಎಷ್ಟೋ ಜನ ತೆಗೆದುಕೊಂಡಂಥ

ಸಾಲವನ್ನು ೫-೬ ವರ್ಷಗಳಾದರೂ ಬಡ್ಡಿ ಸಮೇತವಾಗಿ ವಾಪಸ್ಸು ಮಾಡಿಲ್ಲ ಇದರ ಬಗ್ಗೆ ಸಹ ಸರ್ಕಾರದವರು ಬೆಳಕನ್ನು ಚೆಲ್ಲಿದ್ದರೆ ಚೆನ್ನಾಗಿತ್ತು. ಮತ್ತೆ ಸರ್ಕಾರದವರು ೧೯೮೧-೮೨ರಲ್ಲಿ ೧೦೫ ಕೋಟಿ ರೂಪಾಯಿಗಳನ್ನು ಬಟವಾಡೆ ಮಾಡಬೇಕೆಂದಿದ್ದರೆ ಅದರಲ್ಲಿ ಕೇವಲ ೪೨ ಕೋಟಿ ರೂಪಾಯಿಗಳನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗಿದೆ, ಏತಕ್ಕೆ ಪೂರ್ತಿ ಹಣವನ್ನು ಸಹಕಾರ ಸಂಘಗಳಿಗೆ ಮಂಜೂರು ಮಾಡಲಿಲ್ಲ, ಅವು ಎಲ್ಲಾ ನಿಷ್ಕ್ರಿಯೆಯಾಗಿ ಉಳಿದಿವೆಯೋ?

೫-೦೦ ಪಿ. ಎಂ.

ಆದರೆ ಅದನ್ನು ಪುನಶ್ಚೇತನಗೊಳಿಸಿಕೊಳ್ಳುವ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಈ ರಾಜ್ಯದಲ್ಲಿ ಸಹಕಾರ ಆಂಧೋಳನ ಯಶಸ್ವಿಯಾಗಿ ನಡೆಯುವುದಿಲ್ಲವೆಂದು ಹೇಳುತ್ತೇನೆ. ನಾವು ಸಹಕಾರ ಸಂಘಗಳ ಕಾಯಿದೆಯನ್ನು ಮಾಡಿದ್ದೇವೆ. ಅವೆಲ್ಲಾ ಪುರಾತನವಾದವು. ಈ ಅಣ್ವಸ್ತ್ರ ಯುಗದಲ್ಲಿ ಭೀಮನ ಗದೆಯನ್ನು ತೆಗೆದುಕೊಂಡು ಯುದ್ಧ ಮಾಡುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಹಾಗೆ ಹಳೆಯ ಕಾಯಿದೆಗಳನ್ನು ಇಟ್ಟುಕೊಂಡು ಕೆಲಸ ಮಾಡಬೇಕೆಂದರೆ ಸಾಧ್ಯವಾಗುವುದಿಲ್ಲ. ಅವುಗಳಿಂದ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಆಗುವುದಿಲ್ಲ. ಆದುದರಿಂದ, ಕಾಯಿದೆಗಳನ್ನು ಬದಲಾವಣೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ, ಅನೇಕ ಜನ ರಾಜಕಾರಣಿಗಳು ಮತ್ತಿತರರು ಸಹಕಾರ ಸಂಘಗಳಿಂದ ಸಾಲ ಪಡೆದು ಅದನ್ನು ಮರುಪಾವತಿ ಮಾಡತಕ್ಕ ಸಂದರ್ಭದಲ್ಲಿ ತಮ್ಮ ಪ್ರಭಾವವನ್ನು ಬೀರುತ್ತಾರೆಂದು ಜನಜನಿತವಾಗಿದೆ. ಅದಕ್ಕೆ ನಾವು ಒಂದು ಕಾಯಿದೆ ಮಾಡಿ, ಯಾವ ಮನುಷ್ಯನೇ ಆಗಲಿ ವಿಧಾನಸಭೆಗೆ ಅಥವಾ ಯಾವುದೇ ಚುನಾವಣೆಗೆ ನಿಂತುಕೊಳ್ಳಬೇಕಾದರೆ ಆತ ಯಾವ ವಿಧದಲ್ಲೂ ಕೂಡ ಬಾಕಿಯನ್ನು ಇಟ್ಟುಕೊಂಡಿರಬಾರದೆಂದೂ ಹಾಗೂ ಸಹಕಾರ ಸಂಘಗಳಲ್ಲಿ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡದವರು ಚುನಾವಣೆಗೆ ನಿಂತುಕೊಳ್ಳಬಾರದೆಂದು ಕಾಯಿದೆ ತಂದರೆ ಖಂಡಿತ ಸಾಲ ವಸೂಲಾಗುತ್ತದೆ ಯಾವ ಸಂಘ ಸಂಸ್ಥೆಗಳಿಗೇ ಆಗಲಿ ಚುನಾವಣೆಗೆ ನಿಂತುಕೊಳ್ಳಬೇಕಾದರೆ ಯಾವ ಸಹಕಾರ ಸಂಘಗಳಲ್ಲೂ ಕೂಡ ಆತ ಸುಸ್ತಿದಾರನಾಗಿಬಾರದೆಂದು ತಿದ್ದುಪಡಿ ತಂದರೆ ವಸೂಲಾತಿ ಸ್ವಲ್ಪವಾದರೂ ಜಾಸ್ತಿಯಾಗಬಹುದೆಂದು ಅನ್ನಿಸುತ್ತದೆ. ಇವತ್ತಿನ ದಿವಸ, ಸಾಲವನ್ನು ಕೊಡತಕ್ಕ ಸಂದರ್ಭದಲ್ಲಿ ಆಸ್ತಿ ಆಧಾರದ ಮೇಲೆ ಹಣವನ್ನು ಮಂಜೂರ್ಮಾಡುತ್ತಾರೆ. ಅನೇಕರು ಯಾವ ಉದ್ದೇಶಕ್ಕಾಗಿ ಸಾಲ ತೆಗೆದುಕೊಳ್ಳುತ್ತಾರೋ ಅದಕ್ಕೆ ಖರ್ಚು ಮಾಡುವುದಿಲ್ಲ. ಹೀಗಾಗಿ ಅದನ್ನು ವಸೂಲ್ಮಾಡಬೇಕಾದರೂ ಕಷ್ಟವಾಗುತ್ತದೆ. ಆದ್ದರಿಂದ, ಸಾಲ ಪಡೆಯುವವರನ್ನೇ ೫-೫ ಜನದ ಗುಂಪುಗಳನ್ನಾಗಿ ವಿಂಗಡಿಸಿ ಅವರವರಲ್ಲೇ ಪರಸ್ಪರ ಜವಾಬ್ದಾರಿಯನ್ನು ಗೊತ್ತುಮಾಡಿದರೆ ಆಗ ಖಂಡಿತ ಸಾಲ ವಸೂಲ್ಮಾಡುವುದಕ್ಕೆ ಸಾಧ್ಯವಾಗುತ್ತದೆ.

(ಅಧ್ಯಕ್ಷರು ತಮ್ಮ ಪೀಠಕ್ಕೆ ಬಂದರು)

ಅವರವರಲ್ಲಿ, ನಾನು ಅವನಿಂದ ಸಾಲ ವಸೂಲ್ಮಾಡಬೇಕಾದರೆ ನಾನು ಮೊದಲು ಕೊಡಬೇಕೆಂಬ ಭಾವನೆ ಉಂಟಾಗಿ ಶೀಘ್ರವಾಗಿ ಪಾವತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅನೇಕ ರಾಷ್ಟ್ರೀಕೃತ ಬ್ಯಾಂಕುಗಳು ಈ ಒಂದು ಪದ್ಧತಿಯನ್ನು ಅಳವಡಿಸಿಕೊಂಡಿವೆ. ದಯಮಾಡಿ, ಸಹಕಾರ ಸಂಘಗಳಲ್ಲಿ ಕೂಡ ಸಾಲವನ್ನು ವಸೂಲ್ಮಾಡತಕ್ಕ ಕಾಲದಲ್ಲಿ ಈ ಒಂದು ಪದ್ಧತಿಯನ್ನು ಅಳವಡಿಸಿದರೆ ಸಾಲದ ವಸೂಲಾತಿ ಪ್ರಮಾಣ ಜಾಸ್ತಿಯಾಗಬಹುದೆಂಬ ನಂಬಿಕೆ ಇದೆ. ಆ ಒಂದು ಕೆಲಸವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ರೈತನಿಗೆ ಬೆಳೆ ಬೆಳೆಯುವುದಕ್ಕೆ ಸಾಲ ಕೊಡುತ್ತಾರೆ, ಕೊಟ್ಟಮೇಲೆ ಆತ ಬೆಳೆಯತಕ್ಕ ಬೆಳೆ, ಮತ್ತು ಅದರಿಂದ ಬರತಕ್ಕ ಉತ್ಪಾದನೆ ಎಲ್ಲವೂ ಸಹಕಾರ ಸಂಘಕ್ಕೆ ಅಡಮಾನವಾಗುತ್ತದೆ. ಅಂದಮೇಲೆ ಅದನ್ನು ಸಹಕಾರ ಸಂಘಕ್ಕೆ ಅರಿವು ಇಲ್ಲದ ರೀತಿಯಲ್ಲಿ ಮಾರಾಟ ಮಾಡಿಕೊಂಡರೆ ತಪ್ಪಾಗುತ್ತದೆ. ಯಾವುದೇ ಮನುಷ್ಯ ತಾನು ಬೆಳೆದಂಥ ಪದಾರ್ಥವನ್ನು ಮಾರುಕಟ್ಟೆಗೆ ಮಾರಾಟಕ್ಕಾಗಿ ತೆಗೆದುಕೊಂಡು ಹೋಗುತ್ತಾನೋ ಆ ಮಾರುಕಟ್ಟೆಗೆ ಸಹಕಾರ ಸಂಘದಿಂದ ಸಾಲದ ಬಾಕಿ ಪಟ್ಟಿಯನ್ನು ಕಳುಹಿಸಿಕೊಟ್ಟು ಮಾರಾಟಗಾರರಿಂದ ಬರಬೇಕಾದ ಬಾಕಿಯನ್ನು ಹಿಡಿದುಕೊಳ್ಳಬೇಕೆಂದು ಆದೇಶ ನಿ ಡಿದರೆ ಖಂಡಿತ ಸಾಲ ವಸೂಲಾಗುತ್ತದೆಂದು ಹೇಳುತ್ತೇನೆ. ನಮ್ಮ ಕಡೆ ರೇಷ್ಮೆ ಗೂಡಿನ ಮಾರುಕಟ್ಟೆ ಇದೆ. ರೇಷ್ಮೆ ವ್ಯವಸಾಯಗಾರರಿಗೆ ಸಾಲವನ್ನು ಕೊಟ್ಟು, ಒಂದೆರಡು ತಿಂಗಳೊಳಗೆ ಗೂಡನ್ನು ಮಾರುಕಟ್ಟೆಗೆ ತರುತ್ತಾರೆ. ಅವರು ಮಾಲನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದಾಗ ಬಾಕಿ ಪಟ್ಟಿಯನ್ನು ಕಳುಹಿಸಿದರೆ ಅಲ್ಲಿ ಅವರಿಂದ ಬರಬೇಕಾದ ಸಾಲವನ್ನು ವಸೂಲ್ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾವ ಯಾವ ಕ್ರಮದಲ್ಲಿ ಸಾಲ

ವಸೂಲ್ಮಾಡಬಹುದೆಂದು ತಿಳಿದುಕೊಂಡು ಮಾಡಿದರೆ ಇವತ್ತಿನ ದಿವಸ ಏನು ವಸೂಲ್ಮಾಡಿದ್ದಾರೆ ಅದನ್ನು ಇನ್ನೂ ಜಾಸ್ತಿ ಮಾಡಬಹುದೆಂದು ಅನ್ನಿಸುತ್ತದೆ. ಸಹಕಾರ ಸಂಘದಿಂದ ಸಾಲ ಪಡೆದ ರೈತನು ಸಹಕಾರ ಸಂಘಕ್ಕೆ ಮೋಸ ಮಾಡಬೇಕೆಂಬ ದುರುದ್ದೇಶದಿಂದ ಬೇರೆ ಕಡೆ ಮಾಲನ್ನು ಮಾರಾಟ ಮಾಡಿದರೆ ಅದು ಸಿಂಧುವಲ್ಲ ಎಂದು ಕಾನೂನು ಮಾಡಿದರೆ ಆಗ ತಾನು ಪಡೆದ ಸಾಲವನ್ನು ಮರುಪಾವತಿ ಮಾಡಬೇಕೆಂಬ ಭಯ, ಭಾವನೆ ಅವನಲ್ಲಿ ಉಂಟಾಗಬಹುದು. ಆ ರೀತಿ ಮಾಡಿದರೆ ಸಹಕಾರ ಸಂಘಗಳು ಯಶಸ್ವಿಯಾಗಿ ನಡೆಯುತ್ತವೆಂದು ಹೇಳುತ್ತೇನೆ. ಇವತ್ತಿನ ದಿವಸ, ಅನೇಕ ರೀತಿಯ ಸಹಕಾರ ಸಂಘಗಳಿರುವುದರಿಂದ ಅವುಗಳಲ್ಲೆಲ್ಲ ಸಾಲವನ್ನು ತೆಗೆದುಕೊಳ್ಳಬೇಕೆಂಬ ದುರುದ್ದೇಶ ಅನೇಕ ರೈತರಲ್ಲಿ ಮೂಡುತ್ತದೆ. ಹೀಗಾಗಿ ಅನೇಕರು ಅನೇಕ ಸಂಘ ಸಂಸ್ಥೆಗಳಲ್ಲಿ ಸಾಲ ಪಡೆದು ಯಾವ ಸಂಘದಲ್ಲೂ ಕೂಡ ಸಾಲವನ್ನು ತೀರಿಸದೆ ಆ ಸಂಘಗಳನ್ನೇ ದಿವಾಳಿ ಮಾಡತಕ್ಕವರು ಇದ್ದಾರೆ. ಅದನ್ನೆಲ್ಲಾ ತಪ್ಪಿಸುವುದಕ್ಕೆ ಸಹಕಾರ ಮತ್ತು ರೆವಿನ್ಯೂ ಇಲಾಖೆಯವರು ಜಂಟಿಯಾಗಿ ಕೆಲಸ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ರೈತನ ಪಟ್ಟೆಯ ಪುಸ್ತಕದಲ್ಲಿ ಅವನಲ್ಲಿರತಕ್ಕ ಭೂಮಿ, ಅವನು ಬೆಳೆಯತಕ್ಕ ಬೆಳೆ, ಮತ್ತು ಅವನು ಯಾವಯಾವ ಬ್ಯಾಂಕುಗಳಿಂದ ಮತ್ತು ಸಹಕಾರ ಸಂಘಗಳಿಂದ ಸಾಲ ತೆಗೆದುಕೊಂಡಿದ್ದಾನೆ ಎಂಬುದನ್ನು ನಮೂದಿಸಿದರೆ ಅದು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬರುತ್ತದೆ. ಆಗ ಅವನು ಹೆಚ್ಚಿನ ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಳ್ಳದಂತೆ ಮಾಡುವುದಕ್ಕಾಗುತ್ತದೆ. ಅನೇಕ ಸಹಕಾರ ಸಂಘಗಳಲ್ಲಿ ಫೀಲ್ಡ್ ಅಧಿಕಾರಿಗಳು ಸುಳ್ಳು ಮಾಹಿತಿ ಕೊಟ್ಟು ಸಾಲವನ್ನು ಪಡೆದಿರತಕ್ಕ ಸನ್ನಿವೇಶಗಳು ನಿಮಗೆಲ್ಲಾ ಗೊತ್ತಿದೆ. ಈ ರೀತಿಯಾಗಿ ಮಾಡತಕ್ಕ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ವಿಧಿಸದಿದ್ದರೆ ಖಂಡಿತ ಸಹಕಾರ ಸಂಘಗಳು ಉದ್ಧಾರವಾಗುವುದಿಲ್ಲವೆಂದು ಹೇಳುತ್ತೇನೆ. ಯಾವ ಉದ್ದೇಶಕ್ಕಾಗಿ ಸಾಲವನ್ನು ರೈತ ಪಡೆದಿರುತ್ತಾನೋ ಅದನ್ನು ಆ ಉದ್ದೇಶಕ್ಕಾಗಿ ಪೂರ್ಣವಾಗಿ ಉಪಯೋಗಿಸದೆ ಇದ್ದಾಗ ಸಾಲ ಕೊಟ್ಟ ೩-೪ ತಿಂಗಳೊಳಗೆ ಅದನ್ನು ವಸೂಲ್ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಆಗ ಜನರಿಗೆ ಭಯ ಬರುತ್ತದೆ. ಈ ರೀತಿ ಯಾವ ಉದ್ದೇಶಕ್ಕಾಗಿ ಸಾಲವನ್ನು ಕೊಡಲಾಗಿರುತ್ತದೋ ಅದನ್ನು ಆ ಉದ್ದೇಶಕ್ಕಾಗಿ ಉಪಯೋಗಿಸದೆ ಇರತಕ್ಕದ್ದನ್ನು ಗಮನಿಸಿದರೆ ಸಾಕಷ್ಟು ವಸೂಲಾತಿಯ ಪ್ರಗತಿಯನ್ನು ಸಾಧಿಸಬಹುದು. ಇನ್ನು ಬೆಳೆ ವಿಮೆ ಯೋಜನೆ ಬಗ್ಗೆ ಹೇಳುವುದಾದರೆ, ಆ ಯೋಜನೆಯನ್ನು ಎಲ್ಲಿಯವರೆಗೆ ಜಾರಿಗೆ ತರುವುದಿಲ್ಲವೋ ಅಲ್ಲಿಯವರೆಗೆ ಸಹಕಾರ ಸಂಘಗಳು ಸರಿಯಾಗಿ ನಡೆಯುವುದಿಲ್ಲ ನಮ್ಮ ದೇಶದಲ್ಲಿ ಶೇಕಡ ೮೦ರಷ್ಟು ಮಂದಿ ಬೇಸಾಯವನ್ನೇ ಅವಲಂಬಿಸಿದ್ದಾರೆ. ಕೆಲವೊಂದು ಸಂದರ್ಭಗಳಲ್ಲಿ ಅವರು ಅತಿವೃಷ್ಟಿಯಿಂದಲೋ ಅಥವಾ ಅನಾವೃಷ್ಟಿಯಿಂದಲೋ ತೊಂದರೆಗೀಡಾಗುತ್ತಾರೆ. ಅವರಿಗೆ ತಾವು ಪಡೆದ ಸಾಲವನ್ನು ಮರು ಪಾವತಿ ಮಾಡಲು ನಿಜವಾಗಿಯೂ ಸಾಧ್ಯವಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಈ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತಂದರೆ ಸಹಕಾರ ಸಂಘಗಳಿಗೂ ಅನುಕೂಲವಾಗುತ್ತದೆ ಮತ್ತು ರೈತರಿಗೂ ಚೇತರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇಂಥ ಒಂದು ಅವಕಾಶವನ್ನು ನಿರ್ಮಾಣ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಯಾವ ರೀತಿ ಕಾರ್ಯ ನಡೆಯುತ್ತಿದೆ ಎಂಬುದಕ್ಕೆ ಹೇಳುವುದಾದರೆ, ತಮಗೆಲ್ಲಾ ತಿಳಿದಿರುವ ಹಾಗೆ ರೇಷ್ಮೆ ಗೂಡುಗಳಿಗೆ ಹಿಂದೆ ಒಂದು ರೀತಿಯ ಊಜಿ ನೊಣದ ಹಾವಳಿ ಬಂತು ಆಗ ಸಹಕಾರ ಸಂಘಗಳಿಗೆ ೪೫ ಲಕ್ಷ ರೂಪಾಯಿ ಸಾಲವನ್ನು ಬಿಡುಗಡೆ ಮಾಡಿ ಆ ಹಣವನ್ನು ನೈಲಾನ್ ಪರದೆಗಳನ್ನು ಕೊಳ್ಳಲು ಉಪಯೋಗಿಸಿ ಎಂದು ಸಹಕಾರ ಸಂಘಗಳಿಗೆ ಸರ್ಕಾರ ಕೊಟ್ಟಿತು. ಆದರೆ ರೇಷ್ಮೆ ವ್ಯವಸಾಯಗಾರರಿಗೆ ಅದರ ಪ್ರಯೋಜನ ದೊರೆಯಲಿಲ್ಲ. ಅವರು ಹೊರಗಡೆ ಹೆಚ್ಚಿನ ಬೆಲೆಯನ್ನು ಕೊಟ್ಟು ಕೊಳ್ಳಬೇಕಾಯಿತು. ಹೀಗೆ ಸಹಕಾರ ಸಂಘಗಳು ಒಂದಲ್ಲ ಒಂದು ರೀತಿಯಿಂದ ರೈತರನ್ನು ಶೋಷಣೆ ಮಾಡುತ್ತವೆ. ಇದನ್ನೆಲ್ಲ ತಾವು ಗಮನಿಸಬೇಕು.

ಕೊನೆಯದಾಗಿ ನಾನು ಬೆಂಗಳೂರಿನಲ್ಲಿ ಇರುವ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಈ ಒಂದು ಸಹಕಾರಿ ಸಂಸ್ಥೆಯಲ್ಲಿ ತಮ್ಮ ಕಾಯಿದೆಗೆ ವಿರುದ್ಧವಾಗಿಯೇ ಕೆಲಸ ನಡೆಯುತ್ತಿವೆ. ಇಂಥ ಒಂದು ಪ್ರಕರಣದ ಬಗ್ಗೆ ಸೆಕ್ಷನ್ ೬೪ರ ಕೆಳಗೆ ಎನ್‌ಕ್ವೈರಿ ಪ್ರಾರಂಭವಾಗಿ ೫ ವರ್ಷಗಳಾದವು. ಅದು ಇನ್ನೂ ಫೈನಲ್ ಆಗಿಲ್ಲ. ಯಾವ ಉದ್ದೇಶಕ್ಕಾಗಿ ಇದನ್ನು ಅಧಿಕಾರಿಗಳು ಫೈನಲ್ ಮಾಡಿಲ್ಲವೋ ಅಥವಾ ಸರ್ಕಾರವೇ ಮಾಡಿಲ್ಲವೋ ಗೊತ್ತಿಲ್ಲ. ಇಲ್ಲಿ ತಮಗೆ ಬೇಕಾಗಿರುವವರಿಗೆ ೫೦ ಲಕ್ಷ ರೂಪಾಯಿಯನ್ನು ಸಾಲವಾಗಿ ಕೊಟ್ಟಿದ್ದು ಅದು ಹಿಂದಕ್ಕೆ ಬರುವಂತೆ ಇಲ್ಲ. ಈ ಸಹಕಾರ ಸಂಘಗಳಿಗೆ ಯಾವ ರೀತಿ ಉತ್ತೇಜನವನ್ನು ಕೊಡಬೇಕೋ ಅದನ್ನು ಬಿಟ್ಟು ಸುಮ್ಮನೆ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು ಇದ್ದರೆ ಏನು ಪ್ರಯೋಜನ? ಕಾನೂನು ಪ್ರಕಾರ ಯಾರು ಡೈರೆಕ್ಟರ್ಸ್ ಡಿಫಾಲ್ಟರ್ಸ್

ಇರುತ್ತಾರೋ ಅವರನ್ನು ಮುಂದುವರಿಸಬಾರದು ಎಂದು ಇದ್ದರೆ, ೪ ಲಕ್ಷ, ೫ ಲಕ್ಷ ರೂಪಾಯಿ ಹೊಡೆದಿರುವವರೇ ಇನ್ನೂ ಡೈರೆಕ್ಟರುಗಳಾಗಿ ಮುಂದುವರಿಯುತ್ತಿದ್ದಾರೆ. ಸಾಕಷ್ಟು ಸಾರಿ ಈ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿ, ಬೆಳಕು ಚೆಲ್ಲಿದ್ದೇನೆ. ಈ ಸರ್ಕಾರಕ್ಕೆ ಕಿವಿ ಇದೆಯೋ ಇಲ್ಲವೋ ಗೊತ್ತಾಗುತ್ತಾ ಇಲ್ಲವೆಂದು ನಾನು ನೊಂದು ಹೇಳಬೇಕಾಗಿದೆ. ಅನೇಕ ಜನರು ಈ ಸಂಘಗಳನ್ನು ತಮ್ಮ ಸ್ವತ್ತನ್ನಾಗಿ ಮಾಡಿಕೊಂಡಿದ್ದಾರೆ. ಇವುಗಳಲ್ಲಿ ಸಾರ್ವಜನಿಕರಿಗೆ ಯಾವ ಪ್ರಯೋಜನ ಸಿಗಬೇಕೋ ಅದು ಸಿಕ್ಕಿಲ್ಲವೆಂದು ನಾನು ಹೇಳಿ, ಮಾನ್ಯ ಮಂತ್ರಿಗಳು ಇನ್ನೂ ಹೆಚ್ಚಿನ ಆಸಕ್ತಿ ವಹಿಸಿ ಈ ಇಲಾಖೆಯನ್ನು ಸರಿಯಾದ ವ್ಯವಸ್ಥೆಗೆ ತರಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀಕಂಠಯ್ಯನವರು ಸಹಕಾರಿ ಸಚಿವರಾಗುವುದಕ್ಕಿಂತ ಮುಂಚೆ ನಗರಾಭಿವೃದ್ಧಿ ಸಚಿವರೂ ಸಹ ಆಗಿದ್ದರು. ಅವರು ಮಾಡಿರತಕ್ಕ ಮಹತ್‌ಸಾಧನೆಗಳು ಏನೆಂದರೆ, ಇವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಮುನಿಸಿಪಾಲಿಟಿ ಎಲೆಕ್ಷನ್ಸ್ ರದ್ದು ಮಾಡಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದರು. ಇದು ಅವರು ಮಾಡಿದ ಒಂದು ದೊಡ್ಡ ಸಾಧನೆ. ಅಲ್ಲಿಂದ ಇಲ್ಲಿಗೆ ಬಂದು ಆ ಒಂದು ಅನುಭವದ ಹಿನ್ನೆಲೆಯಲ್ಲಿ ಸಹಕಾರಿ ಸಚಿವರಾದರು. ಸಹಕಾರಿ ಸಚಿವರಾದ ಮೇಲೆ ಬಂದು ಮಾಡಿರತಕ್ಕ ಒಂದೇ ಒಂದು ದೊಡ್ಡ ಮಹತ್‌ಸಾಧನೆ ಎಂದರೆ, ಸಹಕಾರಿ ಕ್ಷೇತ್ರದಲ್ಲಿ ಈ ಚುನಾವಣೆಯನ್ನು ಮುಂದಕ್ಕೆ ಹಾಕತಕ್ಕಂತಹ ಬಹಳ ದೊಡ್ಡ ಸಾಧನೆ. ಆ ಅನುಭವವನ್ನು ಇಲ್ಲಿಯೂ ಹಾಕಿದರು. ಯಾವುದನ್ನು ನಮ್ಮ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ, ಕಾರ್ಪೊರೇಷನ್ ಹೀಗೆ ಈ ಕೋ-ಆಪರೇಟೀವ್ಸನ್ನು ದೇಶದ ಪ್ರಜಾಪ್ರಭುತ್ವದ ಪಿಲ್ಲರ್ ಎಂದು ಹೇಳುತ್ತೇವೆಯೋ ಇವುಗಳನ್ನು ಡಿಮಾಲಿಶ್ ಮಾಡುವ ಕೆಲಸದಲ್ಲಿ ಶ್ರೀಕಂಠಯ್ಯನವರು ಸಂಪೂರ್ಣ ಜಯಗಳಿಸಿದ್ದಾರೆಂದರೆ ಅದರಲ್ಲಿ ಏನೂ ತೊಂದರೆ ಇಲ್ಲ. ಮಾನ್ಯ ಶ್ರೀಕಂಠಯ್ಯನವರ ಬಗ್ಗೆ ನನಗೆ ವೈಯಕ್ತಿಕವಾಗಿ ಗೌರವವಿದೆ. ಇವರನ್ನು ನೋಡಲು ಬರುವವರಿಗೆ ಯಾವ ರೀತಿ ಗೌರವ ಕೊಟ್ಟು ಯಾವ ರೀತಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುತ್ತಾರೆ ಎನ್ನುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಇಂತಹ ಒಬ್ಬ ವ್ಯಕ್ತಿ ಅಧಿಕಾರ ಸ್ಥಾನದಲ್ಲಿ ಇರುವಾಗ ಯಾವುದನ್ನು ನಾವು ಪ್ರಜಾಪ್ರಭುತ್ವದ ಅಡಿಗಲ್ಲು ಎಂದು ಹೇಳುತ್ತೇವೆ ಅದನ್ನು ಇವರು ನಾಶ ಮಾಡುತ್ತಾರೆನ್ನುವುದನ್ನು ನಂಬುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ಮಾಡಿದ್ದಾರೆ ಅದನ್ನು ನಾನು ವಿಧಿಯಿಲ್ಲದೇ ಇಲ್ಲಿ ಹೇಳಬೇಕಾಗಿದೆ. ಸಹಕಾರಿ ಕ್ಷೇತ್ರದಲ್ಲಿ, ಬಹುಶಃ ಸಹಕಾರ ರಂಗದಲ್ಲಿ ಮೊದಲನೇ ಶತ್ರು ಎಂದರೆ ಅದು ಸರ್ಕಾರ. ಸರ್ಕಾರ ಚುನಾವಣೆಯನ್ನು ರದ್ದುಪಡಿಸಿರುವುದರಿಂದ ಶತ್ರು ಅಲ್ಲದೇ ಇನ್ನೇನಾಗುತ್ತದೆ? ಅನೇಕಸಹಕಾರ ಸಂಘಗಳು ಇವತ್ತಿನ ದಿವಸ ಬೋರ್ಡ್‌ಗಳನ್ನು ಕಿತ್ತುಕೊಂಡು ಹೋಗುವ ಪರಿಸ್ಥಿತಿಗೆ ಬಂದಿದೆ. ಕಾರಣ, ಇವುಗಳಿಗೆ ಚುನಾವಣೆಗಳು ಇಲ್ಲದಿರುವುದು. ಈ ಒಂದು ಸಹಕಾರಿ ಆಂಧೋಳನವನ್ನು ಬೆಳೆಸಬೇಕೆನ್ನುವ ಸಮಯದಲ್ಲಿ, ಜನ ಈ ಆಂಧೋಳನವನ್ನು ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕೆನ್ನುವ ಉತ್ಕಟ ಗುರಿಯಿಂದ ಹೋಗುತ್ತಿರುವಾಗ ಏಕಾಏಕಿ ಸರ್ಕಾರ ಈ ರೀತಿ ಮಾಡಿದರೆ, ಈ ಬಗ್ಗೆ ಅಸಹಕಾರದಿಂದ ಸರ್ಕಾರ ನಡೆಯುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಕಡೆ ಚುನಾವಣೆಗಳನ್ನು ರದ್ದು ಮಾಡಿದ್ದರಿಂದ ಏನಾಗಿದೆ? ಸಹಕಾರಿ ಗುತ್ತೇದಾರಿಗಳು ಶಾಶ್ವತವಾಗಿ ಅಪೆಕ್ಸ್ ಸೊಸೈಟಿಯಲ್ಲಿ ೨೦, ೩೦ ವರ್ಷಗಳಿಂದ ಆಫೀಸ್ ಬೇರರ್ಸ್ ಆಗಿ ಕುಳಿತಿದ್ದಾರೆ. ಪ್ರೈಮರಿ ಲೆವೆಲ್‌ನಲ್ಲೂ ಇವರು ಇದ್ದಾರೆ, ಇನ್ನು ಮಿಡಲ್ ಲೆವೆಲ್‌ನಲ್ಲಂತೂ ಬಿಡಿ, ಕೆಲವು ಗುತ್ತೇದಾರಿಗಳು, ವೆಸ್ಟೆಡ್ ಇಂಟರೆಸ್ಟ್ಸ್ ಅಲ್ಲಿ ಶಾಶ್ವತವಾಗಿ ಇರುವುದಕ್ಕೆ ತಾವು ಸಹಕಾರವನ್ನು ಕೊಟ್ಟಿರಿ, ಅಪೆಕ್ಸ್ ಬ್ಯಾಂಕ್ ಛೇರ್ಮನ್‌ರಿಗೆ ೬ ವರ್ಷ ಆಗಿಲ್ಲವೇ ಸ್ವಾಮಿ? ಅವರು ಅಧಿಕಾರವನ್ನು ಬಿಡಬೇಕಾಗಿತ್ತಲ್ಲಾ? ಅವರೆಲ್ಲಿಬಿಟ್ಟರು? ನಿಮಗೆ ಎಲ್ಲಿ ತೊಂದರೆಯಾಗುತ್ತದೆಂದು ಅವರನ್ನು ಮುಂದುವರಿಸೋದಕ್ಕೋಸ್ಕರ ಶ್ರೀ ಕೆ.ಹೆಚ್. ಪಾಟೀಲರ ಕಮಿಟಿ ನೆಪವನ್ನು ಇಟ್ಟುಕೊಂಡು ಅವರನ್ನು ಕಂಟಿನ್ಯೂ ಮಾಡುವುದಕ್ಕೆ ಮಾಡಿದಿರಿ. ಇಂತಹದ್ದು ಆಡಳಿತದಲ್ಲಿ ಬೇಕಾದಷ್ಟು ಇದೆ. ತಮ್ಮ ಸ್ನೇಹಿತರಾದ ಮಾಜಿ ವಿಧಾನಸಭಾ ಸದಸ್ಯ ಭೈರಪ್ಪಾಜಿಯವರ ಸೊಸೈಟಿಯಲ್ಲಿ ಏನಾಗಿದ್ದರು? ಡಿಫಾಲ್ಟರ್ ಆಗಿದ್ದರು. ಆದರೆ ಅವರನ್ನು ತುಮಕೂರು ಜಿಲ್ಲಾ ಕೋ-ಆಪರೇಟಿವ್ ಬ್ಯಾಂಕ್‌ನ ಪ್ರೆಸಿಡೆಂಟ್ ಮಾಡಿದಿರಿ. ತಾವು ಚುನಾವಣೆ ರದ್ದು ಮಾಡಿರುವುದರಿಂದ ತಾನೇ ಅವರನ್ನು ಇಲ್ಲಿಗೆ ತರಲು ಸಾಧ್ಯವಾಯಿತು ಜಿಲ್ಲಾ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ, ಅಗ್ರಿಕಲ್ಚರಲ್ ಸೊಸೈಟಿಗಳಲ್ಲಿ ಮತ್ತು ಅನೇಕ ಕಡೆ ಈ ರೀತಿ ಡಿಫಾಲ್ಟಿಂಗ್ ಮೆಂಬರ್ಸ್ ಇರುವವರೆಲ್ಲರೂ ಸಾಮಾನ್ಯವಾಗಿ ರಾಜಕಾರಣಿಗಳು. ಅವರನ್ನೆಲ್ಲಾ ಮುಂದುವರಿಸಬೇಕೆನ್ನುವ ಮತ್ತು ಅವರು ಅಲ್ಲೇ ಇರಬೇಕು ಎನ್ನುವ ದೃಷ್ಟಿಯಿಂದ ತಾವು

ಸೆಕ್ಷನ್ ೨೭ನ್ನು ಉಪಯೋಗಿಸಿ ಈ ಚುನಾವಣೆ ಮುಂದಕ್ಕೆ ಹಾಕಿಕೊಂಡಿರಿ, ಮೊದಲು ತಾವು ಹೇಳಿದ್ದು ೩ ತಿಂಗಳು ಮಾತ್ರ, ಇದರ ಬಗ್ಗೆ ಕೆ.ಹೆಚ್. ಪಾಟೀಲರ ವರದಿ ಬಂದಿದೆ, ಇದರ ಬಗ್ಗೆ ಮೈಸೂರು ಕ್ಯಾಬಿನೆಟ್‌ನಲ್ಲಿ ಸುಗ್ರೀವಾಜ್ಞೆ ಹೊರಡಿಸುತ್ತೇವೆಂದು ೩ ತಿಂಗಳು ಮುಂದಕ್ಕೆ ಇವುಗಳ ಚುನಾವಣೆಯನ್ನು ಹಾಕಿದಿರಿ. ತಾವು ಸೆಕ್ಷನ್ ೨೭ನ್ನು ಓದಿ ಸ್ವಾಮಿ. ಅದರಲ್ಲಿ ನಿಮಗೇನಾದರೂ ಅಧಿಕಾರ ಇದೆಯೋ ಎಂಬುದನ್ನು ನೋಡಿ.

> "Section 27–General Body Meeting. General Body of a co-operative institution shall be held once in a year within a period of three months after the date fixed for making.."

ಎಂದು ಹಾಕಿಬಿಟ್ಟು ಕೊನೆಯಲ್ಲಿ ಹೇಳುತ್ತಾರೆ;

> "provided that the Registrar may by a general or a special order extend the period for holding such meeting by a period not exceeding six months."

ಏನು ಸ್ವಾಮಿ ಇದು? ಇದರಲ್ಲಿ "ಅಟ್ ಎ ಟೈಮ್" ಎಂದು ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಇದರಲ್ಲಿ ತೋರಿಸಿ. ನಾನು ಒಪ್ಪಿಕೊಳ್ಳುತ್ತೇನೆ, "ಅಟ್ ಎ ಟೈಮ್" ಎಂದರೆ ರಿಜಿಸ್ಟ್ರಾರ್‌ರವರಿಗೆ ಅಧಿಕಾರ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ಅದರ ಮೇಲೆ. ಅವರ ವಿಶ್ಲೇಷಣೆ ಅದನ್ನು ಉಪಯೋಗಿಸಿರತಕ್ಕ ಭಾಷೆಗೆ ಆ ರೀತಿ ಅರ್ಥಬರುತ್ತದೆ, ಆ ವಿವರಣೆ ಮೂಲಕ ಅದನ್ನು ನಾವು ಚಲಾಯಿಸಿದ್ದೇವೆಂದು ಮಾನ್ಯ ಶ್ರೀಕಂಠಯ್ಯನವರ ವಿಶ್ಲೇಷಣೆ.

ಶ್ರೀ ಪಿ. ರಾಮದೇವ್.— ತಮಗೆ ಇಲ್ಲದಿರತಕ್ಕ ಅಧಿಕಾರವನ್ನು ಅಶ್ಯೂಮ್ ಮಾಡಿಕೊಂಡು ಈ ರೀತಿ ಮಾಡಿದ್ದಾರೆ. ಹೋಗಲಿ, ರಿಜಿಸ್ಟ್ರಾರ್‌ರವರು ಐ.ಎ.ಎಸ್. ಅಧಿಕಾರಿ ಇರುತ್ತಾರೆ. ಅವರಾದರೂ ತಮಗೆ ಈ ಬಗ್ಗೆ ಪವರ್ಸ್ ಇಲ್ಲವೆಂದು ಇವರ ಗಮನಕ್ಕೆ ಈ ವಿಷಯವನ್ನು ತರಬೇಕಾಗಿತ್ತು. ಆರ್ಡರ್ಸ್‌ನ್ನು ಮಾನ್ಯ ಮಂತ್ರಿಗಳು ಇಷ್ಯೂ ಮಾಡಿಲ್ಲ. ರಿಜಿಸ್ಟ್ರಾರ್‌ರವರು ಇಷ್ಯೂ ಮಾಡಿದ್ದಾರೆ. How can he act beyond the powers vested in the Act?

ಹೇಗೆ ಸ್ವಾಮಿ ಮಾಡುತ್ತಾರೆ. Should he not be hauled up in the court of law? ಇದು ಮಾಡಿರತಕ್ಕದ್ದು. ರಿಜಿಸ್ಟ್ರಾರ್‌ರವರಿಗೆ ೬ ತಿಂಗಳ ಒಳಗೆ ಜನರಲ್ ಬಾಡಿ ಮಾಡಬೇಕೆಂದು ಇದೆ.

> "If defaulting is made in calling a General Body in accordance with the provisions of Sub Section one, the Registrar may order declare any Officer or Member of the Committee whose duty it was to call such a Meeting and who without reasonable excuse failed to call such meeting may disqualify him for a period not exceeding three years."

ಕೋ–ಆಪರೇಟೀವ್ ಸೊಸೈಟಿಗಳು ಏನಾದರೂ ಸರ್ವಸದಸ್ಯರ ಸಭೆ ಮಾಡಲಿಲ್ಲವೆಂದರೆ ಅಲ್ಲಿನ ಕಾರ್ಯದರ್ಶಿಯವರನ್ನು ಡಿಸ್‌ಕ್ವಾಲಿಫೈ ಮಾಡಿ ಎಂದು ಹೇಳುತ್ತೀರಿ. ಸರ್ಕಾರದವರು ಕಾನೂನು ವ್ಯಾಪ್ತಿ ಮೀರಿ ಹೋದಾಗ ಅವರನ್ನು ಎಷ್ಟು ವರ್ಷ ಡಿಬಾರ್ ಮಾಡಬೇಕು? ಈ ದೃಷ್ಟಿಯಿಂದ ಸಹಕಾರಿ ಆಂಧೋಳನಕ್ಕೆ ಸರ್ಕಾರವೇ ಮೊದಲನೆಯ ಶತ್ರು. ತಾವು ಈ ರೀತಿ ಇಂಟರ್‌ಪ್ರಿಟ್ ಮಾಡಿರುವುದು ಸರಿಯೋ ಎಂಬುದರ ಬಗ್ಗೆ ಅಡ್ವೋಕೇಟ್ ಜನರಲ್‌ರವರನ್ನು ಕನ್‌ಸಲ್ಟ್ ಮಾಡಬೇಕು. ಈ ಸಹಕಾರಿ ಕ್ಷೇತ್ರದಲ್ಲಿ ಪರ್ಮನೆಂಟಾಗಿ ೬ ವರ್ಷದ ಮೇಲೆ ಇರಬಾರದೆಂದು ಕಾನೂನು ಮಾಡಿರುವುದು ಸರಿ. ಆದರೆ ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಅನೇಕ ನಿಮ್ಮ ಸ್ನೇಹಿತರು ೬ ವರ್ಷ, ೭ ವರ್ಷ, ೮ ವರ್ಷದಿಂದ

ನಡೆದುಕೊಂಡು ಬಂದಿದ್ದಾರೆ. ನಮ್ಮ ನಲ್ಲ ಇರೇಗೌಡರು ಅವರು ಬಹಳ ಒಳ್ಳೆಯವರು. ತಮಗೆ ಅವರ ಮೇಲೆ ಗೌರವ ಇದೆ. ಎಷ್ಟು ವರ್ಷದಿಂದ ಅವರು ಅಪೆಕ್ಸ್ ಬ್ಯಾಂಕಿನಲ್ಲಿ ಪ್ರೆಸಿಡೆಂಟರಾಗಿದ್ದಾರೆ? ನಿಮಗೆ ಬೇಕಾಗಿರತಕ್ಕವರು. ಆಯಾ ಕ್ಷೇತ್ರದಲ್ಲೇ ಇರಬೇಕೆ? ಚುನಾವಣೆ ಬರುತ್ತಿದೆ ಚುನಾವಣೆಗೆ ನಿಮ್ಮಲ್ಲೇನಾದರೂ ಅವರು ಪ್ರತಿಸ್ಪರ್ಧಿಗಳಾಗಬಹುದು ಎನ್ನುವ ದೃಷ್ಟಿಯಿಂದ ಅವರನ್ನೆಲ್ಲಾ ಈ ಅಪೆಕ್ಸ್ ಸೊಸೈಟಿಯಲ್ಲಿ ಮುಂದುವರಿಸಿದ್ದೀರಿ. ಈ ಸೊಸೈಟಿಯ ಪ್ರೆಸಿಡೆಂಟ್‌ಷಿಪ್, ನಿಮ್ಮ ಮಿನಿಸ್ಟರ್ಸ್‌ಗಿಂತಾ ಜಾಸ್ತಿ ಎನ್ನುವ ವಿಚಾರ ಎಲ್ಲರಿಗೂ ಗೊತ್ತಿರುವುದೇ ಆಗಿದೆ.

ತಮ್ಮ ದೃಷ್ಟಿ ಹಾಗೆ ಇವೆ? ತಾವು ಈ ರೀತಿ ಜನರಲ್ ಆಗಿ ಮಾಡುವುದಾದರೆ, ಮಾನ ದೇವೇಗೌಡರು ಹೇಳಿದ ಹಾಗೆ ಸಹಕಾರ ತತ್ವವನ್ನು ಸಮಾಧಿ ಮಾಡುವುದಕ್ಕೆ ತಾವು ಅಡಿಗಲ್ಲು ಹಾಕಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ತಾವು ಕೆ. ಹೆಚ್. ಪಾಟೀಲ್ ವರದಿ ಬಗ್ಗೆ ಹೇಳಿದ್ದೀರಿ. ಸರ್ಕಾರದವರು ಸಾಕಷ್ಟು ಕಮಿಟಿಗಳನ್ನು ಮಾಡುತ್ತಾರೆ ವರದಿಗಳನ್ನು ಕೂಡ ಕೊಟ್ಟಿದ್ದಾರೆ. ಇಂಪ್ಲಿಮೆಂಟೇಷನ್ ಮಾಡುವವರೆಗೆ ಕೆಲಸವಾಗುವವರೆಗೆ ರೆಕಮೆಂಡೇಷನ್ನುಗಳನ್ನು ಅಳವಡಿಸಿಕೊಳ್ಳುವವರೆಗೆ ಯಾರು ಇಂಥ ಕೆಲಸವನ್ನು ಮಾಡಿಲ್ಲ ಚುನಾವಣೆಗಳನ್ನು ಮುಂದಕ್ಕೆ ಹಾಕಿ ಸರ್ವಸದಸ್ಯರ ಸಭೆಗಳನ್ನು ಮುಂದಕ್ಕೆ ಹಾಕಿ ಎಂದು ಯಾರೂ ರೆಕಮೆಂಡೇಷನ್ ಮಾಡಿಲ್ಲ. ಕೆ ಹೆಚ್. ಪಾಟೀಲ್ ವರದಿ ನಿಮಗೊಂದು ಕುಂಟು ನೆಪ, ಅವರ ತಲೆಗೆ ಈ ವಿಷಯವನ್ನು ತಾವು ಕಟ್ಟಿದ್ದೀರಿ. ಇದರಲ್ಲಿರತಕ್ಕಂಥ ಮೂಲಭೂತ ಬದಲಾವಣೆ ಏನು ಎನ್ನುವುದು ತಮಗೆ ಗೊತ್ತಿದೆ. ಇದನ್ನು ನೌಕರ ವರ್ಗದವರು ವಿರೋದ ಮಾಡಿದ್ದಾರೆ ಅಪೆಕ್ಸ್ ಸೊಸೈಟಿಯವರು ಸಹ ವಿರೋಧ ಮಾಡಿದ್ದಾರೆ. ವರದಿಯ ಬಗ್ಗೆ ಏನೊಂದು ಭರವಸೆ ಕೊಟ್ಟಿರಿ ಅದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆಯೆ? ಜನವರಿ ಸಭೆಯಲ್ಲಿ ತಿರ್ಮಾನ ಆಗಿತ್ತು, ಮಾರ್ಚಿ ಸಭೆಯಲ್ಲಿ ಆಗಿತ್ತು ಈಗ ಮೇ ಸಭೆಯಲ್ಲಿ ಆಗಿತ್ತು ಎಂದು ತಾವು ಹೇಳುತ್ತಲೇ ಬಂದಿದ್ದೀರಿ, ಇನ್ನೂ ಯಾವಾಗ ತೀರ್ಮಾನ ಆಗುತ್ತೆ? ವರದಿಯನ್ನು ಜಾರಿಗೆ ತರುತ್ತೇವೆಂದು ನೆಪ ಹೇಳಿಕೊಂಡು ಚುನಾವಣೆಗಳನ್ನು ಮುಂದಕ್ಕೆ ಹಾಕಿರುವುದು ಸರಿಯಲ್ಲ. ತಾವು ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕು. ಡಿಫಾಲ್ಟರ್ ಆಗಿರತಕ್ಕ ಸೊಸೈಟಿಗಳ ಚುನಾವಣೆಗಳನ್ನು ಮಾಡದೆ ಮುಂದುವರಿಯುವುದಕ್ಕೆ ಹೇಗೆ ಅವಕಾಶ ಕೊಟ್ಟಿದ್ದೀರಿ. ಇಂಥಾ ಒಂದು ಆಪಾದನೆ ತಮ್ಮ ಮೇಲೆ ಬಂದಿದೆ; ಇದನ್ನು ಹೋಗಲಾಡಿಸುವುದಕ್ಕೆ ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಇವತ್ತು ಚುನಾವಣೆ ಮುಂದಕ್ಕೆ ಹಾಕಿರುವುದರಿಂದ ಡಿಪಾಸಿಟ್‌ನಲ್ಲಿ ಮಾರ್ಚಿ ೮೧ ರಿಂದ ಮಾರ್ಚಿ ೮೨ಕ್ಕೆ ೭೪೭ ಕೋಟಿ ಇದ್ದದ್ದು, ೮೧-೮೨ಕ್ಕೆ ಏಕ್‌ದಂ ೬೮೮ ಕೋಟಿಗೆ ಇಳಿದಿದೆ; ಡಿಪಾಸಿಟ್ ತೀವ್ರವಾಗಿ ಇಳಿದಿದೆಯೆಂದು ತಾವು ಹೇಳಿದರೂ ಕೂಡ ಮತ್ತೆ ಜೂನ್‌ನಲ್ಲಿ ೭೭೦ ಕೋಟಿ ಜಾಸ್ತಿಬಂದಿದೆಯೆಂದು ಹೇಳಿದ್ದೀರಿ, ಇದನ್ನು ನಾನು ನಂಬುವುದಕ್ಕೆ ಆಗುವುದಿಲ್ಲ. ಮಾರ್ಚಿನಲ್ಲಿ ೬೮೮ ಕೋಟಿ ಇದ್ದದ್ದು, ಜೂನ್ ಅಂದರೆ ಮೂರೇ ತಿಂಗಳಲ್ಲಿ ೭೭೦ ಕೋಟಿ ಅಂದರೆ ಸುಮಾರು ೮೫ ಕೋಟಿ ಜಾಸ್ತಿ ಬಂದಿದೆ. ಇದು ನಂಬುವಂತಹ ಅಂಕಿಸಂಖ್ಯೆಗಳಲ್ಲ. ಇದಕ್ಕೆ ಕಾರಣ ಚುನಾವಣೆ ಮುಂದಕ್ಕೆ ಹಾಕಿದ್ದಲ್ಲ. ಇವತ್ತು ಡಿಪಾಸಿಟರ್ಸ್‌ಗೆ ನಿಮ್ಮಲ್ಲಿ ನಂಬಿಕೆ ಇಲ್ಲ; ಬ್ಯಾಲೆನ್ಸ್ ಷೀಟ್ ಇಲ್ಲ, ಮತ್ತೊಂದು ಇಲ್ಲ. ಇವತ್ತು ಸಹಕಾರಿ ಸಂಸ್ಥೆಗಳಲ್ಲಿ ದುಡ್ಡು ಹಾಕಿದರೆ ಷೇರುಗಳನ್ನು ತೆಗೆದುಕೊಂಡರೆ ಯಾರು ತಿಂದು ಹೋಗುತ್ತಾರೋ ಎನ್ನುವ ಶಂಕೆ ಇದೆ. ತಾವು ಯಾವುದಾದರೂ ಒಂದು ಸಂಸ್ಥೆಯಲ್ಲಿ ಹಣ ಇಡಬೇಕಾದರೆ, ಆ ಸಂಸ್ಥೆ ಹಣಕಾಸಿನ ಬಗ್ಗೆ ಶಕ್ತಿಯುತವಾಗಿದೆಯೋ ಇಲ್ಲವೋ ಎನ್ನುವುದನ್ನು ನೋಡದೇ ಹಣ ಹಾಕುತ್ತೀರಾ? ತಾವು ಚುನಾವಣೆ ಮಾಡದೇ ಈ ರೀತಿ ಮುಂದುವರಿಸಿಕೊಂಡು ಹೋಗುವುದರಿಂದ ಸಹಕಾರಿ ಬ್ಯಾಂಕುಗಳಲ್ಲಿ; ಸೊಸೈಟಿಗಳಲ್ಲಿ ಡಿಪಾಸಿಟ್‌ಗಳು ಕಡಿಮೆಯಾಗುತ್ತಾ ಹೋಗುತ್ತಿವೆ. ರಾಜ್ಯದಲ್ಲಿ ೨೨,೫೩೮ ಸೊಸೈಟಿಗಳು ಇವೆ ಎಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ತಾವು ೨೨,೫೩೮ ಸೊಸೈಟಿಗಳ ಮಂತ್ರಿಗಳಾಗಿದ್ದೀರಿ. ಇವುಗಳ ಮ್ಯಾನೇಜ್‌ಮೆಂಟ್ ಮಾಡುತ್ತಿದ್ದೀರಿ. ಇದರಲ್ಲಿ ೪೫೬೬ ಸೊಸೈಟಿಗಳು ಡಿಫಾಲ್ಟ್ ಆಗಿವೆ. ಮತ್ತೆ ೪೦೮೭ ಸೊಸೈಟಿಗಳು ಲಿಕ್ವಿಡೇಟ್ ಆಗಿವೆ. ಅಂದರೆ ೪೫ ಪರ್ಸೆಂಟ್ ಸೊಸೈಟಿಗಳು ಡಿಫಾಲ್ಟ್ ಮತ್ತು ಲಿಕ್ವಿಡೇಷನ್‌ಲ್ಲಿವೆ ಉಳಿದ ೧೩.೦೦೦ ಸೊಸೈಟಿಗಳ ಮ್ಯಾನೇಜ್‌ಮೆಂಟ್ ತಮ್ಮ ಕೈಯಲ್ಲಿದೆ. ಸಾರ್ವಜನಿಕರು ತಮ್ಮ ಮೇಲೆ ನಂಬಿಕೆ ಇಟ್ಟುಕೊಂಡು ದುಡ್ಡು ಹಾಕಿದ್ದಾರೆ. ಷೇರ್‌ಗಳನ್ನು ತೆಗೆದುಕೊಂಡಿದ್ದಾರೆ. ಅರ್ಧ ಭಾಗದಷ್ಟು ಸೊಸೈಟಿಗಳು ಡಿಫಾಲ್ಟ್ ಆದರೆ, ಸಾರ್ವಜನಿಕರು ಸಹಕಾರಿ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ನಂಬಿಕೆ ಇಡುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಡಿಫಾಲ್ಟ್ ಸೊಸೈಟಿಗಳ ಬಗ್ಗೆ ತಾವು ಏನು ಕ್ರಮ ತೆಗೆದು

ಕೊಂಡಿದ್ದೀರಿ? ಲಿಕ್ವಿಡೇಟ್ ಆದ ಸೊಸೈಟಿಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅವರಿಗೆ ಏನು ಪೆನಾಲ್ಟಿ ಹಾಕಿದ್ದೀರಿ? ಮಿಸ್–ಮೆನೇಜ್‌ಮೆಂಟ್ ಮಾಡಿರುವವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ? ಇದರ ಬಗ್ಗೆ ತಮ್ಮ ವರದಿಯಲ್ಲಿ ಏನೂ ಹೇಳಿಲ್ಲ. ಎನ್‌ಕ್ವೈಯರಿ ಅಂಡ್ ಇನ್ಸ್‌ಪೆಕ್ಷನ್ ಸೆಲ್ ಅಂತ ಮಾಡಿದ್ದೀರಿ. I will read that :

"Enquiry and Inspection Cell :— The cell was set up during 1973-74 with the objective of minimising malpractices occurring in the co-operative institutions, through timely investigations and inspections.

During the year 1981–82, officers of the Cell have investigated 35 complaints relating to wholesale stores, district co-operative central Banks, urban co-operative Banks taluk agricultural produce co-operative marketing societies, service societies and other types of co-operative societies."

ಈ ಎರಡೂ ಆಗುವುದಿಲ್ಲ. ಈ ಒಂದು ವರ್ಷದಲ್ಲಿ ೩೫ ದೂರುಗಳು ಬಂದಿವೆ. ಇವನ್ನು ತಾವು ಹೇಗೆ ಡಿಸ್‌ಪೋಸಲ್ ಮಾಡಿದ್ದೀರಿ? ಅಂದರೆ petitions enquired are given below ;

	Opening balance as on 1-4-1982	Receipt	Total	Dis-posed off	Balance
Government	58	19	77	39	38
Central	202	87	289	211	78
Total	260	106	3(6	250	116

೨೫೦ ಅರ್ಜಿಗಳನ್ನು ಡಿಸ್‌ಪೋಸಲ್ ಮಾಡಿದ್ದೀರಿ ಯಾವ ಯಾವ ಸೊಸೈಟಿಗಳನ್ನು ಡಿಸ್‌ಕ್ವಾಲಿಫೈ ಮಾಡಿದ್ದೀರಿ? ಇದರ ಬಗ್ಗೆ ಆಡಿಟ್ ವರದಿಯಲ್ಲಿ ಏನೂ ಹೇಳಿಲ್ಲ. ಇದು ಬಹಳ ಮುಖ್ಯವಾದ ವಿಷಯವಾದುದರಿಂದ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸೆಕ್ಷನ್ ೪ ಮತ್ತು ೬ರ ಪ್ರಕಾರ ಸೊಸೈಟಿಗಳನ್ನು ರಿಜಿಸ್ಟ್ರೇಷನ್ ಮಾಡಬೇಕಾಗುತ್ತದೆ. ಸೊಸೈಟಿ ರಿಜಿಸ್ಟ್ರೇಷನ್ ರೂಲ್ (೩) ಹಾಕಿದ್ದೀರಿ. ಇವತ್ತಿನ ದಿವಸ ತಮ್ಮ ಇಲಾಖೆಯಲ್ಲಿ ಸಾವಿರಾರು ಅರ್ಜಿಗಳು ಕೊಳೆಯುತ್ತಾ ಬಿದ್ದಿವೆ. ಬೆಂಗಳೂರು ನಗರಕ್ಕೆ ಸೇರಿದಂತೆ ಸುಮಾರು ೩೦೦ ಅರ್ಜಿಗಳು ಕೊಳೆಯುತ್ತಿವೆ. ಇವು ಏತಕ್ಕೆ ಡಿಸ್‌ಪೋಸಲ್ ಆಗಿಲ್ಲ ? ರಿಜಿಸ್ಟ್ರೇಷನ್ ನಿಯಮದ ಪ್ರಕಾರ ಏತಕ್ಕೆ ಡಿಸ್ಪೋಸ್ ಮಾಡಲಿಲ್ಲ ? ನಿಮ್ಮ ಇಲಾಖೆಯಲ್ಲಿ ಹಣ ಕೊಟ್ಟರೆ ರಿಜಿಸ್ಟ್ರೇಷನ್ ಬೇಗ ಆಗುತ್ತದೆ; ಹಣ ಕೊಡದೇ ಹೋದರೆ ರಿಜಿಸ್ಟ್ರೇಷನ್ ಆಗುವುದಿಲ್ಲ. ಬಂದಂತಹ ಅರ್ಜಿಗಳನ್ನು ವಿಲೇವಾರಿ ಮಾಡದೇ ಹೋದರೆ; ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಪೆನಾಲ್ಟಿ ಹಾಕುವಂತ ಕೆಲಸವನ್ನು ಏತಕ್ಕೆ ಮಾಡಬಾರದೆಂದು ನಾನು ಒತ್ತಾಯ ಮಾಡುತ್ತೇನೆ. ಸೊಸೈಟಿಗಳು ರಿಜಿಸ್ಟ್ರೇಷನ್ ಆಗದೇ ಇವತ್ತು ಅನೇಕ ಜನ ತೊಂದರೆ ಪಡುತ್ತಿದ್ದಾರೆ, ನಾನಾ ಮಾರ್ಗಗಳಿಂದ ಪಡೆಯುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಪೆಂಡಿಂಗ್ ಇರತಕ್ಕ ಅರ್ಜಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೆಕ್ಷನ್ ೧೬ರ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರಿ ಸಂಸ್ಥೆಗೆ ಅರ್ಜಿ ಹಾಕಿಕೊಂಡಂತ ಎಲ್ಲರಿಗೂ ಸದಸ್ಯತ್ವವನ್ನು ಕೊಡುವಂತೆ ಮಾಡಿದ್ದೀರಿ. ಇದು ಒಳ್ಳೆಯ ಕೆಲಸ. ಯೂನಿವರ್ಸಲ್ ಮೆಂಬರ್‌ಷಿಪ್ ಮಾಡುವುದು ತುಂಬಾ ಒಳ್ಳೆಯದು. ಆದರೆ, ಇಂಥ ಒಂದು ಒಳ್ಳೆಯ ಕೆಲಸ

ವನ್ನು ನಗರ ಪ್ರದೇಶಗಳಲ್ಲಿಯೂ ಮಾಡಬೇಕಾಗಿತ್ತು. ಇವತ್ತು ಜಾತಿಗಳ ಮೇಲೆ, ಹಣದ ಮೇಲೆ, ಬ್ಯಾಂಕು ಮತ್ತು ಸೊಸೈಟಿಗಳಲ್ಲಿ ಸದಸ್ಯತ್ವವನ್ನು ಪಡೆಯಬೇಕಾಗಿದೆ. ನಾನಾ ರೀತಿಯ ಪ್ರಭಾವವನ್ನು ಬೀರಬೇಕಾಗುತ್ತದೆ. ಇದನ್ನು ಹೋಗಲಾಡಿಸಬೇಕಾದರೆ, ಗ್ರಾಮಾಂತರ ಪ್ರದೇಶಗಳಲ್ಲಿರುವಂತೆ ಒಟ್ಟಾಗಿ ಸದಸ್ಯತ್ವವನ್ನು ಕೊಡುವಂತೆ ಮಾಡಿದರೆ, ವೆಸ್ಟೆಡ್ ಇಂಟರೆಸ್ಟ್ ಬೆಳೆಯುವುದು ತಪ್ಪುತ್ತದೆ. ಆ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ಇನ್ನು ಮಲ್ಟಿ ಮೆಂಬರ್ ಷಿಪ್‌ನ್ನು ಇತ್ತೀಚೆಗೆ ತೆಗೆದು ಹಾಕಿದ್ದೀರಿ ನಿಯಮ ೫(೭)ರ ಪ್ರಕಾರ ಬೇಡ ಎಂದು ಮಾಡಿದ್ದೀರಿ. ಹಿಂದೆ ಈ ಒಂದು ಪದ್ಧತಿ ಇತ್ತು. ಕಳ್ಳತನದಲ್ಲಿ ಮಲ್ಟಿ ಮೆಂಬರ್ ಷಿಪ್ ಪಡೆಯುವಂಥಾದ್ದು ನಡೆಯುತ್ತಿದೆ. ಆದರೆ, ಬಾರೋಯಿಂಗ್ ಮಾತ್ರ ಒಂದು ಕಡೆ ಇರಬೇಕು. ಮಲ್ಟಿ ಮೆಂಬರ್ ಷಿಪ್ ಇರುವುದರಿಂದ ಸಹಕಾರ ಸಂಸ್ಥೆಗಳಲ್ಲಿ ಅನುಭವ ಪಡೆದಂತಹವರ ನೆರವು ಬೇಕಾಗುತ್ತದೆ, ಇದರಿಂದ ಸೊಸೈಟಿಗಳಿಗೂ ಅನುಕೂಲವಾಗುತ್ತದೆ. ಆದರೆ ಕ್ರೆಡಿಟ್ ಮತ್ತು ಬಾರೋಯಿಂಗ್ ವಿಚಾರವಲ್ಲಿ ರಿಸ್ಟ್ರಿಕ್ಷನ್ ಮಾಡಬೇಕು. ಅದಕ್ಕೋಸ್ಕರ ನಿಯಮ ೧೬ ಮತ್ತು ೧೭ನ್ನು ಬದಲಾವಣೆಯನ್ನು ಮಾಡಬೇಕೆಂದು ಹೇಳುತ್ತೇನೆ. ಪ್ರಾಕ್ಟಿಕಲ್ ಆಗಿ ತೊಂದರೆಯಾಗುತ್ತದೆ. ಮೆಂಬರ್ ಡಿಸ್‌ಕ್ವಾಲಿಫಿಕೇಷನ್ ಬಗ್ಗೆ.—

"If he is a defaulter in respect of any loan taken by him, the Registrar either on a report made to him or otherwise shall order for removal of the member".

ಅಂದರೆ, ನಾನು ಡಿಫಾಲ್ಟರ್ ಆಗುತ್ತೇನೆ; ನನ್ನನ್ನು ಸೊಸೈಟಿ ಬೋರ್ಡ್‌ನವರು ತೆಗೆದು ಹಾಕುವುದಿಲ್ಲ. ನನ್ನನ್ನು ರಿಜಿಸ್ಟ್ರಾರ್ ತೆಗೆದು ಹಾಕಬೇಕು. ಈ ವಿಷಯದಲ್ಲಿ ರಿಪೋರ್ಟ್ ಯಾರು ಮಾಡುತ್ತಾರೆ,

೫-೩೦ ಪಿ. ಎಂ.

ರಿಪೋರ್ಟ್ ಮಾಡಿದರೆ ಎನ್‌ಕ್ವಯಿರಿ ಆಗುತ್ತದೆ. ತಾವು ಏನು ಮಾಡಬೇಕಾಗಿತ್ತು, Ipso facts ಡಿಸ್‌ಕ್ವಾಲಿಫಿಕೇಷನ್ ಆದತಕ್ಷಣ, ಯಾರಾದರೂ ಆಗಿರಲಿ he ceases to be a director ಅಂತಹ ಹಾಕಿದರೆ ಇವೊತ್ತು ರಿಜಿಸ್ಟ್ರಾರ್ ಬಂದು ಮಾಡತಕ್ಕಂಥಾದ್ದು ಏನೂ ಇರುವುದಿಲ್ಲ. ಅಲ್ಲಿ ಅವರಿಗೊಂದು ಅಪೀಲು ಮತ್ತೊಂದು ಅಪೀಲು ಎಲ್ಲಾ ಹೊರಟುಹೋಗುತ್ತದೆ. Ipso facts ಡಿಫ್ಯಾಲ್ಟರ್ಸ್ ಆದರೆ, ಸಂಬಂಧಪಟ್ಟ ಬೋರ್ಡ್ ಆಫ್ ಡೈರೆಕ್ಟರ್ಸ್ ಆಗಲೀ ಬೋರ್ಡ್‌ನವರು ಆಗಲೀ ನಿಮಗೆ ಇನ್‌ಫರ್‌ಮೇಷನ್ ಕೊಡುವುದಿಲ್ಲ. ಆದ್ದರಿಂದ ಈ ಸೆಕ್ಷನ್ ಅಮೆಂಡ್ ಮಾಡಬೇಕೆಂದು ತಮ್ಮಲ್ಲಿ ನಾನು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ. ಇನ್ನು ಎರಡು ಮೂರು ವಿಚಿತ್ರವಾದ ಕೆಲಸವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ ತಾವು ೧೯೭೮-೭೯ರ ಆಡಿಟ್ ರಿಪೋರ್ಟ್ ನೋಡಿರಬಹುದು ಈ ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅವರು ಒಂದು ಸ್ಕೀಮ್ ಸ್ಯಾಂಕ್ಷನ್ ಮಾಡಿದರು. Tractors service cum Repair Centre for Hiring tractors ಅಂಥ ಇದಕ್ಕೆ ಷೇರ್ ಕ್ಯಾಪಿಟಲ್ ೦.೫ ಲಕ್ಷ ಕೊಟ್ಟರು ಮತ್ತೆ ೨೨ ಲಕ್ಷ ಕೊಟ್ಟರು, ವರ್ಕ್‌ಷಾಪ್ ಕನ್‌ಸ್ಟ್ರಕ್ಷನ್‌ಗೆ ೪೦ ಲಕ್ಷ ಕೊಟ್ಟರು. ಸಬ್ಸಿಡಿ ೫೫ ಲಕ್ಷ ಕೊಟ್ಟರು, ಹೀಗೆ ಒಟ್ಟು ೧.೭ ಲಕ್ಷ ೧೯೭೭ ರಲ್ಲಿ ಕೊಟ್ಟಿದ್ದು ಟ್ರಾಕ್ಟರ್ ರಿಪೇರಿಂಗ್ ಸೆಂಟರ್ ಯಾವುದು ಸೆಲೆಕ್ಟ್ ಮಾಡಿದರು ಅಂದರೆ ಸೊರಬ ತಾಲ್ಲೂಕನ್ನು ಸೆಲೆಕ್ಟ್ ಮಾಡಿದರು, ಅಲ್ಲಿರತಕ್ಕ ಎಕರೇಜ್ ೧೫,೩೦೧ ಎಕರೆ ಇರಿಗೇಟೆಡ್ ಜಮೀನು ಆದರೆ ೪೧,೩೭೯ ಸೋನ್ ಏರಿಯಾ, ೧.೧೭ ರೂಪಾಯಿಗಳನ್ನು ತಾವು ಒಂದು ಸೊಸೈಟಿಗೆ ಕೊಟ್ಟರಿ, ಸೊಸೈಟಿಯವರು ಏನು ಮಾಡಿದರೂ ಎಂದರೆ ಎರಡು ಹಳೇ ಟ್ರಾಕ್ಟರ್ ಕೊಂಡುಕೊಂಡರು. ೦ ೪೪ ಲಕ್ಷದಲ್ಲಿ ಎರಡು ಹಳೇ ಟ್ರಾಕ್ಟರ್ ಕೊಂಡುಕೊಂಡರು ಅದನ್ನು ಯಾವುದೋ ಓನರ್ಸ್‌ನಿಂದ ಕೊಂಡುಕೊಂಡರು. ಮತ್ತೆ ಅದೇ ಸೊಸೈಟಿಗೆ ಹೈಪೋತಿಕೇಟ್ ಮಾಡಿ ೧೯೭೪-೭೫ರಲ್ಲಿ ಬ್ಯಾಂಕಿಗೆ ದುಡ್ಡು ಕಟ್ಟಲಿಲ್ಲ ಅಂಥ ಅಟ್ಯಾಚ್‌ಮೆಂಟ್ ಆಯಿತು ಯಾರು ಈ ಕೆಲಸ ಮಾಡಿದ್ದರೋ ಅವರು ದುಡ್ಡು ಕಟ್ಟಲಿಲ್ಲ ಅಂಥ ಅಟ್ಯಾಚ್‌ಮೆಂಟ್ ಆಯಿತು. ಈಗ ಆ ಏರಿಯಾದಲ್ಲಿ ಟ್ರ್ಯಾಕ್ಟರ್ ಇಲ್ಲ. ಟ್ರ್ಯಾಕ್ಟರ್ಸ್‌ಗೆ ರಿಪೇರ್ಸ್ ಆಗಲಿಲ್ಲ ಸರ್ವೀಸಸ್ ಆಗಲಿಲ್ಲ. ಕೊನೆಗೆ ಏನಾಯಿತು ಎಂದರೆ ನಿಮ್ಮ ೧.೬೭ ಲಕ್ಷ ಮುಳುಗಿಸಿಬಿಟ್ಟರು. ಇದರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿರಿ? ಆ ಮ್ಯಾಟರ್ ತಮಗೆ ರಿಪೋರ್ಟ್ ಆಗಿದೆ. ಆ ಮ್ಯಾನೇಜ್‌ಮೆಂಟ್ ಮೇಲೆ,

ಆ ಸೊಸೈಟಿ ಮೇಲೆ ಏನು ಕ್ರಮ ತೆಗೆದುಕೊಂಡಿರಿ ? ಅದು ಆದಮೇಲೆ ಇನ್ನೊಂದು ಆಯಿತು ? ಒಂದು ಪ್ಯಾರ ಬಾಯಿಲಿಂಗ್ ಯುನಿಟ್ ಅಂಥ ಕುಶಾಲನಗರದಲ್ಲಿ ಮಾಡಿದಿರಿ. ಅದು ನಮ್ಮ ಮುಖ್ಯಮಂತ್ರಿಗಳು ಬಂದಿರತಕ್ಕ ಏರಿಯಾ ಅಲ್ಲಿ ೬.೪೦ ಲಕ್ಷ ರೂಪಾಯಿಯಲ್ಲಿ ಒಂದು ಪ್ಯಾಡಿ ಪ್ಯಾರ ಬಾಯಿಲಿಂಗ್ ಯುನಿಟ್ ಮಾಡಿದಿರಿ. ಅದಕ್ಕೆ ಷೇರ್‌ಕ್ಯಾಪಿಟಲ್ ೧.೬೬ ಲಕ್ಷ ರೂಪಾಯಿ ಕೊಟ್ಟಿರಿ. ಅದು ಆದ ಮೇಲೆ ಲೋನ್ ೪.೧೬ ಲಕ್ಷ ಕೊಟ್ಟಿರಿ. ಆ ಸ್ಕೀಮ್ ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಸ್ಯಾಂಕ್ಷನ್ ಮಾಡಿರತಕ್ಕಂಥಾದ್ದು. ಇದಕ್ಕೆ ಒಟ್ಟು ನೀವು ಆರೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೧೯೭೪ರಲ್ಲಿ ಪ್ರಾರಂಭ ಮಾಡಿ, ೧೯೭೮ರಲ್ಲಿ ಅದನ್ನು ಕೈಬಿಟ್ಟಿರಿ. ಅಲ್ಲಿ ಸುಮಾರು ಮೂರೂವರೆ ಲಕ್ಷ ರೂಪಾಯಿಗಳ ಮೆಷಿನರಿ ತೆಗೆದುಕೊಂಡಿದ್ದರಲ್ಲ ಅದು ಏನಾಯಿತು. ಇದನ್ನು ಲಾಸು ಮಾಡಿದಂಥವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಸಹಕಾರಿ ಹಣ, ಸರ್ಕಾರದ ಹಣ ಯಾವ ರೀತಿ ಲಾಸ್ ಆಗುತ್ತಿದೆ ಎನ್ನುವುದಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರ ಹೇಳಬೇಕೆಂದರೆ ಹಿರಿಯೂರಿನಲ್ಲಿ ಎ.ಪಿ.ಎಂ.ಸಿಗೆ ಅಲ್ಲಿ ಕಮರ್ಷಿಯಲ್ ಕ್ರಾಪ್ಸ್ ೧೯೭೪-೭೫ರಲ್ಲಿ ಟೊಬ್ಯಾಕೊ ಡೀಲ್ ಮಾಡಬೇಕೆಂದು ೪ ಲಕ್ಷ ರೂಪಾಯಿ ಕೊಟ್ಟರು. ಹಿರಿಯೂರಿನಲ್ಲಿ ಟೊಬ್ಯಾಕೋ ಬೆಳೆಯುವುದಿಲ್ಲ ಎಂದು ಮಾರ್ಕೆಟ್ ಮಂತ್ಲಿ ರಿಪೋರ್ಟ್‌ನಲ್ಲಿದೆ. ಆಡಿಟರ್ ಜನರಲ್ ರಿಪೋರ್ಟ್‌ನ್ನು ನಾನು ಓದಿ ಹೇಳುತ್ತೇನೆ. ಪ್ರತಿಯೊಂದು ತಿಂಗಳ ರಿಪೋರ್ಟ್‌ನಲ್ಲಿ ಟೊಬ್ಯಾಕೋ ಬಂದಿಲ್ಲ ಎಂದು ೧೯೭೧-೭೨ರಿಂದ ೧೯೭೪-೭೫ರಲ್ಲಿ ಹೇಳಿದ್ದಾರೆ. ನೆಗ್ಲಿಜಬಲ್ ಕ್ವಾಂಟಿಟಿ ಅರೈವ್ಡ್ ಇನ್ ೧೯೭೫-೭೬ ಅಂಡ್ ೧೯೭೮-೭೯. ೪ ಲಕ್ಷ ರೂಪಾಯಿ ಅದೇ ರೀತಿ ಶಿಕಾರಿಪುರದಲ್ಲಿ ಕೊಟ್ಟಿದ್ದೀರಿ, ಅಲ್ಲಿ ೧೯೭೧ ರಿಂದ ೧೯೮೦ರ ವರೆಗೆ ಟೊಬ್ಯಾಕೋ ಬಂದಿಲ್ಲ, ಇದು ನಿಮ್ಮ ೧೯೭೮-೭೯ರ ಆಡಿಟ್ ರಿಪೋರ್ಟ್‌ನಲ್ಲಿದೆ. ತಾವು ಯಾವುದೋ ಒಂದು ಒತ್ತಡದ ಮೇಲೆ ಹಣ ಕೊಡಲಿಕ್ಕೆ ಹೋಗುತ್ತಿದ್ದೀರಿ. ಇನ್ನು ಫೈನಾನ್ಷಿಯಲ್ ಕಮಿಟಿ ಫಾರ್ ಡೆವಲಪ್‌ಮೆಂಟ್ ಆಫ್ ರೆಗ್ಯುಲೇಟೆಡ್ ಮಾರ್ಕೆಟ್ ಅದು ಗವರ್ನ್‌ಮೆಂಟ್ ಆಫ್ ಇಂಡಿಯಾದಿಂದ ಬಂದಂಥ ಸ್ಕೀಮ್, ಅದರ ಪ್ರಕಾರ ೨೪೦ ಲಕ್ಷ ರೂಪಾಯಿ ತಮಗೆ ಕೊಟ್ಟರು. ಗವರ್ನ್‌ಮೆಂಟ್ ಆಫ್ ಇಂಡಿಯಾ ಸ್ಕೀಮ್‌ನಲ್ಲಿ ಸುಮಾರು ೮೦ ಮಾರ್ಕೆಟಿಂಗ್ ಕಮಿಟಿಗಳಿಗೆ ಕೊಟ್ಟಿರತಕ್ಕ ಹಣ, ಇದು ಈ ಸ್ಕೀಮ್‌ನಲ್ಲಿ ಒಟ್ಟು ಗ್ರ್ಯಾಂಟ್ ೩೨೨ ಲಕ್ಷ ರೂಪಾಯಿ, ಲೋನ್ ೬೬ ಲಕ್ಷ, ೮೯ ರೆಗ್ಯುಲೇಟೆಡ್ ಡೆವಲಪ್‌ಮೆಂಟ್ ಮಾರ್ಕೆಟ್‌ಗಳು ಏನಾಗಬೇಕು? ಅದರಲ್ಲಿ ತಾವು ೧೯೮೦ ಮಾರ್ಚಿಯವರೆಗೆ ಖರ್ಚು ಮಾಡಿರತಕ್ಕದ್ದು, ೧೯೬.೫೦ ಲಕ್ಷ ರೂಪಾಯಿ. ಬಡ ರೈತರಿಗೆ ನಾವು ಅನುಕೂಲ ಮಾಡಬೇಕೆಂದು ಕೇಂದ್ರ ಸರ್ಕಾರ ಹಣ ಕೊಡುತ್ತಿದ್ದಾರೆ. ರೈತರ ವಿಚಾರ ನಿಮಗೇನು ಗೊತ್ತು ಅಂಥ ಹೇಳುತ್ತೀರಿ. ಬಡ ರೈತರಿಗೆ ಅನುಕೂಲ ಮಾಡಬೇಕೆಂದು ಘೋಷಣೆ ಮಾಡತಕ್ಕಂಥವರು ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಏತಕ್ಕೆ ಸರಿಯಾಗಿ ಉಪಯೋಗಿಸುತ್ತಿಲ್ಲ. ಒಂದು ಕಡೆ ಹಣ ಉಪಯೋಗಿಸುತ್ತಿಲ್ಲ. ಮತ್ತೊಂದು ಕಡೆ ಎಕ್ಸೆಸ್ ಪೇಮೆಂಟ್ ಮಾಡಿದ್ದೀರಿ. ಚನ್ನರಾಯಪಟ್ಟಣ, ಕುಶಾಲನಗರ, ಹುಣಸೂರು, ಹಾಸನದಲ್ಲಿ ೧.೬೦ ಲಕ್ಷ ರೂಪಾಯಿ ಎಕ್ಸೆಸ್ ಪೇಮೆಂಟ್ ಕೊಟ್ಟಿದ್ದೀರಿ. ರೆಕವರಿ ಮಾಡಬೇಕೆಂದು ಹೇಳಿದ್ದರೂ ಸಹ ರೆಕವರಿ ಮಾಡಿಲ್ಲ. ಎಲ್ಲೆಲ್ಲಿ ವಸೂಲು ಮಾಡಿಲ್ಲ ಅಂಥ ಒಂದು ಲಿಸ್ಟ್ ಕೊಟ್ಟಿದ್ದಾರೆ ಅದನ್ನು ನಾನು ಓದಲಿಕ್ಕೆ ಹೋಗುವುದಿಲ್ಲ. ತಾವು ಹಣವನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ ಎಂದು ಒಟ್ಟಿನಲ್ಲಿ ನಾನು ತಮ್ಮ ಗಮನಕ್ಕೆ ತರಬೇಕಾಗಿದೆ ಇನ್ನು ಪ್ರೈಸ್ ಲೈನ್ ಓಲ್ಡ್ ಮಾಡಬೇಕೆಂದು ಹೋಲ್‌ಸೇಲ್ ಸೊಸೈಟಿಗಳನ್ನು ಮಾಡಿದಿರಿ. ಇವೊತ್ತು ಹೋಲ್‌ಸೇಲ್ ಸೊಸೈಟಿಗಳಿಂದ ಇನ್ನಷ್ಟು ಎಕ್ಸ್‌ಪ್ಲಾಯಿಟ್ ಮಾಡತಕ್ಕದ್ದು ಆಗಿದೆ. ನೀವು ಕೊಟ್ಟ ಹಣದಲ್ಲಿ ಕಡಿಮೆಗೆ ತೆಗೆದುಕೊಂಡು ಬರುವುದು, ಮಾರ್ಕೆಟ್ ಬೆಲೆ ಜಾಸ್ತಿಯಾದಾಗ ಬೆಲೆ ಜಾಸ್ತಿ ಮಾಡಿ ಮಾರಾಟ ಮಾಡಿ ಜಾಸ್ತಿ ಪ್ರಾಫಿಟ್ ತೋರಿಸುತ್ತಿದ್ದಾರೆ ಬಂದಿರತಕ್ಕ ಪ್ರಾಫಿಟ್‌ನಲ್ಲಿ ಇವರು ಮೋಜು ಮಾಡುತ್ತಾರೆ. ಈ ಲಾಭದಲ್ಲಿ ಮೆಂಬರ್ಸ್‌ಗೆ ಸ್ವಲ್ಪ ಕೊಡುತ್ತಾರೆ. ಆದ್ದರಿಂದ ತಾವು ಏನು ಉದ್ದೇಶದಿಂದ ಈ ಸಂಸ್ಥೆಗಳನ್ನು ಮಾಡಿದ್ದಾರೆ ಅದರ ಉದ್ದೇಶ ಸಫಲವಾಗಲಿಲ್ಲ, ಇನ್ನು ಸ್ಟೇಟ್ ಕೋಆಪರೇಟೀವ್ ಯುನಿಟ್ ತಾವು ನೋಡಬೇಕು. ಅಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆದರೆ ಅವರು ಕೊಡತಕ್ಕ ಟ್ರೈನಿಂಗ್ ಸಬ್‌ಸ್ಟ್ಯಾಂಡರ್ಡ್ ಟ್ರೈನಿಂಗ್. ಅದನ್ನು ರಿವ್ಯೂ ಮಾಡಿ ಸೊಸೈಟಿಗಳಿಗೆ ಬೇಕಾದಗೆ ಟ್ರೈನಿಂಗ್ ಕೊಡಲಿ, ಅವರು ಕೊಡುವ ಟ್ರೈನಿಂಗ್‌ನಿಂದ ಬ್ಯಾಂಕ್‌ಗೆ ಏನೇನು ಪ್ರಯೋಜನವಾಗುವುದಿಲ್ಲ ಅದನ್ನು ಸರಿಮಾಡಲಿಕ್ಕೆ ಸ್ವಲ್ಪ ಪ್ರಯತ್ನ ಮಾಡಬೇಕು. ಅವರು ಇನ್ನೂ ಆ್ಯಕ್ಟೀವ್ ಆಗಿ ಕೆಲಸ ಮಾಡುವಂತೆ ಮಾಡಬೇಕು, ಅವರ ಆ್ಯಕ್ಟಿವಿಟೀಸ್ ಏನೇನು ಸಾಲದು. ಇನ್ನು ಎಸ್. ಸಿ. ಮತ್ತು ಎಸ್. ಟಿ. ಅವರಿಗೆ ತಾವು ಹೌಸಿಂಗ್ ಸೊಸೈಟಿಗೆ ಮನೆ ಕಟ್ಟಬೇಕೆಂದು ಹಣ ಕೊಟ್ಟಿದ್ದೀರಿ. ಆ ಹಣ ಏನಾಗಿದೆ. ೨೨

ಸಾವಿರ ಮನೆಗಳನ್ನು ಕಟ್ಟಬೇಕಾಗಿದ್ದರಲ್ಲಿ ೧೭,೮೪೦ ಮನೆಗಳನ್ನು ಕಟ್ಟಿದ್ದಾರೆ. ಇನ್ನೂ ಕೆಲವು ಮನೆಗಳನ್ನು ಕಟ್ಟಿಲ್ಲ, ಇದನ್ನು ಬೇಗ ಕಟ್ಟಿಸಬೇಕು. ಯಾರು ಬಹಳ ಬಡವರು ಇದ್ದಾರೆ ಅವರ ವಿಚಾರದಲ್ಲಿಯೇ ಬಹಳ ನಿಧಾನ ಆಗುತ್ತಿದೆ. ಒಂದು ವೇಳೆ ಅವರು ಮನೆ ಕಟ್ಟಲಿಕ್ಕೆ ಆಗದೇ ಇದ್ದರೆ ಬೇರೆ ರೀತಿಯಲ್ಲಿ ಮಾಡಿ ಅವರಿಗೆ ಕ್ಯಾಷ್ ಲೋನ್ ಕೊಟ್ಟು ಕಟ್ಟಿಸತಕ್ಕ ಪ್ರಯತ್ನ ಮಾಡಬೇಕು. ಇನ್ನು ಆರ್ಬಿಟ್ರೇಷನ್ ಬಹಳ ಸ್ಪೀಡಿ ಡಿಸ್‌ಪೋಸಲ್ ಆಗಬೇಕು. ಕೇಸಸ್ ಫೈಲ್ ಮಾಡಿದಾಗ ಸ್ಪೀಡಿ ಡಿಸ್‌ಪೋಸಲ್ ಆಗುತ್ತಿಲ್ಲ. ಇನ್ನು ಅರ್ಬನ್ ಕೋ ಆಪರೇಟೀವ್ ಬ್ಯಾಂಕ್ ಬಗ್ಗೆ ಹೇಳಬೇಕೆಂದರೆ, ಇವೊತ್ತು ವೈಶ್ಯ ಕೋ ಆಪರೇಟೀವ್ ಬ್ಯಾಂಕ್ ತಮಗೆ ಗೊತ್ತಿದೆ ಅಲ್ಲಿ ೮೨ ಲಕ್ಷ ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಆಡಿಟರ್ಸ್ ಅಲ್ಲಿಗೆ ಹೋದಾಗ ಇದು ಬಹಳ ಚೆನ್ನಾಗಿದೆ ಎಂದು 'ಎ' ಸರ್ಟಿಫಿಕೇಟ್ ಕೊಟ್ಟು ಬಂದಿದ್ದಾರೆ ಇದು ಹೇಗೆ ಆಗಲಿಕ್ಕೆ ಸಾಧ್ಯ, ಇದೇ ರೀತಿ ಮಲ್ಲೇಶ್ವರಂ ಟೈಲರಿಂಗ್ ಕೋ-ಆಪರೇಟೀವ್ ಸೊಸೈಟಿ ಅಂಥ ಇದ್ದು ಅದು ಪಾಪರ್ ಆಗುವವರೆಗೆ ಚೆನ್ನಾಗಿದೆ ಅಂಥ ರಿಪೋರ್ಟ್ ಬಂತು. ಈ ರೀತಿ ಯಾರು ಆಡಿಟ್ ಮಾಡುತ್ತಾರೆ, ಅವರ ಮೇಲೆ ತಾವು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

ವೈಶ್ಯ ಕೋ ಆಪರೇಟಿವ್ ಬ್ಯಾಂಕ್ ಕೂಡ ಇದೇ ರೀತಿ ಆಯಿತು ಕೊನೆಯಲ್ಲಿ ಒಟ್ಟು ೮೭ ಲಕ್ಷ ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಯಿತು. ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕ್ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಮಾಡಿದಿರಿ, ಅದು ಏನಾಯಿತು ? ಇವತ್ತು ಈ ಬ್ಯಾಂಕ್ ಲಿಕ್ವಿಡೇಟ್ ಆಗುವ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ದಯವಿಟ್ಟು ಇದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು. ಬ್ಯಾಂಕಿಂಗ್ ಸೆಕ್ಟಾರ್ ಬಗ್ಗೆ ಪ್ರತ್ಯೇಕವಾದ ಒಬ್ಬ ಜಾಯಿಂಟ್ ರಿಜಿಸ್ಟ್ರಾರ್‌ರವರನ್ನು ನೇಮಕ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅನೇಕ ಜನರಿಗೆ ಈ ಬ್ಯಾಂಕ್‌ನ ವಿಚಾರ ಗೊತ್ತಿರುವುದಿಲ್ಲ. ಬ್ಯಾಂಕ್‌ಗಳ ಮೇಲೆ ಡ್ಯೂಯಲ್ಸ್ ಕಂಟ್ರೋಲ್ ಇದೆ. ಒಂದು ಕಡೆ ರಿಸರ್ವ್ ಬ್ಯಾಂಕ್‌ನವರು ಕಂಟ್ರೋಲ್ ಇಟ್ಟುಕೊಂಡಿದ್ದೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ತಾವು ಕಂಟ್ರೋಲ್ ಇಟ್ಟುಕೊಂಡಿರುವುದಾಗಿ ಹೇಳುತ್ತೀರಿ. ಆದರೆ ನಿಜ ಸ್ಥಿತಿಯಲ್ಲಿ ಇದರ ಮೇಲೆ ಅವರ ಕಂಟ್ರೋಲೂ ಇಲ್ಲ, ನಿಮ್ಮ ಕಂಟ್ರೋಲೂ ಇಲ್ಲ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಒಂದು ಕಂಟ್ರೋಲನ್ನು ತಾವು ಇಟ್ಟುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಕೋ-ಆಪರೇಟಿವ್ ಎಂಪ್ಲಾಯೀಸ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಆ ಕಡೆ ಕೋ-ಆಪರೇಟಿವ್ ನೌಕರರೂ ಅಲ್ಲ, ಈ ಕಡೆ ಸರ್ಕಾರಿ ನೌಕರರೂ ಅಲ್ಲ. ಯಾವ ರೀತಿ ಪೇ-ಸ್ಕೇಲ್ಸ್ ಇರಬೇಕು, ಯಾವರೀತಿ ಸರ್ವೀಸಸ್ ಇರಬೇಕು, ಲೀವ್ ಬೆನಿಫಿಟ್ ಯಾವ ರೀತಿ ಇರಬೇಕು, ಎನ್ನುವ ಬಗ್ಗೆ ತಾವು ರೂಲ್ಸ್ ಮಾಡಿದ್ದೀರಿ. ಆದರೆ ಈ ರೂಲ್ಸ್‌ನ್ನು ಯಾವ ಕೋ-ಆಪರೇಟಿವ್ ಸೊಸೈಟಿಯವರೂ ಕೂಡ ಅನುಷ್ಠಾನಕ್ಕೆ ತಂದಿಲ್ಲ. ಸುಮಾರು ೬೫-೭೦ ಜನ ನೌಕರರೂ ಇವತ್ತು ಆರ್ಗನೈಸ್ ಸೆಕ್ಟಾರ್ ಆಗಿಲ್ಲ. ಬೇರೆ ಬ್ಯಾಂಕ್‌ನವರು ಮಾಡಿಕೊಂಡಂತೆ ಇವರೂ ಆರ್ಗನೈಜೇಷನ್ ಮಾಡಿಕೊಂಡಿದ್ದರೆ ಅನುಕೂಲವಾಗುತ್ತಿತ್ತು. ಇವತ್ತು ಅವರಿಗೆ ಪೆನ್‌ಷನ್ ಕೊಡುತ್ತಿಲ್ಲ. ಗ್ರ್ಯಾಚುಯಿಟಿ ಕೊಡುತ್ತಿಲ್ಲ; ಪ್ರಾವಿಡೆಂಟ್ ಫಂಡ್ ಕೊಡುತ್ತಿಲ್ಲ; ಲೀವ್ ಬೆನಿಫಿಟ್ಸ್ ಕೊಡುತ್ತಿಲ್ಲ. ನಿಮ್ಮ ಇಲಾಖೆಯವರು ಒಂದು ಯುನಿಫಾರಂ ಪೇ ಸ್ಕೇಲ್ಸ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಇವರು ಇನ್ನೂ ಆ ಪೇ ಸ್ಕೇಲ್ಸ್‌ನ್ನು ಜಾರಿಗೆ ಕೊಟ್ಟಿಲ್ಲ. ಹೀಗಾಗಿ ಆ ನೌಕರರಿಗೆ ನಾನಾ ರೀತಿಯ ತೊಂದರೆಯಾಗಿದೆ. ಈಗಾಗಲೇ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ನೌಕರರು ೧೮ನೇ ತಾರೀಖಿನಿಂದ ಅನಿರ್ದಿಷ್ಟ ಕಾಲದ ಮುಷ್ಕರವನ್ನು ಮಾಡುತ್ತಿದ್ದಾರೆ. ಅವರ ಬೇಡಿಕೆ ಏನೆಂದರೆ ೬ ಕಂತು ಡಿ.ಎ; ಹೆಚ್.ಆರ್.ಎ; ಸಿ.ಸಿ.ಎ; ಹಾಗೂ ೭೯-೮೦, ೮೦-೮೧ರ ಬೋನಸ್ ಕೂಡ ಕೇಳಿದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗುತ್ತಿದೆ.

ಶ್ರೀ ಪಿ. ರಾಮದೇವ್.—ಬಹಳ ಸಂತೋಷ ಸ್ವಾಮಿ. ಆದಷ್ಟು ಬೇಗ ಗೌರ್ನಮೆಂಟ್ ಆರ್ಡರ್ ಇಷ್ಯೂ ಮಾಡಿ ಅದರ ಸರ್ವೀಸ್ ಕಂಡಿಷನ್ಸ್‌ನ್ನು ರೆಗ್ಯುಲರೈಸ್ ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ). —ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಖಾತೆ ಸಚಿವರು ಮತ್ತು ಮಾನ್ಯ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿ ಸಚಿವರು ತಮ್ಮ ಬೇಡಿಕೆಗಳನ್ನು ಸಭೆಯ ಮುಂದೆ ಏನು ಮಂಡಿಸಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾತಂತ್ರ್ಯ ಸಿಕ್ಕಿದ ನಂತರ ನಮ್ಮ ದೇಶದಲ್ಲಿ ಆರ್ಥಿಕ ಸ್ವಾತಂತ್ರ್ಯ ಬರಬೇಕು, ಇಲ್ಲಿ ರಾಮರಾಜ್ಯ ಆಗಬೇಕು. ಜನತೆ ಸುಖವಾಗಿ ಬಾಳಬೇಕು, ಕಡಿಮೆ ಎಂದರೂ ಅವರಿಗೆ ಊಟಕ್ಕೆ, ಉಡಲಿಕ್ಕೆ, ಇರಲಿಕ್ಕೆ ಸಮರ್ಪಕವಾಗಿರುವಂತೆ ಮಾಡಬೇಕೆಂದು ಸಹಕಾರ ಆಂಧೋಳನ ನಮ್ಮ ರಾಜ್ಯದಲ್ಲಿ ಪ್ರಾರಂಭವಾಯಿತು. ಕಳೆದ ೩೪ ವರ್ಷದಿಂದ ಆಚೆಗೆ ಇದರ ಬ್ಯಾಲೆನ್ಸ್ ಷೀಟನ್ನು ತೆಗೆದುನೋಡಿದರೆ ವಾಸ್ತವಿಕವಾಗಿ ಅವರಿಗೆ ಏನು ಅನ್ಯಾಯವಾಗಿತ್ತು ಅದು ಇವತ್ತು ದೂರವಾಗಿದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಉದ್ದೇಶದಿಂದ ಈ ಆಂಧೋಳನ ಪ್ರಾರಂಭವಾಯಿತೋ ಆ ಉದ್ದೇಶ ಮಾತ್ರ ಸಫಲವಾಗಿಲ್ಲ ಎಂಬುದನ್ನು ಮಾತ್ರ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದು ತಮಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಅಥವಾ ಇಡೀ ದೇಶದಲ್ಲಿ ಪ್ರೈಮರಿ ಸ್ಕೂಲ್, ಹೈಸ್ಕೂಲ್, ಕಾಲೇಜುಗಳು, ಇವುಗಳು ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದಿವೆಯೇ ಹೊರತು ಅವುಗಳ ನೈತಿಕ ಮಟ್ಟ ಮಾತ್ರ ಬೆಳೆದಿಲ್ಲ. ಇದೇ ರೀತಿ ರಾಜ್ಯದಲ್ಲಿ ೨೫ ಸಹಕಾರ ಸಂಘಗಳು ಹಳ್ಳಿಗಳಲ್ಲಿದ್ದರೂ ಅವುಗಳ ನೈತಿಕಮಟ್ಟ ಬೆಳೆದಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಅಪ್ರಮಾಣಿಕ ರೀತಿಯಲ್ಲಿ ಇವುಗಳನ್ನು ನಡೆಸಿದ ಕಾರಣ ಸರ್ಕಾರೀ ಅಧಿಕಾರಿಗಳಾಗಲಿ, ಸರ್ಕಾರಿ ನೌಕರರಾಗಲಿ, ಅಥವಾ ಸಹಕಾರ ಸಂಘದ ಸದಸ್ಯರಾಗಲೀ ಇವರೆಲ್ಲರ ನೈತಿಕಮಟ್ಟವೂ ಕಡಿಮೆಯಾದ್ದರಿಂದ ಬಹಳಷ್ಟು ಕೇಸುಗಳು ಈಗಲೂ ನಡೆಯುತ್ತಿವೆ. ನನ್ನ ಅನುಭವದ ಪ್ರಕಾರ ಹೇಳುವುದಾದರೆ ಬೀದರ್ ಜಿಲ್ಲೆಯಲ್ಲಿ ಇಂಥ ನೂರಾರು ಕೇಸುಗಳು ನಡೆಯುತ್ತಿವೆ. ಪ್ರತಿಯೊಂದು ಸಾರಿ ಸರ್ಕಾರ ಬದಲಾವಣೆ ಆದಾಗಲೂ ಅನೈತಿಕ ವ್ಯವಹಾರ ಮಾಡುವವರು, ದುರಾಚಾರ ಮಾಡುವವರು ಮಂತ್ರಿಗಳನ್ನು ಹಿಡಿದುಕೊಂಡು ಬಚಾವ್ ಆಗುತ್ತಿದ್ದಾರೆಂಬುದು ಎಷ್ಟೋಸಾರಿ ತಮ್ಮ ಗಮನಕ್ಕೆ ಬಂದಿದೆ. ವಾಸ್ತವಿಕವಾಗಿ ಎಷ್ಟು ರಿಕವರಿ ಆಗಬೇಕೋ ಆ ಪ್ರಕಾರ ಆಗುತ್ತಿಲ್ಲ. ಸಾಲ ಯಾವ ಪ್ರಕಾರ ಸಿಕ್ಕಬೇಕೋ ಅದು ಸಿಕ್ಕುತ್ತಿಲ್ಲ. ಅದನ್ನು ನೋಡಿದರೆ ಏನು ಅನಿಸುತ್ತದೆ ಎಂದರೆ ಸಾಹುಕಾರರ ಕಾಟ ಕಡಿಮೆಯಾದರೂ ಈ ಸಹಕಾರ ಸಂಘಗಳು ಮಾತ್ರ ದೊಡ್ಡ ಸಾಹುಕಾರರಾಗುತ್ತಿವೆ. ಇವತ್ತು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಸ್ಮಾಲ್ ಫಾರ್ಮರ್ಸ್ ಆಗಲಿ ಮಾರ್ಜಿನಲ್ ಫಾರ್ಮರ್ಸ್ ಆಗಲಿ ಅಥವಾ ಬೇರೆ ಯಾರೇ ಆಗಲಿ ಸಾಲ ತೆಗೆದುಕೊಳ್ಳಬೇಕಾದರೆ ೧೨ ರಿಂದ ೧೮ ಪರ್ಸೆಂಟ್‌ವರೆಗೂ ಬಡ್ಡಿ ಕೊಡಬೇಕಾಗಿದೆ. ಅದಕ್ಕೆ ಪೀನಲ್ ಇಂಟರೆಸ್ಟ್ ಬಿದ್ದರೆ ೩೦ ಪರ್ಸೆಂಟ್‌ವರೆಗೂ ಹೋಗುತ್ತದೆ. ಅಂದರೆ ನಮ್ಮ ಕಡೆ ಪಠಾಣ ಖಾತೆ ಎಂದು ಹೇಳುತ್ತಾರೆ. ಈ ಪಠಾಣ ಇವತ್ತು ಕೊಟ್ಟು ಒಂದು ತಿಂಗಳಲ್ಲಿ ಬಡ್ಡಿ ಸಮೇತ ವಸೂಲ್ಮಾಡುತ್ತಾನೆ. ಅದೇ ಪ್ರಕಾರ ಈ ಕೋ-ಆಪರೇಟಿವ್ ಸೊಸೈಟಿಗಳಿಗೂ ದೊಡ್ಡ ಸಾಹುಕಾರರಾಗುತ್ತಿವೆಯೆಂದು ಹೇಳಬಹುದು. ಇದರಲ್ಲಿ ಏನು ಲಾಭ ಬರುತ್ತದೆ ಅದನ್ನು ಯಾವ ರೀತಿ ಖರ್ಚು ಮಾಡಬೇಕೋ ಆ ರೀತಿ ಖರ್ಚು ಮಾಡುತ್ತಿಲ್ಲ ಎಂಬುದನ್ನು ನಾವು ನೋಡುತ್ತಿದ್ದೇವೆ. ಇದನ್ನು ನೋಡಿದರೆ ವಾಸ್ತವಿಕವಾಗಿ ಏನು ಕೆಲಸಕಾರ್ಯ ಆಗಬೇಕೋ ಅದು ಆಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಇದುವರೆಗೂ ನಮ್ಮ ರೈತರಿಗೆ ಗೋಡೌನ್‌ಗಳು ಇಲ್ಲದ ಕಾರಣ, ರಸ್ತೆಗಳು ಇಲ್ಲದ ಕಾರಣ ಅವರಿಗೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ತಾವು ನೋಡಬೇಕು. ಒಬ್ಬ ಬಡರೈತ ತಾನು ಬೆಳೆದ ಮಾಲನ್ನು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗೆ ತರಬೇಕಾದರೆ ಒಂದು ಚೀಲಕ್ಕೆ ಸರಾಸರಿ ೨೫-೩೦ ರೂ. ವರೆಗೂ ಖರ್ಚು ಬೀಳುತ್ತದೆ. ಇವತ್ತು ಶೇಕಡ ೮೦ರಷ್ಟು ಮಾರ್ಕೆಟಿಂಗ್ ಸೊಸೈಟಿಗಳು ಡೀಫಂಕ್ಟ್ ಆಗಿದ್ದು ಕೆಲಸವನ್ನೇ ಮಾಡುತ್ತಿಲ್ಲ. ನನ್ನ ಭಾಲ್ಕಿ ತಾಲ್ಲೂಕಿನಲ್ಲಿ ಗೋಡೌನ್‌ಗಳನ್ನು ಕಟ್ಟಿಸಿ ೧೦ ವರ್ಷವಾಯಿತು. ಅಲ್ಲಿ ಎಣ್ಣೆ ತೆಗೆಯುವ ಒಂದು ಮಿಲ್ಲನ್ನು ಹಾಕಿದ್ದಾರೆ. ಆ ಮಿಲ್ಲು ಸುಮಾರು ೮ ವರ್ಷದಿಂದ ಮುಚ್ಚಿದ್ದು ಅಲ್ಲಿ ಕೆಲಸ ಮಾಡುವವರು ಯಾರೂ ಇರುವುದಿಲ್ಲ. ಅಲ್ಲಿರತಕ್ಕವರು ಸಕ್ಕರೆ ಮುಂತಾದುವನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ತಮ್ಮ ಜೀವನ ನಡೆಸುತ್ತಿದ್ದಾರೆ. ಇದನು ನೋಡಿದರೆ ಸಹಕಾರ ಸಂಘಗಳ ಉದ್ದೇಶ ಸಾರ್ಥಕವಾಗುತ್ತಿಲ್ಲವೆಂದು ನಾನು ಹೇಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ಪ್ರಸಂಗ ಇಲ್ಲಿ ಬಂದಿದೆ. ಅದು ಯಾವುದೆಂದರೆ ಅಮಾಲ ಮೋಷನ್ ಪ್ರಶ್ನೆ. ಸೊಸೈಟಿಗಳು ಸರಿಯಾಗಿ ನಡೆಯುತ್ತಿಲ್ಲ ಆದ್ದರಿಂದ ಅವುಗಳನ್ನೆಲ್ಲಾ ಅಮಾಲ್ಗಮೇಟ್ ಮಾಡಬೇಕೆಂದು, ನಾಲ್ಕಾರು ಸೊಸೈಟಿಗಳನ್ನು ಸೇರಿ ಒಂದನ್ನು ಮಾಡುವ ಕೆಲಸ ಮಾಡುತ್ತಿದ್ದೀರಿ. ಈ ರೀತಿ ಮಾಡಿದ್ದರಿಂದ ಆ ಸೊಸೈಟಿಗಳ ಪರಿಸ್ಥಿತಿ ಮತ್ತೆ ಕೆಟ್ಟುಹೋಯಿತು. ಕಾರಣ ಚೆನ್ನಾಗಿ

ನಡೆಯುತ್ತಿದ್ದ ಸೊಸೈಟಿಗಳ ಜೊತೆಗೆ ಡಿಫಾಲ್ಟ ಆಧಂಥ. ಆದಂಥ ಡೀಫುಕ್ ಸೊಸೈಟಿಗಳನ್ನು ಸೇರಿಸಿದ್ದರಿಂದ. ಸಹಕಾರ ಸಂಘದಲ್ಲಿ ಕೇಂದ್ರಿಕೃತವಾಗಿದ್ದ ಅಧಿಕಾರವನ್ನು ವಿಕೇಂದ್ರೀಕರಣಮಾಡಿ ಜನರಿಗೆ ಆರ್ಥಿಕ ಸ್ವಾತಂತ್ರ್ಯ ಕೊಡಬೇಕೆಂದು ಮಾಡಿದ್ದರೂ ಸರ್ಕಾರ ಇಂಥ ನಿಯಮಾವಳಿಗಳನ್ನು ಮಾಡಿ ಸಹಕಾರ ಸಂಘದ ಉದ್ದೇಶವನ್ನು ಕೆಡಿಸಿತು. ಸೆಕ್ಷನ್ ೧೪(ಎ), ೨೯(ಎ), ೫೩(ಎ), ೧೨೮(ಎ) ಈ ಕಾನೂನುಗಳಿಗೆ ತಿದ್ದುಪಡಿಯನ್ನು ತಂದು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದರಿಂದ ಈ ಪರಿಸ್ಥಿತಿ ಬಂತು ಎಂದು ನಾನು ಹೇಳಬೇಕಾಗಿದೆ. ಇವತ್ತು ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ೪೦ ಪರ್ಸೆಂಟ್ ಏನು ರಿಕವರಿ ಆಗಬೇಕಾಗಿತ್ತು ಅದು ಆಗುತ್ತಿಲ್ಲ. ರೈತರಿಗೆ ಒಳ್ಳೆಯ ಬೀಜ ಸಿಕ್ಕುತ್ತಿಲ್ಲ. ರೈತರಿಗೆ ಸಿಕ್ಕುತ್ತಿದ್ದ ಭಾವಿ ಸಾಲ ಸಿಕ್ಕುತ್ತಿಲ್ಲ. ಸುಮಾರು ೭೫ ಭಾಗ ಭಾವಿಗಳು ವಿಫಲವಾಗಿವೆ. ಯಾವ ಭಾವಿಗಳು ಫೇಲ್ ಆಗಿವೆ ಅಂಥ ರೈತರಿಂದ ನಾವು ರೊಕ್ಕವನ್ನು ಬೇಡುವುದಿಲ್ಲವೆಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು ಆದರೆ ಇನ್‌ಸ್ಪೆಕ್ಟರ್ ಕಡೆಯಿಂದ ಸರಿಯಾದ ಸಮಯದಲ್ಲಿ ತಮಗೆ ಇನ್‌ಫರ್ಮೇಷನ್ ಬರಲಿಲ್ಲವೆಂದು ಪಿ.ಎಲ್.ಡಿ. ಬ್ಯಾಂಕ್‌ನವರು ಹಾಗೂ ಇತರೇ ಷೆಡ್ಯೂಲ್ಡ್ ಬ್ಯಾಂಕ್‌ನವರು ಬಡ ರೈತರಿಂದ ಬಡ್ಡಿ ಸಹಿತ ಸಾಲವನ್ನು ವಸೂಲ್ಮಾಡುತ್ತಿದ್ದಾರೆ.

ಸ್ವಾಮಿ ನಮ್ಮ ಹಿಂದು ಧರ್ಮಶಾಸ್ತ್ರದಲ್ಲಿ ಹಿಂದಿನಿಂದಲೂ ಬಡ್ಡಿಯನ್ನು ತೆಗೆದುಕೊಳ್ಳಬಾರದು ಎಂದು ಇದೆ. ಅದೇ ರೀತಿಯಲ್ಲಿ ಮುಸಲ್ಮಾನರ ಧರ್ಮ ಶಾಸ್ತ್ರದಲ್ಲಿಯೂ ಕೂಡ ಬಡ್ಡಿಯನ್ನು ತೆಗೆದುಕೊಳ್ಳಬಾರದೆಂದು ಇದೆ. ಈವಾಗ ಏನಾಗಿದೆ ಎಂದರೆ "ದಾಮ್ ದುಪ್ಪಟ್ ಗಲ್ಲ ತಿಪ್ಪಟ್" ಎಂದು ನಮ್ಮಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಹೇಳುತ್ತಾರೆ ಸ್ವಾಮಿ ೩೦ ವರ್ಷಗಳಿಂದ ಬಡ್ಡಿಯನ್ನು ಕೊಡುತ್ತಿದ್ದು ಲೋನ್ ಹಾಗೆಯೇ ಉಳಿದಿದೆ ಎಂದರೆ ಭಾರತದಲ್ಲಿ ತಮಗಿಂತ ಅನ್ಯಾಯ ಯಾರೂ ಮಾಡುತ್ತಿಲ್ಲ, ನಮ್ಮ ಸಹಕಾರಿ ಸಂಸ್ಥೆಗಳಲ್ಲಿ ಕಾನೂನು ಪ್ರಕಾರ ಇಂಟರೆಸ್ಟ್ ಪೀನಲ್ ಇಂಟರೆಸ್ಟ್ ಪರ್ಸೆಂಟೇಜ್ ವಸೂಲಿ ಇವೆಲ್ಲವನ್ನು ನೋಡಿದರೆ ೩-೪-೫ ಪಟ್ಟು ಜಾಸ್ತಿಯಾಗುತ್ತಿದೆ ಎನ್ನುವ ಮಾತಂತ್ತು ಸ್ಪಷ್ಟವಾಗಿ ಕಾಣುತ್ತಿದೆ, ಇದು ರಾಮರಾಜ್ಯವೆಂದು ಹೇಳಿಕೊಳ್ಳತಕ್ಕಂಥ ಕಾಲಕ್ಕೆ. ಇದು ಸಮಾಜವಾದ ರಾಷ್ಟ್ರವೆಂದು ಹೇಳುವ ಕಾಲಕ್ಕೆ ಜನರ ಮೇಲೆ ಈ ಪ್ರಕಾರವಾಗಿ ಹೊರೆಯನ್ನು ಹಾಕುವುದು ಅನ್ಯಾಯ ಎನ್ನುವ ಮಾತನ್ನು ಸರ್ಕಾರಕ್ಕೆ ನಾನು ಹೇಳಬೇಕಾಗಿದೆ.

ಅಧ್ಯಕ್ಷರು,—ರಾಮರಾಜ್ಯವೆಂದು ಎಲ್ಲೂ ಹೇಳಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಈವತ್ತು ರಾಮರಾಜ್ಯ ಇಲ್ಲ ಬಿಡಿ. ರಾಮರಾಜ್ಯವೆಂದು ಹೇಳಿದಂಥ ಮಹಾತ್ಮಾಗಾಂಧಿಯವರು ಮತ್ತು ಜವಹರಲಾಲ್ ಪಂಡಿತರೂ ಕೂಡ ಉಳಿದಿಲ್ಲ. ಅವರ ಜೊತೆಗೆ ಆ ಒಂದು ಸಂಸ್ಕೃತಿ ಮತ್ತು ಸಿದ್ಧಾಂತ ಹೊರಟು ಹೋಯಿತು ಎನ್ನುವ ಮಾತನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ನಾನು ಜರ್ಮನ್‌ಗೆ ಹೋಗಿದ್ದಾಗ, ಅವರು ಎಷ್ಟು ಬಡ್ಡಿ ನಿರ್ದಿಷ್ಟವಾಗಿ ತೆಗೆದುಕೊಳ್ಳುತ್ತಾರೆಂದು ಕೇಳಿದಾಗ ಯಾವುದೇ ಬಡ್ಡಿಯನ್ನು ತೆಗೆದುಕೊಂಡರೂ ಎರಡು ಪರ್ಸೆಂಟ್ ಇಂಟರೆಸ್ಟ್ ಮೇಲೆ ತೆಗೆದುಕೊಳ್ಳುವ ಹಾಗಿಲ್ಲವೆಂದು ಗೊತ್ತಾಯಿತು, ನಮ್ಮಲ್ಲಿರುವುದು ೧೮ ಪರ್ಸೆಂಟ್‌ನಿಂದ ೨೦ ಪರ್ಸೆಂಟ್‌ವರೆಗೆ ಬಡ್ಡಿಯನ್ನು ವಸೂಲು ಮಾಡುತ್ತೇವೆಂದರೆ ಯಾವಪ್ರಕಾರವಾಗಿ ಸಮಾಜವಾದವನ್ನು ತರುತ್ತೇವೆ ? ಯಾವ ಪ್ರಕಾರವಾಗಿ ನಮಗೆ ಸ್ವಾತಂತ್ರ್ಯವನ್ನು ಕೊಡುತ್ತೀರ ಎನ್ನುವ ಮಾತನ್ನು ನಾವು ವಿಚಾರಮಾಡಬೇಕಾಗಿದೆ. ಸ್ವಾಮಿ ತಾವು ಸಹಕಾರಿ ಆಂಧೋಳನವೆಂದು ಪ್ರಾರಂಭ ಮಾಡಿದಿರಿ. ಈ ಆಂಧೋಳನ ಯಶಸ್ವಿಯಾಗಿ ಆಗಬೇಕಾದರೆ ಎಲ್ಲ ವಿಚಾರಗಳಲ್ಲೂ ಸರ್ಕಾರಿ ಆಫೀಸರುಗಳಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸ್ಟ್ರಿಕ್ಟ ಆಗಿ ಇನ್‌ಸ್ಟ್ರಕ್ಷನ್ ಕೊಡಬೇಕು; ಡೈರೆಕ್ಷನ್ ಕೊಡಬೇಕು ಅದರ ಜೊತೆಗೆ ಟೈಮ್ ಬೌಂಡ್ ಹಾಕಿಕೊಳ್ಳಬೇಕು ಪ್ರೋಗ್ರಾಮ್ ಪ್ರಕಾರ ಸಾಲ ಕೊಟ್ಟಿದ್ದಾರೆಯೋ ಮತ್ತು ಅದನ್ನು ವಸೂಲು ಮಾಡಿದ್ದಾರೆಯೋ ಎನ್ನುವುದನ್ನು ಕೊಡಬೇಕು. ಸನ್ ಮಾನ್ಯ ಅಧ್ಯಕ್ಷರೇ ಈ ಒಂದು ಸಂದರ್ಭದಲ್ಲಿ ಹೇಳುವುದಾದರೆ ಜನರು ಎಲ್ಲಿ ಹೋದರೂ ಮೊದಲು ಕಾನೂನನ್ನು ಸ್ಟ್ರಿಕ್ಟ ಆಗಿ ಸರ್ಕಾರಿ ಅಧಿಕಾರಿಗಳು ಫಾಲೋ ಮಾಡುತ್ತಿಲ್ಲವೆಂದು; ಹೇಳುತ್ತಿದ್ದಾರೆ. ವೇಳೆಗೆ ಸರಿಯಾಗಿ ಹಣವನ್ನು ಕೊಡುತ್ತಿಲ್ಲ. ಈ ಕಾರಣಕ್ಕಾಗಿ ಬೆಳೆದಂತಹ ಬೆಳೆಗಳು ಒಣಗಿಹೋಗುತ್ತಿವೆ. ಇದಕೆ ಜವಾಬ್ದಾರರು ಯಾರು ಎನ್ನುವ ಮಾತನ್ನು ಕೇಳುತ್ತಿದ್ದಾರೆ. ಸರ್ಕಾರ ಇದೆ, ಆಫೀಸರ್‌ಗಳು ಇದ್ದಾರೆ, ಆದರೆ ವೇಳೆಗೆ ಸರಿಯಾಗಿ ಸಾಲ ವಗೈರೆಗಳು ರೈತರಿಗೆ ಸಿಗುತ್ತಿಲ್ಲ. ಇದಕ್ಕಾಗಿ ಈ ಒಂದು ಕಾನೂನಿಗೆ ತಿದ್ದುಪಡಿಯನ್ನು ತರಬೇಕು. ಯಾರೂ ಆಫೀಸರ್ ತಮ್ಮ ಕೆಲಸದಲ್ಲಿ ಫೆಲ್ಯೂರ್ ಆಗ್ನ

ತ್ತಾರೆ ಅಂಥ ಸಮಯದಲ್ಲಿ ಅಂಥವರ ಮೇಲೆ ಫೆನಾಲ್ಟಿಯನ್ನು ಹಾಕಿದರೆ ಮಾತ್ರ ಅವರನ್ನು ತಹಬಂದಿಗೆ ತರಲು ಸಾಧ್ಯವಾಗುತ್ತದೆ. ಮತ್ತು ಅವರಿಂದ ಸರಿಯಾಗಿ ಕೆಲಸ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಒಂದು ಸಲಹೆಯನ್ನು ಮಾಡಲು ಇಚ್ಛೆಪಡುತ್ತೇನೆ.

ಸ್ವಾಮಿ, ಇವತ್ತಿನ ದಿವಸ ಕೋ ಆಪರೇಟೀವ್ ಸೊಸೈಟಿಗಳು ಸರಿಯಾಗಿ ನಡೆಸಬೇಕಾದರೆ ಶುಗರ್ ಫ್ಯಾಕ್ಟರಿಗಳು ಸರಿಯಾಗಿ ನಡೆಸಬೇಕಾದರೆ ಒಂದು ಮಾತನ್ನು ತಮ್ಮಲ್ಲಿ ಹೇಳಬೇಕಾಗಿದೆ ಮಾನ್ಯ ಶ್ರೀಕಂಠಯ್ಯನವರು ಬಹಳ ಒಳ್ಳೆಯಜನರು ಇದ್ದಾರೆ, ಒಳ್ಳೆಯ ಕಾರ್ಯಕರ್ತರು, ವಾಸ್ತವಿಕತೆಯನ್ನು ಅರಿತು ಕೆಲಸ ಮಾಡತಕ್ಕಂಥವರು ಮಾರ್ಕೆಟಿಂಗ್‌ಸೆಸ್ ಎಂದು ೧೫ ಪರ್ಸೆಂಟ್ ವಸೂಲು ಮಾಡುತ್ತಿದ್ದಾರೆ, ಇದು ಹೈಕೋರ್ಟಿನಲ್ಲಿ ಇ ಲ್ಲಿಗಲ್ ಎಂದು ಡಿಕ್ಲೇರ್ ಮಾಡಿದ್ದಾರೆ, ೧೫ ಕೋಟಿ ರೂಪಾಯಿಗಳನ್ನು ವಾಪಸ್ ಮಾಡಲು ಡೈರೆಕ್ಷನ್ ಕೊಟ್ಟಿದ್ದಾರೆ. ಇದಕ್ಕೆ ಒಂದು ತಿದ್ದುಪಡಿ ತಂದು ನಮ್ಮ ಮಾನ್ಯ ಸಚಿವರು ವಾಪಸ್ ಕೊಡಲು ಸಾಧ್ಯವಾಗಲಿಲ್ಲ. ಸಾವಿರಾರು ಜನ ಲಕ್ಷಾವಧಿ ಜನರಿಂದ ಮಾರ್ಕೆಟ್ ಸೆಸ್ ಎಂದು ವಸೂಲು ಮಾಡಿದರು. ಮತ್ತೆ ಒಂದು ಮಾತನ್ನು ಹೇಳಬೇಕಾಗಿದೆ, ತಾವು ಇದಕ್ಕೆ ಉತ್ತರವನ್ನು ಕೊಡಬೇಕು. ಈ ೧೫ ಕೋಟಿ ರೂಪಾಯಿಗಳನ್ನು ನೀವು ವಾಪಸ್ ಕೊಡದಿದ್ದರೆ ಇದು ಇಲ್ಲಿಗಲ್ ಆಗುತ್ತದೆ. ರೈತರಿಂದ ವಸೂಲು ಮಾಡಿದಂಥ ಹಣ ಕೊಡದೇ ಇದ್ದಪಕ್ಷದಲ್ಲಿ ಕೊನೆಪಕ್ಷ ಆ ೧೫ ಕೋಟಿ ರೂಪಾಯಿಗಳನ್ನು ಎಲ್ಲೆಲ್ಲಿ ವಸೂಲಿ ಮಾಡಿದರೋ ಅಲ್ಲಿ ರೋಡ್‌ಗಳನ್ನು ಮಾಡುವುದಕ್ಕಾದರೂ ಉಪಯೋಗಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಇದನ್ನು ಎಲ್ಲರೂ ಸ್ವಾಗತ ಮಾಡುತ್ತಾರೆಂದು ತಿಳಿದಿರುತ್ತೇನೆ ಮತ್ತು ಮಾನ್ಯ ಸಚಿವರೂ ಕೂಡ ಇದನ್ನು ಒಪ್ಪುತ್ತಾರೆಂದು ತಿಳಿದಿರುತ್ತೇನೇ ಎಲ್ಲಿ ಯಾವ ಮಾರ್ಕೆಟ್‌ನಲ್ಲಿ ಈ ರೀತಿಯಾದ ಸಸ್‌ನ್ನು ವಸೂಲೂ ಮಾಡಿರುತ್ತಾರೋ ಅಷ್ಟೇ ಹಣವನ್ನು ಖರ್ಚು ಮಾಡಿದರೆ ಅವರಿಗೆ ಸೌಲಭ್ಯ ದೊರಕುತ್ತದೆ ಈಗ ನೀವು ಹಾಕುತ್ತಿರತಕ್ಕಂಥ ಮಾರ್ಕೆಟಿಂಗ್ ಸೆಸ್ ಡಬ್ಬಲ್ ಆಗಿರುತ್ತದೆ ಮಹಾರಾಷ್ಟ್ರದಲ್ಲಿ ಆಂಧ್ರದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಯಾವರೀತಿ ಸೆಸ್ ಹಾಕಿದ್ದಾರೋ ಆ ಪ್ರಕಾರವಾಗಿ ಮಾಡಿದರೆ ಒಳ್ಳೆಯದೆಂದು ಹೇಳುತ್ತಿದ್ದೇನೆ. ಅಷ್ಟೆ ಸೆಸ್ ಹಾಕಿ ಕಲೆಕ್ಟ್ ಮಾಡಿದರೂ ಕೋಟಿಯಾಂತರ ರೂಪಾಯಿ ಸರ್ಕಾರಕ್ಕೆ ಬರುತ್ತದೆ. ಅವರಿಗೂ ಸವಲತ್ತುಗಳು ಕೋಟಿಯಾಂತರ ಸಿಕ್ಕಂತಾಗುತ್ತದೆ ನಾನು ತಮ್ಮ ಮುಖಾಲಕ ಈ ಮಾತನ್ನು ಕೇಳುತ್ತಾ ಇದ್ದೇನೆ. ದಯವಿಟ್ಟು ಉತ್ತರ ಕೊಡುವಾಗ ಈ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ೧೫ ಕೋಟಿ ರೂಪಾಯಿಗಳು ಈಗ ನೀವು ಏನು ತೆಗೆದುಕೊಂಡಿರುತ್ತೀರಿ ಅದನ್ನು ಹೈಕೋರ್ಟ್ ಇಲ್‌ಲೀಗಲ್ ಎಂದು ಡಿಕ್ಲೇರ್ ಮಾಡಿದೆ. ಆ ಹಣವನ್ನು ಯಾವ ಯಾವ ಮಾರ್ಕೆಟ್‌ನಿಂದ ಎಷ್ಟು ವಸೂಲಿ ಮಾಡಿದ್ದೀರಿ ಎಂಬುದರ ಬಗ್ಗೆ ಯೂ ಪ್ರಶ್ನೆಯನ್ನು ಕೇಳಿದ್ದೇವೆ, ಶ್ರೀಮಾನ್ ಜಕ್ಕನೂರ್‌ರವರು ಕೋ ಆಪರೇಟೀವ್ ಮಿನಿಸ್ಟರ್ ಆಗಿದ್ದಾಗ್ಯೆ ಉತ್ತರವನ್ನು ಕೊಟ್ಟು ಈ ರೀತಿ ಹೇಳಿದ್ದರು ನಾವು ವಿಶ್ವಬ್ಯಾಂಕ್‌ನಿಂದ ಎಷ್ಟು ಹಣವನ್ನು ತಂದಿದ್ದೇವೋ ಅಷ್ಟು ಹಣವನ್ನು ಮಾತ್ರ ಕೊಟ್ಟಿದ್ದೇವೆಂದು ಹೇಳಿದರು ಒಂದು ಪ್ರಶ್ನೆಯನ್ನು ಕೇಳಿದರೆ ಒಂದು ರೀತಿ ಉತ್ತರ. ವಿಶ್ವಬ್ಯಾಂಕ್‌ನಿಂದ ತಂದಂಥ ಲೋನ್ ಖರ್ಚು ಮಾಡಿ ಎಂದು ಕೇಳುತ್ತಿಲ್ಲ, ನಾವು ಕೇಳುತ್ತಿರುವುದು ನೀವು ರೈತರಿಂದ ಮಾರ್ಕೆಟ್ ಸೆಸ್ ಎಂದು ವಸೂಲು ಮಾಡಿದರಲ್ಲ ಅದನ್ನು ಖರ್ಚು ಮಾಡಿದಿರಾ ಎಂದು ಕೇಳಿದರೆ ಅದಕ್ಕೆ ಉತ್ತರವಿಲ್ಲ. ಮಾನ್ಯ ಶ್ರೀಕಂಠಯ್ಯನವರಿಗೆ ಕೇಳುತ್ತಿದ್ದೇನೆ. ೧೨ ಕೋಟಿ ಹಣವನ್ನು ಮಾರ್ಕೆಟಿಂಗ್ ಸೆಸ್ ಎಂದು ಏನು ತೆಗೆದುಕೊಂಡಿರುತ್ತೀರಿ ಅದನ್ನು ಅಯಾ ಮಾರ್ಕೆಟ್ ಸುತಮುತ್ತಲೂ ಬರತಕ್ಕಂಥ ರೈತರಿಗೆ ಅನುಕೂಲವಾಗಲು ರಸ್ತೆಗಳನ್ನು ಮಾಡಬೇಕು, ಕೃಷಿ ಭವನವನ್ನು ಈ ಎಲ್ಲ ಸವಲತ್ತುಗಳನ್ನು ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ತಾವು ಕೊಡಬೇಕು. ಇದರ ಜೊತೆಗೆ ಶ್ರೀಮಾನ್ ಶ್ರೀಕಂಠಯ್ಯನವರನ್ನು ಕೇಳುತ್ತಿದ್ದೇನೆ. ೧೫-೨೦ ಕೋಟಿ ಸಕ್ಕರೆ ಫ್ಯಾಕ್ಟರಿಗಳಿಂದ ತಾವು ಏನು ವಸೂಲು ಮಾಡಿರುತ್ತೀರಿ ಅದನ್ನು ಹೈಪವರ್ ಕಮಿಟಿಯಲ್ಲಿ ಇಟ್ಟು ಎರಡು ಪರ್ಸೆಂಟ್ ನಿಮಗೆ ಎರಡು ಪರ್ಸೆಂಟ್ ನಮಗೆ, ನಾಲ್ಕು ಪರ್ಸೆಂಟ್ ಆದರೆ ವರ್ಷಕ್ಕೆ ೨೦ ಕೋಟಿ ರೂಪಾಯಿಗಳು ಬರುತ್ತದೆ. ಇದನ್ನು ಶುಗರ್ ಫ್ಯಾಕ್ಟರಿಯ ಸುತ್ತಮುತ್ತಲೂ ಇರತಕ್ಕಂಥ ರೋಡುಗಳಿಗಾಗಿ ಖರ್ಚು ಮಾಡುತ್ತೇವೆಂದು ಪ್ರಾಮಿಸ್ ಮಾಡಿ ಹೇಳಿದರು. ಈರೀತಿ ಹೇಳಿ ೧೦ ವರ್ಷ ಆಯಿತು. ೮-೯ ವರ್ಷಗಳಿಂದಲೂ ಜನರಿಗೆ ಕೊಡವುದು ಮಾತ್ರ ಆಗಲಿಲ್ಲ. ೯ ಲಕ್ಷ ಕೊಡುವುದಕ್ಕೆ ಬದಲಾಗಿ ೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಯೇ ಹೊರತು ಹೆಚ್ಚಿಗೆ ಏನು ಕೊಟ್ಟಿಲ್ಲ ನಾವು ಇದನ್ನು ಹೇಳುವುದಕ್ಕೆ ಸ್ವಲ್ಪ ಸಂಕಟವಾಗುತ್ತದೆ, ತಾವು ಪ್ರಾಮಿಸ್ ಮಾಡಿದ್ದೀರಿ ಆ ಪ್ರಾಮಿಸ್ ಪ್ರಕಾರ ಆ ಹಣವನ್ನು ಈವತ್ತಾದರೂ

ಈವರ್ಷದಲ್ಲಿಯಾದರೂ ಶುಗರ್ ಫಾಕ್ಟರಿಯ ಸುತ್ತಮುತ್ತಲೂ ಖರ್ಚು ಮಾಡುತ್ತೀರೆಂದು ತಿಳಿದು ಕೊಂಡಿದ್ದೇನೆ. ೧೫ ಲಕ್ಷ ರೂಪಾಯಿಗಳನ್ನು ಸುಮ್ಮನೇ ವೇಸ್ಟ್ ಮಾಡುತ್ತಿದ್ದೀರಿ. ಇದು ಒಳ್ಳೆಯು ದಲ್ಲವೆಂದು ಹೇಳುತ್ತಿದ್ದೇನೆ. ಶ್ರೀಮಾನ್ ಶ್ರೀಕಂಠಯ್ಯನವರು ಸುಮಾರು ೧೨ ಕೋಟಿ ರೂಪಾಯಿಗ ಳನ್ನು ರೋಡ್‌ಗಳ ಸಲುವಾಗಿ ತೆಗೆದುಕೊಂಡರೆ ಅದನ್ನು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಎರಡನೆಯದಾಗಿ ಶ್ರೀಮಾನ್ ಶ್ರೀಕಂಠಯ್ಯನವರು ಗೌವರ್ನಮೆಂಟ್ ಪಿ. ಡಬ್ಲ್ಯು. ಡಿ. ಮಿನಿಸ್ಟರ್ ಮೇಲೆ ಇನ್‌ಫ್ಲೂಯೆನ್ಸ್ ಬೀರೆ ಮಾಡಿ ನಮ್ಮದು ಜಸ್ಟಿಫೈಡ್ ಡಿಮ್ಯಾಂಡ್ ಇದೆ. ನಮ್ಮ ಹತ್ತಿರ ಹೇಗೆ ವಸೂಲು ಮಾಡಿದರೋ ಅದೇ ಪ್ರಕಾರವಾಗಿ ಹಣವನ್ನು ಎಲ್ಲಾ ಮಾರ್ಕೆಟಿಂಗ್ ಸೊಸೈಟಿ ಗಳಿಗೆ ಕೊಡುವ ಬಗ್ಗೆ ನಮಗೆ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಈವತ್ತಿನ ದಿನ ಕೇಳಿಕೊಳ್ಳು ತ್ತಿದ್ದೇನೆ ಈವತ್ತಿನ ದಿವಸ ತಮ್ಮ ಮುಂದೆ ಹೇಳುತ್ತಿದ್ದೇನೆ. ೫ ಸಾವಿರ ಬೆಲೆಬಾಳತಕ್ಕಂಥ ಎತ್ತುಗ ಳನ್ನು ಮಾರಾಟ ಮಾಡಬೇಕೆಂದು ಹೋದರೆ ಆದಕ್ಕೆ ಪರ್ಚೇಸ್ ಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್- ಎಂದು ಎರಡೂ ಟ್ಯಾಕ್ಸ್‌ಗಳನ್ನು ಹಾಕುತ್ತಿರುತ್ತೀರಿ ಇವರೆಡನ್ನೂ ಸೇರಿಸಿದರೆ ರೈತ ೨೦೦ನ್ನ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ನಾನಯ್ಯನವರಿಗೆ ಉತ್ತರ ಕೊಡುವಾಗ ನಾನು ಇರಲಿಲ್ಲ, ಎಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಎಷ್ಟು ಅಗ್ರಿಕಲ್ಚರ್ ಏಕ್ಸ್‌ಪರ್ಟ್ ಕಮಿಟಿಯವರು ರೆಕಮೆಂಡೇಷನ್ ಮಾಡಿರುತ್ತಾರೆ ೨೦ ಪೈಕಿ ತಾವು ೧೦ ಮಾಡಿದ್ದೀರಿ. ಇನ್ನೂ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿರುತ್ತೀರಿ ಇದರಲ್ಲಿ ೧೯ನೇ ಮೇ ೧೯೮೨ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಾಲ್ಕಿಗೆ ಬಂದಾಗ ೨೫ ಸಾವಿರ ಜನ ರೈತರು ಬಂದು ಅವರಿಗೆ ತಿಳಿಸಿದರು, ರೆಪ್ರಸೆಂಟೇಷನ್ ಮಾಡಿದರು, ಮಹಾರಾಷ್ಟ್ರದಲ್ಲಿ ೩೫ ಪೈಸೆ ಮಾರ್ಕೆಟ್ ಸೆಸ್ ಇದ್ದರೆ, ಆಂಧ್ರದಲ್ಲಿ ೧೦೦ ರೂಪಾಯಿಗಳಿಗೆ ೫೦ ಪೈಸೆ ಇದೆ. ನಮ್ಮ ಕರ್ನಾಟಕದಲ್ಲಿ ೨ ರೂಪಾಯಿ ಗಳು ಇರುತ್ತದೆ. ಅದಕಾರಣ ಇಲ್ಲಿಯ ಎಲ್ಲಾ ಜನರು ಅಲ್ಲಿಗೆ ಮಾಲನ್ನು ಹೊಯ್ಯುವ ಕಾರಣ ಸರ್ಕಾ ರಕ್ಕೆ ತುಂಬಾ ಲಾಸ್ ಆಗುತ್ತಾ ಇದೆ. ಅದರ ಜೊತೆಗೆ ವ್ಯಾಪಾರ ಮಾಡುವ ಜನರು ಎರಡು ರೂಪಾ ಯಿಗಳನ್ನು ಉಳಿಸಿ ಕೊಳ್ಳುವ ಸಲುವಾಗಿ ಬ್ಲಾಕ್ ಮಾರ್ಕೆಟ್ ವ್ಯವಹಾರದಲ್ಲಿ ತೊಡಗುತ್ತಾರೆ ಇದಕ್ಕೆ ಮೊದಲು ೫ ಲಕ್ಷ ರೂಪಾಯಿಗಳು ವರ್ಷದಲ್ಲಿ ಇನ್‌ಕಮ್ ಇದ್ದುದು ಯಾವಾಗ ೫೦ ಪೈಸೆ ಇದ್ದಿತೋ ಆವಾಗ ೫ ಲಕ್ಷ ರೂಪಾಯಿ ಇನ್‌ಕಮ್ ಇದ್ದುದು ನೀವು ಕೋ ಆಪರೇಟೀವ್ ಮಿನಿಸ್ಟರಾಸೆ ಆದಾಗ ಹೆಚ್ಚಿಸಿದ್ದರಿಂದ ೫ ಲಕ್ಷ ಇನ್‌ಕಮ್ ಇದ್ದುದು ಮೂರು ಲಕ್ಷ ರೂಪಾಯಿಗಳಿಗೆ ಇಳಿಯಿತು. ನಮ್ಮ ಸರ್ಕಾರದ ಬುದ್ಧಿವಂತಿಕೆ ಏನೆಂದರೆ ೫ ಲಕ್ಷ ರೂಪಾಯಿ ಸರಿಯಾದ ರೀತಿಯಲ್ಲಿ ಆಗುತ್ತಾ ಇದ್ದುದು ಮೂರು ಲಕ್ಷಕ್ಕೆ ಇಳಿಯುವುದರಲ್ಲಿ ಕಾರಣ ೫೦ ಪರ್ಸೆಂಟ್ ಜನ ಮಹಾರಾಷ್ಟ್ರದಲ್ಲಿ ಹೋಗಿ ತಮ್ಮ ಮಾಲನ್ನು ಮಾರಾಟ ಮಾಡುತ್ತಿರುತ್ತಾರೆ. ೫೦ ಪೈಸೆ ಇರತಕ್ಕಂಥ ಆಂಧ್ರದಲ್ಲಿ ಹೋಗಿ ಮಾರಾಟ ಮಾಡುತ್ತಿರುತ್ತಾರೆ. ನಮ್ಮಲ್ಲಿ ೫೦ ಪರ್ಸೆಂಟ್, ೩೦ ಪರ್ಸೆಂಟ್, ೪೦ ಪರ್ಸೆಂಟ್ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಿರುವುದಕ್ಕೆ ಅವರು ಲೆಕ್ಕವನ್ನೇ ಕೊಟ್ಟಿಲ್ಲ, ಈ ಪ್ರಕಾರವಾಗಿ ಸರ್ಕಾರ ಪಬ್ಲಿಕ್ ಲಾಸ್ ಹೊಂದುತ್ತಿರುವುದರಲ್ಲಿ ಅರ್ಥವಿಲ್ಲವೆಂದು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ೧೯ನೇ ಮೇ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅವರು ಎರಡು ರೂಪಾಯಿ ಸೆಸ್ ಇರುವಲ್ಲಿ ಒಂದು ರೂಪಾಯಿ ಮಾಡುತ್ತೇವೆಂದು ಹೇಳಿ ನಮಗೆ ಒಂದು ಲೆಟರನ್ನು ಕೂಡ ಬರೆದಿರುತ್ತಾರೆ, 'C M M 554 82 Dt, 9.6.82 Yes. To take necessary action in this regard ಎಂದು ಹೇಳಿ ಎರಡು ರೂಪಾಯಿಯನ್ನು ಒಂದು ರೂಪಾಯಿ ಮಾಡು ತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಮಾನ್ಯ ಶ್ರೀಕಂಠಯ್ಯನವರಿಗೆ ಕಳಕಳಿಯಿಂದ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಏನು ಪ್ರಾಮಿಸ್ ಮಾಡಿದ್ದಾರೆ, ಆ ಪ್ರಕಾರವಾಗಿ ಕೊಡುವುದಕ್ಕೆ ಡಿಕ್ಲೇರ್ ಮಾಡುವುದಕ್ಕೆ ಈದಿನ ಅಸೆಂಬ್ಲಿಯಲ್ಲಿಯೇ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಂಡು ಈವತ್ತಿನ ದಿವಸ ನಾವು ಏನೇನು ನ್ಯೂನ್ಯತೆಗಳನ್ನು ಇದರಲ್ಲಿ ತೋರಿಸಿದ್ದೇವೆ, ಅದನ್ನೆಲ್ಲಾ ಸರಿಪಡಿಸಬೇಕು. ಈಗ ತಂದಿರುವ ಅಮೆಂಡ್‌ಮೆಂಟ್‌ನಿಂದ ಜನರಿಗೆ ಲಾಸ್ ಆಗುತ್ತಿದೆ. ಪ್ರತಿಯೊಂದು ಪಂಚಾಯತಿ ಗಳಿಗೂ ಒಂದು ಸೊಸೈಟಿಯನ್ನು ಇಡಬೇಕೆಂದು ಏನು ಆಶ್ವಾಸನೆ ಕೊಟ್ಟಿದ್ದೀರಿ ಅದು ಆಗಿಲ್ಲ ಇದು ಆಗಬೇಕು, ನಿಮ್ಮದು ಏನು ಸರ್ಕಾರದ ಪಟ್ಟಿ ಇದೆ, ಸರ್ಕಾರದ ಆರ್ಥಿಕ ಪರಿಸ್ಥಿತಿ ಇದೆ ಅದನ್ನು ಒಪ್ಪಿ ಕೊಂಡಿದ್ದೀರಿ. ಇದು ವಿಕೇಂದ್ರೀಕರಣವಾಗಬೇಕು, ಪಂಚಾಯತಿಗಳಿಗೆ ಹೆಚ್ಚಿನ ಹಣವನ್ನು ಕೊಡ

ಬೇಕು. ಅದರ ಜೊತೆಗೆ ತಾಲ್ಲೂಕ್ ಬೋರ್ಡ್ ಅದಕ್ಕೆ ಜಿಲ್ಲಾ ಪರಿಷತ್ತಿಗೆ ಡೈಪುಟಿ ಕಮಿಷನರ್ ಅವರನ್ನೇ ಸೆಕ್ರೆಟರಿಯನ್ನಾಗಿ ಜಿಲ್ಲಾ ಪರಿಷತ್ ಅಧ್ಯಕ್ಷರನ್ನಾಗಿ ಮಾಡಬೇಕು. ಜೊತೆಗೆ ಸೊಸೈಟಿಗಳಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಯಾವುದೇ ನಿರ್ಬಂಧವಿಲ್ಲದೆ, ಯಾರ ಕಂಟ್ರೋಲ್ ಇಲ್ಲದೆ ಸ್ವತಂತ್ರ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಆರ್ಥಿಕ ದೃಷ್ಟಿಯಿಂದ ಅವರು ಮುಂದೆ ಬರಬೇಕಾದರೆ ಯಾವುದೇ ಪೊಲೀಟಿಕಲ್ ಕಂಟ್ರೋಲ್ ಇಲ್ಲದೆ ವಿಕೇಂದ್ರೀಕರಣಮಾಡಿ ಪ್ರತಿಯೊಂದು ಪಂಚಾಯತಿಗೂ, ಪ್ರತಿಯೊಂದು ಸೊಸೈಟಿಗೂ ಸ್ವಲ್ಪ ಹೆಚ್ಚಿನ ಅವಕಾಶಗಳನ್ನು ಕೊಡಬೇಕು. ಈ ಪ್ರಕಾರವಾಗಿ ಮಾಡಿದರೆ ಮಾತ್ರ ಸಹಕಾರಿ ಆಂಧೋಳನ ಯಶಸ್ವಿಯಾಗಿ ಆಗುತ್ತದೆಂದು ಹೇಳುತ್ತೇನೆ.

೬-೦೦ ಪಿ. ಎಂ.

ಜೂನ್ ೩೦ ನೇ ತಾರಿಖಿನೊಳಗೆ ಯಾರ್ಯಾರು ಸಾಲವನ್ನು ಮರುಪಾವತಿ ಮಾಡುತ್ತಾರೆ ಅಂತಹವರಿಗೆ ಸಃಕ್ತಿ ಬಡ್ಡಿಯನ್ನು ಮಾಫಿ ಮಾಡುತ್ತೇವೆಂದು ನೀವು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಅದು ಎಷ್ಟೋ ಜನರಿಗೆ ಗೊತ್ತಿಲ್ಲ. ನಿಮ್ಮ ಅಧಿಕಾರಿಗಳು ಸರಿಯಾದ ತಿಳುವಳಿಕೆಯನ್ನು ಜನರಿಗೆ ಮುಟ್ಟಿಸುತ್ತಿಲ್ಲ. ತಾವೇನೋ ರೂಲ್ಸ್ ಮಾಡಿ ಹೇಳಿ ಬಿಡುತ್ತೀರಿ ಜನರಿಗೆ ಅದು ಮುಟ್ಟುತ್ತಿಲ್ಲ, ಅವರು ಬಡ್ಡಿ ಕಡಿಮೆಯಾಗುತ್ತದೆಂದು ತಿಳಿದುಕೊಂಡು ಹಣವನ್ನು ಬಹಳ ಕಷ್ಟಪಟ್ಟು ಕೂಡಿಸಿ ಸರ್ಕಾರಕ್ಕೆ ಕೂಡುತ್ತಿದ್ದಾರೆ, ಸರ್ಕಾರದಲ್ಲಿ ಹಣವಿಲ್ಲವೇನು ? ಈ ತರಹ ಮಾಡುವುದರಿಂದ ಜನರಿಗೆ ತ್ರಾಸ್ ಆಗುತ್ತದೆ. ಜೂನ್ ೩೦ನೇ ತಾರೀಖಿನೊಳಗೆ ಹಣ ಕೊಡಬೇಕೆನ್ನುವುದನ್ನು ಬಿಟ್ಟು ಈ ವರ್ಷದ ಡಿಸೆಂಬರ್ ೩೧ ನೇ ತಾರಿಖಿನವರೆಗೆ ಮಾಡಿದರೆ ನಿಮ್ಮ ಸಾಲ ವಸೂಲಾಗುತ್ತದೆ. ಸಹಕಾರ ಆಂಧೋಳನ ಪೂರ್ತಿಯಾಗುತ್ತದೆ, ಮಾನ್ಯ ಸಹಕಾರ ಮಂತ್ರಿಗಳು ಮತ್ತು ಮಾರ್ಕೆಟಿಂಗ್ ಮಂತ್ರಿಗಳು ತಂದಂತಹ ಬೇಡಿಕೆಯಲ್ಲಿ ಸರಿಯಾದಂತಹ ಕೆಲಸ ಜನರಿಗೆ ಆಗಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಭೆಯು ಈಗ ಮುಕ್ತಾಯವಾಗಿ, ಪುನಃ ನಾಳೆ ೧ ಗಂಟೆಗೆ ಸೇರುತ್ತದೆ.

ಸಭೆಯು ೬ ಗಂಟೆ ಮೂರು ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ೨೨ನೇ ಜೂನ್ ೧೯೮೨ ರ ಮಂಗಳವಾರದಂದು ೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.